# ಸಮ್ಯಕ್ ಧ್ಯಾನ ಶತಕ



ರಚನೆ


ಆಚಾರ್ಯಶ್ರೀ 108 ಆರ್ಜವಸಾಗರ ಮಹಾರಾಜರು

# ಪ.ಪೂ. ಆಚಾರ್ಯ ಶ್ರೀ 108
# ಆರ್ಜವಸಾಗರ ಮಹಾರಾಜರ
# ಪರಿಚಯ



| | | |
|---|---|---|
| ಜನ್ಮನಾಮ | : | ಪಾರಸಚಂದ ಜೈನ |
| ತಂದೆ | : | ಶ್ರೀ ಶಿಖರಚಂದ ಜೈನ |
| ತಾಯಿ | : | ಶ್ರೀಮತಿ ಮಾಯಾಬಾಯಿ ಜೈನ |
| ಜನ್ಮ ದಿನಾಂಕ | : | 11.09.1967 (ಭಾದ್ರ ಶುಕ್ಲ ಅಷ್ಟಮಿ) |
| ಜನ್ಮಸ್ಥಳ | : | ಘುಟೇರಾ ಕಲಾ, ದಮೋಹ (ಮಧ್ಯ ಪ್ರದೇಶ) |
| ಬಾಲ್ಯದ ದಿನಗಳು | : | ಪಥಾರಿಯಾ, ಜಿಲ್ಲಾ ದಮೋಹ |
| ಶಿಕ್ಷಣ | : | ಬಿ.ಎ., (ಪ್ರಥಮ ವರ್ಷ), ಪದವಿ ಕಾಲೇಜು (ದಮೋಹ) |
| ಬ್ರಹ್ಮಚರ್ಯವ್ರತ | : | 19.12.1984 ಅತಿಶಯ ಕ್ಷೇತ್ರ ಪನಾಗರ (ಮಧ್ಯ ಪ್ರದೇಶ) |
| ಏಳನೇ ಪ್ರತಿಮಾ | : | 1984 ಸಿದ್ಧಕ್ಷೇತ್ರ ಆಹಾರಜೀ |
| ಕ್ಷುಲ್ಲಕ ದೀಕ್ಷೆ | : | 8.11.1985 ಸಿದ್ಧಕ್ಷೇತ್ರ ಆಹಾರಜೀ |
| ಐಲಕ ದೀಕ್ಷೆ | : | 10.07.1987 ಅತಿಶಯ ಕ್ಷೇತ್ರ ಘುಬೋನಜೀ |
| ಮುನಿ ದೀಕ್ಷೆ | : | 31.03.1988 ಮಹಾವೀರ ಜಯಂತಿ<br>ಸಿದ್ಧಕ್ಷೇತ್ರ ಸೋನಾಗಿರಿಜೀ |
| ದೀಕ್ಷಾಗುರು | : | ಪ.ಪೂ ಆಚಾರ್ಯ ಶ್ರೀ 108 ವಿದ್ಯಾಸಾಗರ ಮಹಾರಾಜರು |
| ಆಚಾರ್ಯಪದ | : | 25.01.2015 (ಮಾಘ ಶುಕ್ಲ ಷಷ್ಠಿ) ಸಮಾಧಿ ಪೂರ್ವ ಆಚಾರ್ಯ ಶ್ರೀ ಸೀಮಂಧರಸಾಗರರಿಂದ |
| ಕೃತಿಗಳು | : | ಧರ್ಮಭಾವನಾ ಶತಕ, ಜೈನಾಗಮ ಸಂಸ್ಕಾರ, ತೀರ್ಥೋದಯಕಾವ್ಯ, ಪರಮಾರ್ಥಸಾಧನಾ, ಬಚಪನಕಾ ಸಂಸ್ಕಾರ, ಸಮ್ಯಕ್ ಧ್ಯಾನ ಶತಕ ಜೈನಧರ್ಮ ಮೇ ಕರ್ಮ ವ್ಯವಸ್ಥಾ, ನೀಕ ಜೀವನ ಪರ್ಯೂಷಣ ಪಿಯೂಷ, ಸಾಮ್ಯ ಭಾವನಾ, ಆರ್ಜವವಾಣಿ, ಆರ್ಜವ ಕವಿತಾಯೇ |
| ಪದ್ಯಾನುವಾದ | : | ಗೋಮ್ಮಟೇಶ ಥುಧಿ, ವಾರಸಾಣುವೆಕ್ಖಾ, ಇಷ್ಟೋಪದೇಶ, ಸಮಾಧಿ ತಂತ್ರ |

# ಸಮ್ಯಕ್ ಧ್ಯಾನ ಶತಕ




ರಚನಕಾರರು

**ಆಧ್ಯಾತ್ಮ ಯೋಗಿ**

**ಆಚಾರ್ಯ ಶ್ರೀ 108 ಆರ್ಜವಸಾಗರ ಮುನಿ ಮಹಾರಾಜರು**

ಕನ್ನಡ ಅನುವಾದ

**ಪ್ರೊ. ಜೀವಂಧರಕುಮಾರ ಕೆ. ಹೋತಪೇಟಿ**

**ಎ. ಪ್ರಸನ್ನ ಕುಮಾರ್**



ಪ್ರಕಾಶಕನ

**ಶ್ರೀ ಸಮ್ಮೇದ ಪ್ರಕಾಶನ**

# 2030, 18ನೇ 'ಎ' ಮುಖ್ಯರಸ್ತೆ, 9ನೇ ಅಡ್ಡರಸ್ತೆ,
2ನೇ ಹಂತ, ಜೆ.ಪಿ.ನಗರ, ಬೆಂಗಳೂರು – 560078

# सम्यक् ध्यान शतक


| | | |
|---|---|---|
| कृति | – | सम्यक् ध्यान शतक |
| रचनाकार | – | आचार्य श्री १०८ आर्जवसागर |
| पावन स्मृति | – | अक्षय तृतिया वर्ष 2016 |
| पुण्यार्जक | – | श्री दि. जैन समाज, नया बाजार, ग्वालियर (म.प्र.) |
| संस्करण | – | ८, 2021 |
| प्रतियाँ | – | 1000 |
| प्रकाशक | – | भगवान महावीर आचरण संस्था समिति<br>एम.आई.जी.– 8/4, गीतांजली काम्प्लैक्स, भोपाल<br>फोन: (0755) 4902433/2427464<br>मो.: 9425601161, 9425011357, 9425601832 |
| प्रकाशन | – | पारस प्रिन्टर्स, 207/4, साईबाबा काम्प्लेक्स, जोन–1,<br>एम.पी.नगर, भोपाल. फोन:0755-4260034, 9826240876 |
| मूल्य | – | स्वाध्याय (आद्योपान्त पढने तक एक खाद्य वस्तु का त्याग करें) |

## (ಮೂಲ ಹಿಂದಿ ಗ್ರಂಥದಿಂದ)
## ಕನ್ನಡದ ಆವೃತ್ತಿ

| | | |
|---|---|---|
| ಗ್ರಂಥದ ಹೆಸರು | : | ಸಮ್ಯಕ್ ಧ್ಯಾನ ಶತಕ |
| ಮೂಲರಚನಕಾರರು (ಹಿಂದಿಯಲ್ಲಿ) | : | ಆಚಾರ್ಯ ಶ್ರೀ 108<br>ಆರ್ಜವಸಾಗರ ಮುನಿ ಮಹಾರಾಜರು |
| ಪ್ರಥಮ ಮುದ್ರಣ ಕನ್ನಡದಲ್ಲಿ | : | 2021 |
| ಪ್ರತಿಗಳು | : | 1000 |
| ಬೆಲೆ | : | ಸದುಪಯೋಗ (ಈ ಗ್ರಂಥದ ಸಂಪೂರ್ಣ ಸ್ವಾಧ್ಯಾಯದವರೆಗೆ ಯಾವುದಾದರೊಂದು ಹಣ್ಣನ್ನು ತ್ಯಾಗ ಮಾಡಿ) |
| ಡಿಟಿಪಿ ಅಳವಡಿಕೆ | : | ಶ್ರೀಮತಿ ರಮ್ಯ ಉಮಾಶಂಕರ<br>ಹಂಸು ಗ್ರಾಫಿಕ್ಸ್, ಮೈಸೂರು. |
| ಮುದ್ರಕರು | : | ಲಕ್ಷ್ಮಿ ಮುದ್ರಣಾಲಯ, ಬೆಂಗಳೂರು |
| ಪ್ರಕಾಶನ | : | ಶ್ರೀ ಸಮ್ಮೇದ ಪ್ರಕಾಶನ, ಜೆ.ಪಿ ನಗರ, ಬೆಂಗಳೂರು |

# ಅನುಕ್ರಮಣಿಕೆ


| ವಿಷಯ | ಪುಟ ಸಂಖ್ಯೆ |
|---|---|
| ಪ್ರಕಾಶಕರ ನುಡಿ | VII |
| ಅನುವಾದಕರ ಅನಿಸಿಕೆಗಳು | IX |
| ಎರಡು ಮಾತುಗಳು | XIII |
| ಮಂತವ್ಯ (ಚಿಂತನೆ) | XV |
| ಸಮ್ಯಕ್ ಧ್ಯಾನ ಶತಕ | XIX |
| ಧ್ಯಾನದ ಪ್ರಕ್ರಿಯೆ | XXII |
| ಮಂಗಲಾಚರಣೆ | 1 |
| ಭೂಮಿಕೆ | 1 |
| ಸಂಸಾರದ ಲಕ್ಷಣ | 1 |
| ಮೋಕ್ಷದ ಸ್ವರೂಪ | 2 |
| ಭವ್ಯರ ಲಕ್ಷಣ | 2 |
| ಧರ್ಮಾಧಾರ – ದಯೆ | 2 |
| ಗುರಿ– ಮೆಟ್ಟಿಲುಗಳು | 3 |
| ಆತ್ಮಹಿತ ಹೇಗೆ? | 4 |
| ಧ್ಯಾನ ಸಾಧನೆಗಾಗಿ ಚಿಂತನೆ | 4 |
| ಧ್ಯಾನದ ಅವಸ್ಥೆಗಳು | 7 |
| ಧ್ಯಾನದ ಯೋಗ್ಯ ಸಾಮಗ್ರಿಗಳು | 7 |

| | |
|---|---|
| ಧ್ಯಾನಕ್ಕೆ ಕಾರಣವಾಗುವ ದ್ರವ್ಯ | 8 |
| ಸಂಹನನ | 8 |
| ಆಸನ | 8 |
| ಆಹಾರ | 9 |
| ಬಾಧಕ ತತ್ತ್ವ | 10 |
| ಸಾಧಕರಿಗೆ ಲಾಭ | 11 |
| ಧ್ಯಾನದ ಸುಯೋಗ್ಯ ವಿಧಿ ಹಾಗೂ ಪ್ರಕ್ರಿಯೆ | 11 |
| ಉದ್ದೇಶ ಮತ್ತು ಸಾಧನ ದ್ರವ್ಯ | 13 |
| ಧ್ಯಾನಕ್ಕಾಗಿ ಕ್ಷೇತ್ರ | 13 |
| ಧ್ಯಾನಕ್ಕಾಗಿ ಕಾಲ | 13 |
| ಧ್ಯಾನಕ್ಕಾಗಿ ಭಾವ | 14 |
| ಸಮತಾ | 14 |
| ಸಂಯಮ | 15 |
| ಸದ್ಭಾವನೆಗಳ ಪ್ರಕಾರಗಳು | 15 |
| ಆರ್ತಧ್ಯಾನದ ಸ್ವರೂಪ | 17 |
| ಇಷ್ಟವಿಯೋಗ | 17 |
| ಅನಿಷ್ಟ ಸಂಯೋಗ | 18 |
| ಪೀಡಾ ಚಿಂತನೆ | 18 |
| ನಿದಾನ | 18 |
| ಆರ್ತಧ್ಯಾನದ ಗುಣಸ್ಥಾನ | 19 |

| | |
|---|---|
| ರೌದ್ರಧ್ಯಾನ | 19 |
| ಹಿಂಸಾನಂದ | 20 |
| ಮೃಷಾನಂದ | 20 |
| ಚೌರ್ಯಾನಂದ | 20 |
| ಪರಿಗ್ರಹಾನಂದ | 21 |
| ರೌದ್ರಧ್ಯಾನದ ಗುಣಸ್ಥಾನ | 21 |
| ಧರ್ಮಧ್ಯಾನದ ಸ್ವರೂಪ | 21 |
| ಧರ್ಮಧ್ಯಾನದ ಭೇದಗಳು | 22 |
| ಆಜ್ಞಾವಿಚಯ | 23 |
| ಅಪಾಯವಿಚಯ | 23 |
| ವಿಪಾಕವಿಚಯ | 24 |
| ಸಂಸ್ಥಾನವಿಚಯ | 24 |
| ಸಂಸ್ಥಾನವಿಚಯದ ಭೇದಗಳು | 25 |
| ಪದಸ್ಥಧ್ಯಾನ | 25 |
| ಪಿಂಡಸ್ಥಧ್ಯಾನ | 28 |
| ಐದು ಧಾರಣೆಗಳು | 29 |
| ಪೃಥ್ವೀಧಾರಣೆ | 29 |
| ಅಗ್ನಿಧಾರಣೆ | 30 |
| ವಾಯು ಮತ್ತು ಜಲಧಾರಣೆ | 32 |
| ತತ್ತ್ವಧಾರಣೆ | 32 |

| | |
|---|---|
| ರೂಪಸ್ಥ ಧ್ಯಾನ | 32 |
| ರೂಪಾತೀತ ಧ್ಯಾನ | 33 |
| ಧರ್ಮಧ್ಯಾನದ ಒಡೆಯ | 33 |
| ಶುಕ್ಲಧ್ಯಾನ – ಪೃಥಕ್ತ್ವ ವಿತರ್ಕ ವಿಚಾರ | 34 |
| ಏಕತ್ವವಿತರ್ಕ ಅವೀಚಾರ | 35 |
| ಸೂಕ್ಷ್ಮಕ್ರಿಯಾಪ್ರತಿಪಾತಿ | 35 |
| ವ್ಯುಪರತಕ್ರಿಯಾನಿವೃತ್ತಿ | 36 |
| ಹದಿನಾಲ್ಕನೆಯ ಗುಣಸ್ಥಾನದ ಕಾಲ | 36 |
| ಶುಕ್ಲಧ್ಯಾನದ ಗುಣಸ್ಥಾನ | 37 |
| ಅಂತಿಮ ಮಂಗಲ | 37 |
| ಪ್ರಶಸ್ತಿ | 39 |
| ಧ್ಯಾನದ ಭಾವನೆಗಳು | 43 |
| ಸಮ್ಯಕ್ ಧ್ಯಾನ ಶತಕ ಶಬ್ದಕೋಶ | 52 |
| ಸಾಮ್ಯ ಭಾವನೆ (ಸಾಮಾಯಿಕ ಪಾಠ) | 76 |
| ಧ್ಯಾನ ದೃಶ್ಯ | 78 |

# ಪ್ರಕಾಶಕರ ನುಡಿ

'ಆತ್ಮಧ್ಯಾನವಿಲ್ಲದೇ ಕರ್ಮ ನಿರ್ಜರೆಯಾಗದು, ಕರ್ಮನಿರ್ಜರೆ–ಯಾಗದೇ ಆತ್ಮನಿಗೆ ಮುಕ್ತಿ ಇಲ್ಲ' ಇದು ಆಗಮವಾಣಿ. ಆ ಧ್ಯಾನದ ವಿಧಿ–ವಿಧಾನಗಳನ್ನು ತಿಳಿಸಿಕೊಡುವ ಕೃತಿ "ಸಮ್ಯಕ್ ಧ್ಯಾನ ಶತಕ" ಈ ಕೃತಿಯನ್ನು ಹಿಂದಿ ಭಾಷೆಯಲ್ಲಿ ರಚಿಸಿದವರು ಪರಮ ಪೂಜ್ಯ ಆಚಾರ್ಯ ಶ್ರೀ 108 ಆರ್ಜವಸಾಗರ ಮಹಾರಾಜರು, ಸಂತ ಶಿರೋಮಣಿ ಆಚಾರ್ಯ ಶ್ರೀ 108 ವಿದ್ಯಾಸಾಗರ ಮಹಾರಾಜರ ಶಿಷ್ಯರು.

ಕಳೆದ ಮೂರು ದಶಕಗಳಿಗಿಂತಲೂ ಹೆಚ್ಚು ಕಾಲ ದಿಗಂಬರ ಮುನಿಗಳಾಗಿ, ಆಚಾರ್ಯರಾಗಿ, ರಾಷ್ಟ್ರದಾದ್ಯಂತ ವಿಹಾರ ಮಾಡುತ್ತಾ ಧರ್ಮಪ್ರಭಾವನೆಯನ್ನು ಮಾಡುತ್ತಿರುವ ಆಚಾರ್ಯ ಶ್ರೀ 108 ಆರ್ಜವಸಾಗರ ಮಹಾರಾಜರು ವ್ಯಸನ ಮುಕ್ತ ಸಮಾಜ ರೂಪಿಸುತ್ತಾ ತಮ್ಮ ಆತ್ಮಕಲ್ಯಾಣವನ್ನು ಮಾಡಿಕೊಳ್ಳುತ್ತಾ, ದಕ್ಷಿಣ ಭಾರತದ ಕರ್ನಾಟಕ, ತಮಿಳುನಾಡಿನಲ್ಲಿ ಚಾತುರ್ಮಾಸ ವರ್ಷಾಯೋಗಗಳನ್ನು ಮಾಡಿ ಅಭೂತಪೂರ್ವ ಧರ್ಮಪ್ರಭಾವನೆ ಮಾಡಿದ್ದಾರೆ. ಅವರ ಕರ್ನಾಟಕ ವಿಹಾರದ ಸಂದರ್ಭದಲ್ಲಿ ನಮ್ಮ ಪೂಜ್ಯ ತಂದೆಯವರಾದ ಶ್ರೀ ಎ. ಪ್ರಸನ್ನ ಕುಮಾರರು ಪ್ರಭಾವಿತರಾಗಿ ಅವರ ರತ್ನತ್ರಯ ಮಾರ್ಗದಲ್ಲಿ ಹೆಜ್ಜೆ ಇಡುವ ಸಾಹಸ ಮಾಡುತ್ತಾ, ಅವರ ವರ್ಷಾಯೋಗದ ಸ್ಥಳಗಳಿಗೂ ಭೇಟಿ ನೀಡಿ ದಶಲಕ್ಷಣ ಪರ್ವದ ಸಂದರ್ಭದಲ್ಲಿ ಅವರೊಡನೆ ಆತ್ಮಕಲ್ಯಾಣದ ಮಾರ್ಗದಲ್ಲಿ ಸಾಗುವ ಪ್ರಯತ್ನ ಮಾಡುತ್ತಾ ಅವರ ಧ್ಯಾನ ಪದ್ಧತಿಯಿಂದ ಪ್ರಭಾವಿತರಾಗಿದ್ದಾರೆ.

ಆಚಾರ್ಯ ಶ್ರೀಗಳ ಮಧ್ಯಪ್ರದೇಶದ ಜಬಲ್‌ಪುರದಲ್ಲಿ ವರ್ಷಾಯೋಗದ ದಶಲಕ್ಷಣ ಪರ್ವದ ದಿನಗಳಲ್ಲಿ ಅವರ ಸಾನಿಧ್ಯಕ್ಕೆ ಹೋದಾಗ ಈ ಹಿಂದಿ ಕೃತಿಯಿಂದ ಪ್ರಭಾವಿತರಾಗಿ ಅದನ್ನು ಕನ್ನಡಿಗರಿಗೆ ತಲುಪಿಸುವ ಉದ್ದೇಶದಿಂದ ಅನುವಾದ ಮಾಡಿಸಲು ಮನಸ್ಸು ಮಾಡಿ ತಮ್ಮ ಆತ್ಮೀಯ ಸ್ನೇಹಿತರು, ಆಚಾರ್ಯ ಶ್ರೀಗಳ ಭಕ್ತರು, ಅವರ ಅನೇಕ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿರುವ ಪ್ರೊ. ಜೀವಂಧರಕುಮಾರ ಕುಬೇರಪ್ಪ ಹೋತಪೇಟಿಯವರ ಮೂಲಕ ಅನುವಾದ ಮಾಡಿಸಿ ಪ್ರಕಟಣೆಗೆ ಸಿದ್ಧಪಡಿಸಿ, ವಿಶೇಷ ಆಸಕ್ತಿಯನ್ನು ತೋರಿರುವರು. ಕನ್ನಡ ಅನುವಾದಿತ

ಕೃತಿಯನ್ನು ಓದಿದ ನಾವು ನಮ್ಮ ಪೂಜ್ಯ ತಂದೆತಾಯಿಗಳವರಾದ ಶ್ರೀ ಎ. ಪ್ರಸನ್ನ ಕುಮಾರ್ ಹಾಗೂ ಶ್ರೀಮತಿ ಲೋಲ ಪ್ರಸನ್ನ ಕುಮಾರ್ ರವರ 50 ವರ್ಷಗಳ ದಾಂಪತ್ಯ ಜೀವನ ಪೂರೈಸಿರುವ ಸವಿನೆನಪಿಗಾಗಿ ಈ ಗ್ರಂಥವನ್ನು ಪ್ರಕಟಗೊಳಿಸುವ ಕಾರ್ಯ ಮಾಡಿದ್ದೇವೆ. ಈ ಸುಸಂದರ್ಭದಲ್ಲಿ ನಮ್ಮ ಪೂಜ್ಯ ತಂದೆತಾಯಿಯವರ 50ನೇ ವರ್ಷದ ದಾಂಪತ್ಯ ಜೀವನಕ್ಕೆ ಶುಭಾಶಯವನ್ನು ತಿಳಿಸುತ್ತಾ ಅವರು ಸಾಗುತ್ತಿರುವ ರತ್ನತ್ರಯ ಮಾರ್ಗ ನಮಗೂ ಸಹ ಆಗಲೆಂದು ಅವರಿಗೆ ಶತ ಶತ ನಮನಗಳನ್ನು ಅರ್ಪಿಸುತ್ತೇವೆ.

ಈ ಕೃತಿಯನ್ನು ಅನುವಾದ ಮಾಡಿಕೊಟ್ಟಿರುವ ಪ್ರೊ. ಜೀವಂಧರ ಕುಮಾರ ಕುಬೇರಪ್ಪ ಹೋತಪೇಟಿ, ಕರಡುಪ್ರತಿಯನ್ನು ತಿದ್ದುಪಡಿ ಮಾಡಿಕೊಟ್ಟ ಶ್ರೀ ನಾಗರತ್ನರಾಜು ಹಾಗೂ ಡಾ. ಸರಸ್ವತಿ ವಿಜಯಕುಮಾರ್ ಮತ್ತು ಡಿ.ಟಿ.ಪಿ ಮಾಡಿ ಚಿತ್ರ ಸಂಯೋಜನೆ ಮಾಡಿರುವ ಶ್ರೀ ಉಮಾಶಂಕರ ಮತ್ತು ಶ್ರೀಮತಿ ರಮ್ಯ ದಂಪತಿಗಳಿಗೂ ಮುದ್ರಕರಾದ ಲಕ್ಷ್ಮೀಮುದ್ರಣಾಲಯದ ಶ್ರೀಮಾನ್ ಮಂಜು ಹಾಗೂ ಸಿಬ್ಬಂದಿ ವರ್ಗಕ್ಕೂ ಧನ್ಯವಾದಗಳು.

ಈ ಕೃತಿಯನ್ನು ರಚಿಸಿ ಅದನ್ನು ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸಲು ಆಶೀರ್ವಾದ ಮಾಡಿರುವ ಪರಮ ಪೂಜ್ಯ ಆಚಾರ್ಯ ಶ್ರೀ 108 ಆರ್ಜವಸಾಗರ ಮಹಾರಾಜರಿಗೆ ಅನಂತ ನಮೋಸ್ತುಗಳು. ಕನ್ನಡಿಗರು ಈ ಕೃತಿಯನ್ನು ಓದುವುದರ ಮೂಲಕ ಸಮ್ಯಕ್‌ಧ್ಯಾನದಲ್ಲಿ ನಿರತರಾಗಿ ತಮ್ಮ ಆತ್ಮಕಲ್ಯಾಣದ ಮಾರ್ಗ ಕಂಡುಕೊಂಡರೆ ನಮ್ಮ ಈ ಶ್ರಮ ಸಾರ್ಥಕವಾದೀತೆಂದು ನಮ್ಮ ಆಶಯ. ಪ್ರಕಟಣೆಗೆ ಅನುಮೋದನೆ ನೀಡಿರುವ ಎಲ್ಲರಿಗೂ ಮತ್ತೊಮ್ಮೆ ಧನ್ಯವಾದಗಳು.

ವರ್ಷ 2021
ಬೆಂಗಳೂರು

**ಮಕ್ಕಳು, ಸೊಸೆಯಂದಿರು ಮತ್ತು ಮೊಮ್ಮಕ್ಕಳು**
**ಶ್ರೀ ಎ. ಪ್ರಸನ್ನ ಕುಮಾರ್ ಮತ್ತು ಶ್ರೀಮತಿ ಲೋಲ ಪ್ರಸನ್ನ ಕುಮಾರ್ ರವರ ಕುಟುಂಬವರ್ಗ**
**ಜೆ.ಪಿ. ನಗರ, 2ನೇ ಹಂತ, ಬೆಂಗಳೂರು**

# ಅನುವಾದಕರ ಅನಿಸಿಕೆಗಳು

ಪರಮಪೂಜ್ಯ ಆಚಾರ್ಯ ಶ್ರೀ 108 ಆರ್ಜವಸಾಗರ ಮುನಿರಾಜರು 2017ರ ವರ್ಷಾಯೋಗವನ್ನು ಮಧ್ಯಪ್ರದೇಶದ ಜಬಲ್‌ಪುರ ಹೊರವಲಯದಲ್ಲಿರುವ ಪೀಸನಾರಿ ಮಡಿಯಾಜಿ ತೀರ್ಥಕ್ಷೇತ್ರದ ಸಮೀಪದ ಪೂರವಾದಲ್ಲಿ ಕೈಕೊಂಡಿದ್ದರು. ಅವರ ಪ್ರವಚನಗಳ ಸಂಗ್ರಹ 'ಆರ್ಜವವಾಣಿ'ಯ ಕನ್ನಡಾನುವಾದವನ್ನು ಅವರಿಗೆ ಸಮರ್ಪಿಸಲು ಬೆಂಗಳೂರಿನಿಂದ ನಾನು, ಶ್ರೀಯುತರುಗಳಾದ ಎ. ಪ್ರಸನ್ನ ಕುಮಾರ್, ಬಿ.ಎಲ್.ಪಚ್ಚಣ್ಣ ಹಾಗು ಸಂತೋಷ್‌ಕುಮಾರ್ ಎಸ್. ಪತ್ರಾವಳಿ ಅಲ್ಲಿಗೆ 9–8–2017ರಂದು ಪ್ರಯಾಣ ಬೆಳಿಸಿ 10–8–2017ರಂದು ಸಂಜೆ 6 ಗಂಟೆಯ ಸುಮಾರಿಗೆ ಮಡಿಯಾಜಿ ತಲುಪಿ, ಅಲ್ಲಿ ವಸತಿ ವ್ಯವಸ್ಥೆ ಮಾಡಿಕೊಂಡು ಕೂಡಲೇ ಆಚಾರ್ಯಶ್ರೀಗಳ ಬಳಿಗೆ ತೆರಳಿದಾಗ 7ಗಂಟೆಯಾಗಿದ್ದಿತು. ಆಗ ಆಚಾರ್ಯಶ್ರೀಗಳು ತಮ್ಮ ಸಂಘದ ಇತರ ಮುನಿಶ್ರೀಗಳೊಂದಿಗೆ ಖಡ್ಗಾಸನ ಮುದ್ರೆಯಲ್ಲಿ ಧ್ಯಾನಮಗ್ನರಾಗಿದ್ದರು. ಆಗ ಅವರೆಲ್ಲರ ಶರೀರದಿಂದ ಹೊರಡುತ್ತಿದ್ದ ಕಾಂತಿ ನಮ್ಮನ್ನು ದಿಗ್ಭ್ರಮೆಗೆ ಒಳಗಾಗುವಂತೆ ಮಾಡಿತು. ಅಂತಹ ಪ್ರಭಾವವಲಯವನ್ನು ನಾನು ನನ್ನ ಜೀವನದಲ್ಲಿಯೇ ಪ್ರಪ್ರಥಮವಾಗಿ ನೋಡಿದೆ. ನನ್ನ ಜೊತೆಯಲ್ಲಿರುವವರಿಗೂ ಸಹ ಅದೇ ಅನುಭವ. ಧ್ಯಾನಮಗ್ನರಾಗಿದ್ದ ಆ ಎಲ್ಲ ಶ್ರಮಣರಿಗೆ ನಮನಗಳನ್ನು ಸಲ್ಲಿಸಿ ನಮ್ಮ ವಸತಿ ಸ್ಥಾನಕ್ಕೆ ತೆರಳಿದೆವು.

ಮರುದಿನ 'ಆರ್ಜವವಾಣಿ' ಕೃತಿಯನ್ನು ಅವರಿಗೆ ಸಮರ್ಪಿಸಿದಾಗ ಆ ಕೃತಿಯು ಅಲ್ಲಿ ಬಿಡುಗಡೆಯಾಯಿತು. ಮುಂದೆ ನಾಲ್ಕಾರು ದಿನಗಳ ಕಾಲ ಪ್ರತಿನಿತ್ಯ ಎಲ್ಲ ಧಾರ್ಮಿಕ ವಿಧಿ ವಿಧಾನಗಳಲ್ಲಿ ಮುನಿಶ್ರೀಗಳ ಆಹಾರ ಚರ್ಯೆಯಲ್ಲಿ ಕಾಡಿನ ವಿಹಾರದಲ್ಲಿ ನಾವೆಲ್ಲರೂ ಭಾಗವಹಿಸಿ ಧರ್ಮಾಮೃತವನ್ನು ಅನುಭವಿಸಿದೆವು.

ಈ ಮಧ್ಯೆ ನಾವು ಬಂದ ಮೂರನೇ ದಿನವೇ ಆಚಾರ್ಯಶ್ರೀಗಳು ಸುಮಾರು 10 ವರ್ಷಗಳ ಹಿಂದೆ ಗ್ವಾಲಿಯರ್ ವರ್ಷಾಯೋಗದಲ್ಲಿ ಹಿಂದಿ ಭಾಷೆಯಲ್ಲಿ ರಚಿಸಿದ್ದ 'ಸಮ್ಯಕ್ ಧ್ಯಾನ ಶತಕ' ಎಂಬ ಕೃತಿಯನ್ನು ನನಗೆ ಕೊಟ್ಟು ನಾವು ಅಲ್ಲಿರುವ 8 ದಿನಗಳ ಅವಧಿಯಲ್ಲಿ ಅದನ್ನು ಅನುವಾದ

ಮಾಡುವಂತೆ ಆದೇಶ ಮಾಡಿದರು. ಸಮ್ಯಕ್ ಧ್ಯಾನದ ಬಗ್ಗೆ ಹಿಂದಿ ಭಾಷೆಯಲ್ಲಿ ಪದ್ಯರೂಪದಲ್ಲಿದ್ದ ಆ ಕೃತಿಯನ್ನು ಲಿಪ್ಯಂತರ ಮಾಡಿ ಕನ್ನಡ ಭಾಷೆಗೆ ಅನುವಾದ ಮಾಡಬೇಕಾದ ಭಾಗಗಳನ್ನು ಅನುವಾದಿಸಿ ಕೊಟ್ಟಾಗ ಆಚಾರ್ಯಶ್ರೀಗಳಿಗೆ ಅತೀವ ಆನಂದವಾಯಿತು. ಅವರು ಪದ್ಯರೂಪದ ತಮ್ಮ ಕೃತಿಯನ್ನು ಗದ್ಯಾನುರೂಪದಲ್ಲಿ ಬರೆಯಲು ಪ್ರಾರಂಭಿಸಿ ಪದ್ಯಗಳ ಜೊತೆಯಲ್ಲಿ ಅದರ ಗದ್ಯಾನುವಾದವನ್ನು ಸೇರಿಸುವ ಭಾವನೆ ತಾಳಿ ದಿನನಿತ್ಯ ನಮಗೆ ಹೇಳತೊಡಗಿದರು. ಆದರೆ ನಮ್ಮ ಸೀಮಿತ ಅವಧಿಯಲ್ಲಿ ಅದನ್ನು ಪೂರ್ಣರೂಪದಲ್ಲಿ ಸಂಗ್ರಹಿಸಲು ಸಾಧ್ಯವಾಗಲಿಲ್ಲ.

ಶ್ರೀ ಪ್ರಸನ್ನ ಕುಮಾರ್‌ರವರು ಆಚಾರ್ಯಶ್ರೀಗಳ ಸನ್ನಿಧಿಯಲ್ಲಿದ್ದು-ಕೊಂಡು ಅವರ ಪ್ರವಚನಗಳ ಸ್ವಾದವನ್ನು ಅನುಭವಿಸುತ್ತಾ ಅವರು ಬರೆಯುತ್ತಿದ್ದ ಗದ್ಯಾನುರೂಪವನ್ನು ಸಂಗ್ರಹಿಸುತ್ತಾ ಅದರ ಆನಂದವನ್ನು ಅನುಭವಿಸಿದರು. ಸಮ್ಯಕ್ ಧ್ಯಾನವನ್ನು ವಾಸ್ತವಿಕವಾಗಿ ಮಾಡುವ ಶ್ರೀ ಪ್ರಸನ್ನ ಕುಮಾರರಿಗೆ ಈ ಸಮ್ಯಕ್ ಧ್ಯಾನ ಶತಕದ ಅಪೂರ್ವ ಪ್ರಭಾವದಿಂದಾಗಿ ತಾವೇ ಈ ಕೃತಿಯನ್ನು ಪ್ರಕಾಶನಕ್ಕೆ ತರಬೇಕೆಂದು ತೀವ್ರ ಅಭಿಲಾಷೆ ಉಂಟಾಗಿ ನಾವು ಪ್ರವಾಸದಿಂದ ಹಿಂದಿರುಗಿದ ಕೂಡಲೇ ನನಗೆ ವಿಷಯ ತಿಳಿಸಿದ್ದಲ್ಲದೇ ಮುನಿಗಳ ಸನ್ನಿಧಿಯಲ್ಲಿಯೇ ನಿಂತು ಅದನ್ನು ಪೂರ್ಣಗೊಳಿಸುವ ನಿರ್ಧಾರ ಮಾಡಿದರು. ಮುಂದೆ ಅಷ್ಟಾಹ್ನಿಕ ಪರ್ವದಲ್ಲಿ ಶ್ರೀ ಪ್ರಸನ್ನ ಕುಮಾರರು ಆಚಾರ್ಯಶ್ರೀಗಳ ಸಾನಿಧ್ಯಕ್ಕೆ ತೆರಳಿ ಮತ್ತೆ ಸುಮಾರು 10 ದಿನಗಳ ಕಾಲ ಧರ್ಮದ ರಸದೌತಣವನ್ನು ಅನುಭವಿಸಿ ಸಮ್ಯಕ್ ಧ್ಯಾನ ಶತಕದ ಗದ್ಯಾನುವಾದವನ್ನು ಮುಂದುವರೆಸಿ ಅದನ್ನು ಪೂರ್ಣ ಪ್ರಮಾಣದಲ್ಲಿ ಸಂಗ್ರಹಿಸಿ ನನಗೆ ಅನುವಾದ ಮಾಡಲು ನೀಡಿದರು. ಅವರ ನಿರಂತರ ಪರಿಶ್ರಮದ ಕಾರಣ ಹಾಗೂ ಎಲ್ಲ ರೀತಿಯಲ್ಲಿಯೂ ಅದು ಬೆಳಕಿಗೆ ಬರುವಂತೆ ಮಾಡುವ ಕಾರ್ಯದಲ್ಲಿ ಅವರ ಧರ್ಮನಿಷ್ಠೆ, ಮುನಿಭಕ್ತಿ ಅಪೂರ್ವವಾಗಿದ್ದು ಅನನ್ಯವಾಗಿದೆ.

'ಸಮ್ಯಕ್ ಧ್ಯಾನ ಶತಕ' ಒಂದು ಅಪೂರ್ವ ಕೃತಿಯಾಗಿದ್ದು ಆಚಾರ್ಯಶ್ರೀಗಳು ಈ ಕೃತಿಯನ್ನು 10ವರ್ಷಗಳ ಹಿಂದೆ ಪದ್ಯರೂಪದಲ್ಲಿ ರಚಿಸಿದ್ದರು. 10ವರ್ಷಗಳ ಸುದೀರ್ಘವಾದ ಅವಧಿಯಲ್ಲಿ ಧ್ಯಾನದ

ಸ್ವರೂಪವನ್ನು ತಿಳಿಯಲು ಪ್ರಯತ್ನಿಸಿ ಸಮ್ಯಕ್ ಧ್ಯಾನಕ್ಕೆ ಸಂಬಂಧಿಸಿದಂತೆ ಚಿಂತನ–ಮಂಥನ ಮಾಡಿ ತಮ್ಮ ಧ್ಯಾನದ ಅನುಭವವನ್ನು ಆಗಮಾನುಸಾರವಾಗಿ ಸಾಧನೆ ಮಾಡಿರುವ ವಿಧಿ–ವಿಧಾನಗಳನ್ನು ಆಚಾರ್ಯ ಶ್ರೀಗಳು ಈ ಕೃತಿಯಲ್ಲಿ ವರ್ಣಿಸಿದ್ದಾರೆ. ಏನೆಲ್ಲ ಆಗಮಗ್ರಂಥಗಳನ್ನು ಅಧ್ಯಯನ ಮಾಡಿ ಜ್ಞಾನ ಪಡೆದಿದ್ದರೂ ಆ ಜ್ಞಾನವನ್ನು ಸಮ್ಯಗ್ ಜ್ಞಾನವನ್ನಾಗಿ ಪರಿವರ್ತಿಸಿ ಅದನ್ನು ಸಮ್ಯಕ್ ಚಾರಿತ್ರದಲ್ಲಿ ಅಳವಡಿಸಿಕೊಳ್ಳದಿದ್ದರೆ ಆ ಜ್ಞಾನಕ್ಕೆ ಬೆಲೆಯಿರುವುದಿಲ್ಲ.

ಈಗಾಗಲೇ ಅವರಿಂದ ರಚನೆಯಾದ 'ಜೈನಾಗಮ ಸಂಸ್ಕಾರ' ಪರ್ಯೂಷಣ ಪೀಯೂಷ ಮತ್ತು ಆರ್ಜವವಾಣಿ ಕೃತಿಗಳ ಅಧ್ಯಯನ ಮಾಡಿ ಅನುವಾದ ಮಾಡಿದ ನನಗೆ ಈ ಕೃತಿಯ ಅಧ್ಯಯನದ ನಂತರ ಅವರ ಜ್ಞಾನ ದಿಗಂತದ ಇನ್ನೊಂದು ಮುಖದ ಪರಿಚಯವಾಯಿತು.

'ಸಮ್ಯಕ್ ಧ್ಯಾನ ಶತಕ'ವು ಧ್ಯಾನಕ್ಕೆ ಬೇಕಾದ ಪೂರ್ವ ಸಿದ್ಧತೆ ಅದರ ಆವಶ್ಯಕತೆ, ಅದರಲ್ಲಿರುವ ಭೇದಗಳು, ಶುಭಧ್ಯಾನ ಮಾಡಬೇಕಾದರೆ ಅನುಸರಿಸಬೇಕಾದ ವಿಧಾನ ಮುಂತಾದವುಗಳನ್ನು ಒಳಗೊಂಡಿದೆ. ಈ ಕೃತಿಯ ರಚನೆಯಲ್ಲಿ ಅವರ ಸಂಯಮವು ಕಾಣುತ್ತದೆ. ಹತ್ತು ವರ್ಷಗಳ ತಮ್ಮ ಧ್ಯಾನ ಸಾಧನೆಯ ಅನುಭವವನ್ನು ಪದ್ಯ ರೂಪದಲ್ಲಿ ರಚಿಸಿದ್ದಾರೆ. ಇದನ್ನು ಧ್ಯಾನ ಸಾಧನೆ ಮಾಡಬಯಸುವವರಿಗೆ ಅನುಕಂಪ ಭಾವದಿಂದ ತಮ್ಮ ಬಿಡುವಿಲ್ಲದ ಧಾರ್ಮಿಕ ವಿಧಿ ವಿಧಾನದ ಆಚರಣೆಯ ನಡುವೆಯೂ ಧ್ಯಾನದ ಬಗ್ಗೆ ನಡೆಸಿದ ಚಿಂತನೆಯ ಫಲವಾಗಿ ಪದ್ಯಗಳಿಗೆ ಗದ್ಯರೂಪ ವ್ಯಾಖ್ಯಾನವನ್ನೂ ನೀಡಿದ್ದಾರೆ. ಇದರಲ್ಲಿ ಮುನಿಶ್ರೀಗಳು ಜ್ಞಾನ, ಧ್ಯಾನ ತಪದಲ್ಲಿ ತೊಡಗಿದ ಅನುಭವದ ಸಂಗತಿಗಳು ಸ್ಪಷ್ಟವಾಗಿ ಕಾಣುತ್ತವೆ.

ಆರ್ತಧ್ಯಾನ, ರೌದ್ರಧ್ಯಾನಗಳನ್ನು ಬಿಟ್ಟು ಅನಂತ ಭವಗಳಲ್ಲಿ ಸಂಗ್ರಹಿಸಿರುವ ಪಾಪಕರ್ಮಗಳನ್ನು ದಹಿಸಬಲ್ಲ ಶಕ್ತಿಸಾಮರ್ಥ್ಯ ಕೇವಲ ಧರ್ಮಧ್ಯಾನ ಮತ್ತು ಶುಕ್ಲಧ್ಯಾನಗಳಿಂದ ಕೂಡಿದ ಶುಭಧ್ಯಾನ ಸಮ್ಯಕ್ ಧ್ಯಾನಕ್ಕೆ ಇದ್ದು ಅದರಿಂದ ಮೋಕ್ಷಸಾಧನೆ ಸಾಧ್ಯ ಎನ್ನುವ ವಿಷಯವನ್ನು ಎಲ್ಲರಿಗೂ ಮನವರಿಕೆ ಮಾಡಿಕೊಟ್ಟಿದ್ದಾರೆ. ಆ ವಿಧಾನ ಅದ್ವಿತೀಯವಾಗಿದೆ. ಸಮ್ಯಕ್ ಮಾರ್ಗದಲ್ಲಿ ಸಾಗುತ್ತಿರುವ ಪ್ರತಿಯೊಬ್ಬ

ಶ್ರಾವಕನು ಈ ಕೃತಿಯಲ್ಲಿ ವಿವರಿಸಿರುವಂತೆ ಸಮ್ಯಕ್ ಧ್ಯಾನದ ಸಿದ್ಧಿ ಮಾಡಿಕೊಂಡರೆ ಅನಂತ ಸುಖದ ಒಡೆಯನಾಗುವುದರಲ್ಲಿ ಯಾವ ಸಂದೇಹವೂ ಇಲ್ಲವೆಂದೂ ಹೇಳಬಹುದು.

ಈಗಾಗಲೇ ಸಂಸಾರದಲ್ಲಿದ್ದುಕೊಂಡು ವಿರಕ್ತಭಾವನೆಯಿಂದ ಆಚಾರ್ಯರ, ಉಪಾಧ್ಯಾಯರ, ಸರ್ವಸಾಧುಗಳ, ಆರ್ಯಿಕೆಯರ ವೈಯಾವೃತ್ಯದಲ್ಲಿ ತೊಡಗಿರುವ ಶ್ರೀ ಎ. ಪ್ರಸನ್ನ ಕುಮಾರರು ದಿನ ನಿತ್ಯವೂ 'ಧ್ಯಾನ' ಮಾಡಲು ಈ ಕೃತಿ, ಅವರ ಧ್ಯಾನದ ವಿಧಿಯು ಸಮ್ಯಕ್ ಧ್ಯಾನವಾಗುವಂತೆ ನಿರಂತರ ಪುರುಷಾರ್ಥ ಮಾಡಲು ಸಹಕಾರಿ.

ಈ ಗದ್ಯಾನುವಾದದ ಕೃತಿ ರಚನೆಯಾಗುತ್ತಿದ್ದ ಸಂದರ್ಭದಲ್ಲಿ ಹಲವಾರು ದಿನಗಳ ಕಾಲವಾದರೂ ಆಚಾರ್ಯಶ್ರೀಗಳ ಸನ್ನಿಧಿಯಲ್ಲಿದ್ದು ಪ್ರತಿಕ್ಷಣವು ಆ ಆನಂದವನ್ನು ಅನುಭವಿಸಿರುವ ಶ್ರೀ ಪ್ರಸನ್ನ ಕುಮಾರರು ಪುಣ್ಯವಂತರು, ಭಾಗ್ಯಶಾಲಿಗಳು, ಆಸನ್ನಭವ್ಯರು ಆಗಿದ್ದಾರೆ.

ಇಂತಹ ಒಂದು ಕೃತಿಯನ್ನು ಹೃದಯಪೂರ್ವಕವಾಗಿ ಆಶೀರ್ವದಿಸಿ ಅನುವಾದ ಮಾಡಲು ಆದೇಶಿಸಿದ ಪರಮಪೂಜ್ಯ ಆಚಾರ್ಯ ಶ್ರೀ 108 ಆರ್ಜವಸಾಗರ ಮುನಿಮಹಾರಾಜರಿಗೆ ಅನಂತ ನಮೋಸ್ತುಗಳು. ಈ ಕೃತಿಯನ್ನು ಪ್ರಕಾಶನ ಮಾಡಿ ಸಾಧಕರಿಗೆ ಸಮ್ಯಕ್ ಧ್ಯಾನದ ಪರಿಚಯ ಮಾಡಿಕೊಟ್ಟ ಶ್ರೀ ಎ. ಪ್ರಸನ್ನ ಕುಮಾರರಿಗೂ ಹಾಗೂ ಇದಕ್ಕೆ ಸಹಕಾರ ನೀಡಿದ ಅವರ ಎಲ್ಲ ಕುಟುಂಬ ವರ್ಗದವರಿಗೂ ಅನಂತ ಧನ್ಯವಾದಗಳು.

ಅನುವಾದಕರು

**ಪ್ರೊ. ಜೀವಂಧರಕುಮಾರ ಕುಬೇರಪ್ಪ ಹೋತಪೇಟಿ**

9448179946, ಶ್ರವಣಬೆಳಗೊಳ

ವರ್ಷಾಯೋಗ – 2021

# ಎರಡು ಮಾತುಗಳು

'ಸಮ್ಯಕ್ ಧ್ಯಾನ ಶತಕ'ವು ಪರಮಪೂಜ್ಯ ಗುರುದೇವ ಆಚಾರ್ಯ ಶ್ರೀ 108 ಆರ್ಜವಸಾಗರ ಮಹಾರಾಜರ ಸ್ವರಚಿತ ಕಾವ್ಯ ಕೃತಿಯಾಗಿದೆ. 113 ದ್ವಿಪದಿಗಳ ಸಂಕಲನವಾಗಿದ್ದು 'ಸ್ವ ಆತ್ಮ ಒಂದೇ ನಿನ್ನದಾಗಿದೆ' ಎಂಬ ಭಾವವನ್ನು ಸ್ಪಷ್ಟಪಡಿಸುತ್ತವೆ. ಆದ್ದರಿಂದ ಆತನನ್ನು ಧ್ಯಾನದ ಮೂಲಕ ಪರಿಮಾರ್ಜನೆ ಮಾಡಿ ಪರಮಾತ್ಮನನ್ನಾಗಿ ಮಾಡಿಕೊಳ್ಳಿ. ಕವಿ ಹೃದಯ ಅನುಭವ ಸಿದ್ಧರಾದ ಆಚಾರ್ಯಶ್ರೀಗಳು ಮಂಗಲಾಚರಣೆಯಲ್ಲಿ ಸಿದ್ಧ ಜಿನರಿಗೆ ಸಮಾನರಾದ ತಾವು ಸ್ವರೂಪವನ್ನು ಹೊಂದಲು ಸಮ್ಯಕ್ ಧ್ಯಾನಿ ಆಗಲು ನಮಸ್ಕರಿಸಿದ್ದಾರೆ. ಆನಂತರ ಭೂಮಿಕೆಯಲ್ಲಿ ಬಂಧನದಿಂದ ಬಿಡುಗಡೆಯಾಗಲು ಪರಪದಾರ್ಥಗಳಿಂದ ವಿರಕ್ತತೆ ಹಾಗೂ ಧ್ಯಾನದ ಸಮೀಚೀನತೆಯನ್ನು ಹೇಳಿದ್ದಾರೆ. ಕೃತಿಯು ಓರ್ವ ಸಾಧಕ ಮುನಿಗಳಿಂದ ರಚಿತವಾಗಿದೆ. ಆದ್ದರಿಂದ ಅವರ ಸಂಯಮ, ತಪ, ತ್ಯಾಗ, ವೈರಾಗ್ಯ ಮತ್ತು ಜ್ಞಾನ ಧ್ಯಾನಗಳ ಅನುಭವ ಮತ್ತು ಅಭ್ಯಾಸಗಳು ದ್ವಿಪದಿಗಳಲ್ಲಿ ಸಾಕಾರವಾಗಿವೆ ಉದಾ –

**ಮನಪೂರೇ ಜಗಮೇ ಫಿರೇ ಏಕ ಜಗಹ ನಾ ಧ್ಯಾನ ।**
**ಕೇಂದ್ರಿತ ನಿಜಮೇ ಧ್ಯಾನ ತಬ ಪ್ರಗಟೇ ಕೇವಲಜ್ಞಾನ ॥**

ಈ ದ್ವಿಪದಿಯಲ್ಲಿ ಅನುಭವದಿಂದ ಕೂಡಿದ ಅಭಿವ್ಯಕ್ತಿ ಇದೆ. ಧ್ಯಾನದ ಅವಸ್ಥೆಗಳಲ್ಲಿ ಸಹಯೋಗಿ ಸಾಮಗ್ರಿ ಏನಿರಬಲ್ಲದು? ದ್ರವ್ಯ ಕ್ಷೇತ್ರ ಭಾವಗಳ ಸಮೀಚೀನತೆಯ ಮೇಲೆ ಪ್ರಕಾಶ ಬೀರಿದ್ದಾರೆ. ಧ್ಯಾನದ ಪ್ರಕಾರಗಳ ಮೀಮಾಂಸೆ ಹಾಗೂ ಫಲಶ್ರುತಿ ಮತ್ತು ಧ್ಯಾನದಲ್ಲಿ ತೊಡಗಿಸಿಕೊಳ್ಳುವ ಅಭ್ಯಾಸಿ ಆಗಿದ್ದಾರೆ ಹಾಗೂ ಪೂರ್ವಾಚಾರ್ಯರುಗಳ ಸಮಸ್ತ ಕೃತಿಗಳ ಅಧ್ಯಯನ ಮಾಡಿದ್ದಾರೆ. ಆದ್ದರಿಂದ ಮೋಕ್ಷಕ್ಕೆ ಸಾಕ್ಷಾತ್ ಕಾರಣವಾಗಿರುವ ಧ್ಯಾನದ ಬಗ್ಗೆ ಮಾಡಿರುವ ಪರಿಚರ್ಚೆಯು ಸಮೀಚೀನವಾಗಿದೆ. ಮೂರು ಯೋಗಗಳ ಸಮ್ಯಕ್ ಸಮನ್ವಯಲ್ಲಿ ಆಗುವ ಶುಕ್ಲಧ್ಯಾನವು ಮೋಕ್ಷಪ್ರದಾಯಕ, ಜನ್ಮ-ಮರಣಗಳ ಶೋಕ ನಿವಾರಕವಾಗಿರುತ್ತದೆ. ಆದ್ದರಿಂದ ಆಚಾರ್ಯಶ್ರೀಗಳು ಅದರ ವಿವೇಚನೆಯನ್ನು ಕಾವ್ಯಾತ್ಮಕ ಸೂತ್ರರೂಪದಲ್ಲಿ ಮಾಡಿರುವುದು ಸ್ತುತ್ಯಾರ್ಹವಾಗಿದೆ. ಕೃತಿಯು

ಕಲಪಕ್ಷ ಮತ್ತು ಭಾವಪಕ್ಷಗಳಿಂದ ಉಪಯುಕ್ತತೆಯೊಂದಿಗೆ ಅಧ್ಯಾತ್ಮಿಕ ರಸಾನುಭೂತಿಯ ಆನಂದವನ್ನು ಕೂಡುವಂತಿದೆ.

ಓದುಗರು ಈ ಕೃತಿಯನ್ನು ಓದಿ ಆನಂದಿತರಂತೂ ಆಗಿಯೇ ಆಗುತ್ತಾರೆ. ಜೀವನವನ್ನು ಸಾರ್ಥಕಪಡಿಸಿಕೊಳ್ಳಲು ಧ್ಯಾನದ ಪ್ರಕ್ರಿಯೆಯನ್ನು ತಿಳಿದು ಅನನ್ಯವಾದ ಆಗಮ ಗ್ರಂಥಗಳ ಸ್ವಾಧ್ಯಾಯ ಮಾಡುವುದರಲ್ಲಿ ಪ್ರೇರಣೆ ಪಡೆಯುತ್ತಾರೆಂದು ಆಶಿಸುತ್ತೇನೆ. ಪೂಜ್ಯ ಗುರುದೇವರ ಆಶ್ರಯದಲ್ಲಿ ಧ್ಯಾನದ ಅಭ್ಯಾಸ ಮಾಡಿ ಶಿವತ್ವದ ಕಡೆಗೆ ಸಾಗಲಿ ಎನ್ನುವುದೇ ನನ್ನ ಅಂತರ್ ಕಾಮನೆಯಾಗಿದೆ. ನಾನೂ ಸಹ ಗುರುಭಕ್ತಿ ಮತ್ತು ಶ್ರುತ ಆರಾಧನೆಗಳೊಂದಿಗೆ ಧ್ಯಾನದ ಸಮ್ಯಕ್ ಸ್ವರೂಪ ಪಡೆಯುವಂತಾಗಲಿ. ಈ ಭಾವನೆಗಳೊಂದಿಗೆ ಪರಮಪೂಜ್ಯ ಆಚಾರ್ಯಶ್ರೀಗಳ ಚರಣಗಳಲ್ಲಿ ಕೋಟಿ–ಕೋಟಿ ನಮನಗಳನ್ನು ಅರ್ಪಿಸುತ್ತೇನೆ.

ಗುರುಚರಣಗಳಲ್ಲಿ ನಮಿಸುತ ನಾನು ಸಮಕ್ ಧ್ಯಾನವ ಬಯಸುವೆ, ಗುರುಕೃಪೆಯಿಂದ ದೊರಕಲಿ ವಿಮಲಮತಿ ದೊರೆತು ಸಮ್ಯಕ್ ಜ್ಞಾನವಾಗಲಿ.

ಸಂಪರ್ಕ ಸೂತ್ರ
ಗುರು ಚರಣಾನುರಾಗಿನಿ
1/344, ಸುಹಾಗನಗರ
**ಪ್ರೊ. ಡಾ. ವಿಮಲಾಜೈನ್ 'ವಿಮಲ'**
**ಫಿರೋಜಾಬಾದ್ (ಉ.ಪ.)**
ಸ. ಸಂಪಾದಿಕಾ ಜೈನ ಮಹಿಲಾದರ್ಶನ
0561 2230315/ 09927417410
ಪೂ. ಸಂಯುಕ್ತ ಮಂತ್ರಿ
ಅ.ಭಾ.ದಿ.ಜೈನ ವಿದ್ವತ್ ಪರಿಷದ್

# ಮಂತವ್ಯ (ಚಿಂತನೆ)

'ಸಮ್ಯಕ್ ಧ್ಯಾನ ಶತಕ' ಆಚಾರ್ಯ ಶ್ರೀ 108 ವಿದ್ಯಾಸಾಗರ ಮಹಾರಾಜರಿಂದ ದೀಕ್ಷಿತರಾದ ಆಚಾರ್ಯ ಶ್ರೀ 108 ಆರ್ಜವಸಾಗರರ ಒಂದು ಶ್ರೇಷ್ಠ ಕೃತಿಯಾಗಿದೆ. ಈ ಸಮ್ಯಕ್ ಧ್ಯಾನ ಶತಕವನ್ನು ಪ್ರಾರಂಭದಿಂದ ಅಂತ್ಯದವರೆಗೂ ಒಂದೊಂದು ಅಕ್ಷರವನ್ನು ಗಮನವಿಟ್ಟು ಓದಿದ್ದೇನೆ. ನನಗೆ ಬಹಳ ಆನಂದ ಉಂಟಾಯಿತು. ಅದನ್ನು ವರ್ಣಿಸುವುದು ಬಹಳ ಕಷ್ಟದಾಯಕವಾಗಿದೆ. ಧ್ಯಾನಕ್ಕೆ ಸಂಬಂಧಿಸಿದಂತೆ ಇಷ್ಟೊಂದು ಉತ್ತಮ ವಿವೇಚನೆಯನ್ನು ಪದ್ಯರೂಪದಲ್ಲಿ ನಾನು ಮೊದಲ ಬಾರಿಗೆ ಅಧ್ಯಯನಕ್ಕಾಗಿ ಪಡೆದಿದ್ದೇನೆ. ಧ್ಯಾನಕ್ಕೆ ಸಂಬಂಧಿಸಿದ ಈ ವಿವೇಚನೆಯು ಸಹಜವಾಗಿ ಬೋಧಗಮ್ಯವಾಗಿದ್ದು ಆತ್ಮ ಸಾಕ್ಷಾತ್ ಮಾಡಿಕೊಳ್ಳಲು ಯೋಗ್ಯವಾಗಿದೆ.

ಆಚಾರ್ಯ ಶ್ರೀ 108 ಆರ್ಜವಸಾಗರರು ತತ್ತ್ವಾರ್ಥಸೂತ್ರ, ದ್ರವ್ಯಸಂಗ್ರಹ, ರತ್ನಕರಂಡಕ ಶ್ರಾವಕಾಚಾರ, ಜ್ಞಾನಾರ್ಣವಗಳಂತಹ ಗ್ರಂಥಾಗಮಗಳನ್ನು ಆಧಾರವಾಗಿಟ್ಟುಕೊಂಡು ಆತ್ಮಧ್ಯಾನದಂತಹ ವಿಷಯವನ್ನು ಎಲ್ಲ ವರ್ಗದ ಓದುಗರಿಗೆ ಸರಳವಾದ ಪದ್ಯಗಳ ರೂಪದಲ್ಲಿ ರಚಿಸಿದ್ದಾರೆ. ವಸ್ತುಶಃ ಈ ಉತ್ತಮ ಕೃತಿಯು ವಾಸ್ತವಿಕ ಧ್ಯಾನದ ಸ್ವರೂಪವನ್ನು ತಿಳಿಯಲು ಸಹಕಾರಿಯಾಗಿದೆ.

ಮಂತ್ರ ಸಂಕ್ಷಿಪ್ತವಾಗಿರುವಂತೆ ಅದರ ಪ್ರಭಾವ ಅಸೀಮಿತವಾಗಿರುತ್ತದೆ. ಹಾಗೆಯೇ ಈ ಕೃತಿಯಲ್ಲಿ ಅದೆಲ್ಲವೂ ಬಂದಿದ್ದು ಧ್ಯಾನದ ಸಂದರ್ಭದಲ್ಲಿ ಉಪಕಾರಿ. ಅದು ಇಂದಿನ ಆವಶ್ಯಕತೆಯಾಗಿದೆ.

**ಮಂತ್ರ ವಾಕ್ಯದ ಧ್ಯಾನವಾಗಲಿ ವೀತರಾಗ ಶುಭ ರೂಪ**
**ಪದಸ್ಥವೆಂದು ತಿಳಿಯಿರಿ ಆ ಏಕಾಗ್ರ ಸ್ವರೂಪವನು ॥**
**'ಓಂ' ಎಂದಾಗಿದೆ ಆ ಮಂತ್ರವು ಪರಮೇಷ್ಠಿಯ ಬೀಜಾಕ್ಷರವು ।**
**ದ್ವಾದಶಾಂಗ ಸಾಗರವೆನ್ನಿ ಭವ ಸುಖ ಶಿವದ ಸಾರವದು ॥**

ಮುಕ್ತಿಯ ಮೂಲ ಕಾರಣ ಆತ್ಮಧ್ಯಾನವೇ ಆಗಿದೆ. ಅದೊಂದು ಸರ್ವಮಾನ್ಯ ಸತ್ಯವಿದೆ. ಆದ್ದರಿಂದ ಪ್ರತಿಯೋರ್ವ ಮುನಿ ಮತ್ತು ಶ್ರಾವಕರಿಗೆ ಧ್ಯಾನದ ಸ್ವರೂಪ ತಿಳಿಯುವುದು ಅತ್ಯಂತ ಆವಶ್ಯಕವಾಗಿದೆ.

ಉದಾ – **ಆತ್ಮನಲಿ ಪ್ರಕಟವಾಗಲಿ, ಗುಣ ಅನಂತ ಅಭಿರಾಮ**
**ಸಿದ್ಧನಾಗಲಿ ನನ್ನಾತ್ಮ, ಸಿದ್ಧವಾಗಲಿ ನನ್ನ ಗುರಿ.**

ಜಿನಮಂದಿರಗಳಲ್ಲಿ ವಿರಾಜಮಾನರಾಗಿರುವ ಎಲ್ಲ ಅರಿಹಂತ ಭಗವಾನರು ಧ್ಯಾನಮುದ್ರೆಯಲ್ಲಿಯೇ ಇರುತ್ತಾರೆ. ಇದರಿಂದ ಧ್ಯಾನಾವಸ್ಥೆಯೇ ಧರ್ಮ ಪರಿಣಿತ ಅವಸ್ಥೆ ಎಂದು ಪ್ರತೀತ (ಸಿದ್ಧ) ವಾಗುತ್ತದೆ. ಉತ್ಕೃಷ್ಟ ಧ್ಯಾನಾವಸ್ಥೆಯಲ್ಲಿ ಅಂತರ್ಜಲ್ಪವು ಸಹ ಬಿಟ್ಟು ಹೋಗುತ್ತದೆ. ಇದರಿಂದಲೂ ಸಹ ಧ್ಯಾನಾವಸ್ಥೆಯು ಸಮಸ್ತ ಸಂಸಾರದ ಸರ್ವೋತ್ಕೃಷ್ಟ ಅವಸ್ಥೆಯಾಗಿದೆ ಎಂದು ಸಿದ್ಧವಾಗುತ್ತದೆ.

ಜಿನಾಗಮದಲ್ಲಿ ಆರ್ತ, ರೌದ್ರ, ಧರ್ಮ ಮತ್ತು ಶುಕ್ಲ ಎಂಬ ನಾಲ್ಕು ಧ್ಯಾನದ ಭೇದಗಳನ್ನು ಹೇಳಲಾಗಿದೆ. ಅವುಗಳ ವಿಷಯವನ್ನು ಸಹ ಪ್ರಾಚೀನವಾದ ಅನೇಕ ಗ್ರಂಥಗಳಲ್ಲಿ ಆಚಾರ್ಯರು ಅತಿವಿಸ್ತಾರದೊಂದಿಗೆ ಬರೆದಿದ್ದಾರೆ. ಈ ವಿಸ್ತಾರದಿಂದ ಈ ಕೃತಿಯಲ್ಲಿ ಅಧ್ಯಾತ್ಮಿಕ ಉಪಯೋಗಿಯಾದ ಅತಿ ಆವಶ್ಯಕ ವಿಷಯಗಳನ್ನು ಆಚಾರ್ಯ ಶ್ರೀ 108 ಆರ್ಜವಸಾಗರ ಮಹಾರಾಜರು ಪದ್ಯರೂಪದಲ್ಲಿ ಸಂಗ್ರಹಿಸುವ ಎಲ್ಲ ಪ್ರಯತ್ನ ಮಾಡಿದ್ದಾರೆ.

ಈ ಕೃತಿಯಿಂದ ಧ್ಯಾನದ ಉದ್ದೇಶವಂತೂ ತಿಳಿದು ಬರುತ್ತದೆ. ಜೊತೆ ಜೊತೆಯಲ್ಲಿ ಧ್ಯಾನಕ್ಕಾಗಿ ಬೇಕಾದ ತತ್ತ್ವಜ್ಞಾನದ ಅಧ್ಯಯನ ಅನಿವಾರ್ಯವಾಗಿದ್ದು ಅದು ಸಹ ಸ್ಪಷ್ಟವಾಗುತ್ತದೆ.

ಆತ್ಮ ಪರಮಾತ್ಮನಾಗುವ ಧ್ಯಾನದ ಚರ್ಚೆಯನ್ನು ಜೈನ ಆಚಾರ್ಯ ಉಮಾಸ್ವಾಮಿಗಳು ರಚಿಸಿರುವ ತತ್ತ್ವಾರ್ಥಸೂತ್ರದಲ್ಲಿ ಹೀಗೆ ಹೇಳಿದ್ದಾರೆ

**ಉತ್ತಮಸಂಹನನಸ್ಯೈಕಾಗ್ರಚಿಂತಾನಿರೋಧೋಧ್ಯಾನಮಾಂತ-ರ್ಮುಹೂರ್ತಾತ್. । 9.27 ।**

ಉತ್ತಮ ಸಂಹನನ ಉಳ್ಳವರಿಗೆ ಅಂತರ್ಮುಹೂರ್ತದವರೆಗೆ ಏಕಾಗ್ರ ಚಿಂತೆಯ ನಿರೋಧ ಧ್ಯಾನವಾಗುತ್ತದೆ. ಈ ಧ್ಯಾನವು ಉತ್ತಮ ಸಂಹನನ ಉಳ್ಳವರಲ್ಲಿಯೇ ಆಗುತ್ತದೆ. ಈ ಧ್ಯಾನದಿಂದ ಅಷ್ಟಕರ್ಮಗಳ ವಿನಾಶವಾಗುತ್ತದೆ. ಇದರಿಂದಾಗಿ ಮೋಹ, ರಾಗ, ದ್ವೇಷಗಳು ಪೂರ್ಣವಾಗಿ ಅಭಾವವಾಗಿ ಸರ್ವಜ್ಞತೆ ಪ್ರಾಪ್ತವಾಗುತ್ತದೆ. ಇದು ಶುಕ್ಲಧ್ಯಾನವಾಗಿದೆ.

ಅದು ಎಂಟನೇ ಗುಣಸ್ಥಾನದಿಂದ ಪ್ರಾರಂಭವಾಗುವುದು. ಇದು ಮೊದಲ ಶುಕ್ಲಧ್ಯಾನವಾಗಿದೆ. ಎರಡನೇ ಶುಕ್ಲಧ್ಯಾನವು 12ನೇ ಗುಣಸ್ಥಾನದಲ್ಲಿ ಆಗುತ್ತದೆ. 3ನೇ ಶುಕ್ಲಧ್ಯಾನವು 13ನೇ ಗುಣಸ್ಥಾನದಲ್ಲಿ ಆಗುತ್ತದೆ ಮತ್ತು 4ನೇ ಶುಕ್ಲಧ್ಯಾನವು 14ನೇ ಗುಣಸ್ಥಾನದಲ್ಲಿ ಆಗುತ್ತದೆ. ಪಂಚಮಕಾಲದಲ್ಲಿ ಶುಕ್ಲಧ್ಯಾನದ ಸದ್ಭಾವವಿಲ್ಲ, ಆದರೆ ಉತ್ಕೃಷ್ಟ ಧ್ಯಾನದವರೆಗೆ ಇಂದಿಗೂ ತಲುಪಬಹುದಾಗಿದೆ.

ಹೇಳಿರುವ ನಾಲ್ಕು ಧ್ಯಾನಗಳಲ್ಲಿ ಆರ್ತಧ್ಯಾನ ಮತ್ತು ರೌದ್ರಧ್ಯಾನಗಳಂತೂ ಸಂಸಾರಕ್ಕೆ ಕಾರಣವಾಗಿದೆ ಹಾಗೂ ಧರ್ಮಧ್ಯಾನ ಮತ್ತು ಶುಕ್ಲಧ್ಯಾನಗಳು ಮುಕ್ತಿಗೆ ಕಾರಣವಾಗಿದೆ. ಕವಿಗಳು ಹೀಗೆ ಹೇಳಿಯೂ ಇದ್ದಾರೆ.

**ಅಷ್ಟಾಪದ ಸಮ್ಮೇದಗಿರಿ, ಚಂಪಾಪುರ ಗಿರಿನಾರ ।**
**ಪಾವಾಪುರದಲಿ ಧ್ಯಾನವಗೈದೊಡೆ ಬೇಗನೆ ಮಾಳ್ಪರು ಭವದೂರ ।**
**ಗುಪ್ತಿ ಮೂರಲಿ ಲೀನರಾಗುತ ತಡೆಯಿರಿ ಮನ-ವಚ-ತನು ಯೋಗವನು ।**
**ಮಾಡಿರಿ ಧ್ಯಾನವ ಪಡೆಯಿರಿ ಶಿವಪದ, ಹುಟ್ಟು ಸಾವಿನ ಶೋಕವಿಲ್ಲವು ಮೋಕ್ಷಪದದಲಿ ।**

ಜಿನಾಗಮದಲ್ಲಿ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರ ರೂಪದ ಮುನಿಮಾರ್ಗವನ್ನು ತಿಳಿಯದೇ ಧರ್ಮಧ್ಯಾನವು ಸಂಭವವಿಲ್ಲ. ಸಾಮಾಯಿಕವು ಧ್ಯಾನದ ಒಂದು ರೂಪವಾಗಿದೆ. ಅದು ದಿಗಂಬರ ಪರಂಪರೆಯಲ್ಲಿ ವ್ರತಧಾರಿಗಳಲ್ಲಿ ರೂಢಿಯಲ್ಲಿದೆ. ಸಾಧುಸಂತರೊಂದಿಗೆ ವ್ರತಿಕ ಶ್ರಾವಕರು ಸಹ ಸಾಮಾಯಿಕ ಮಾಡುತ್ತಾರೆ. ಆದ್ದರಿಂದ ಸಾಮಾಯಿಕದ ರೂಪದಲ್ಲಿ ಸಮ್ಯಕ್‌ಧ್ಯಾನವನ್ನು ಸ್ವೀಕರಿಸಲಾಗಿದೆ. ಹೀಗೆ ಆಚಾರ್ಯಶ್ರೀಗಳು ಧ್ಯಾನದ ಸಂದರ್ಭದಲ್ಲಿ ಆಚಾರ್ಯ ಜಿನಸೇನರ ಪ್ರಕಾರ ಧ್ಯಾನವನ್ನು ಪದ್ಮಾಸನ, ಖಡ್ಗಾಸನ ಮುಂತಾದವುಗಳಲ್ಲಿ ಮಾಡಬಹುದಾಗಿದೆ ಎಂದು ಹೇಳಿದ್ದಾರೆ. ಶರೀರದ ಯಾವುದೇ ಅವಸ್ಥೆಯು ಧ್ಯಾನದ ವಿರೋಧವನ್ನು ಉತ್ಪನ್ನ ಮಾಡುವುದಿಲ್ಲ. ಆ ಅವಸ್ಥೆಯಲ್ಲಿ ತಮ್ಮ ಸುವಿಧಾನುಸಾರವಾಗಿ ಧ್ಯಾನ ಮಾಡಬಹುದಾಗಿದೆ.

ಈ ಪ್ರಕಾರ ಆಚಾರ್ಯಶ್ರೀಗಳು 'ಸಮ್ಯಕ್ ಧ್ಯಾನ ಶತಕ'ದಲ್ಲಿ ಹೀಗೆ ತಿಳಿಸಿದ್ದಾರೆ.

**ಸದಾ ಧರ್ಮಮಯ ಭಾವವಿರಲಿ, ಆವಶ್ಯಕಗಳಲ್ಲಿ ಲೀನವಾಗಿರಲಿ,**
**ಧರ್ಮಧ್ಯಾನ ಜೊತೆಗಿರಲಿ ಅವರೇ ಭವ್ಯ ಸಾಧಕರು**

ಧರ್ಮಧ್ಯಾನ ರಹಿತ ಜೀವನವು ವ್ಯರ್ಥವಾಗಿದೆ. ಬಾಲ್ಯಕಾಲದಿಂದಲೇ ಧರ್ಮಸಂಸ್ಕಾರಗಳನ್ನು ನೀಡುತ್ತಾ ಸಾಂಸಾರಿಕ ಬಂಧನಗಳಿಂದ ಬಿಡುಗಡೆ ಪಡೆದು ಮೋಕ್ಷಮಾರ್ಗದಲ್ಲಿ ಸಾಗುತ್ತಾ ವೀತರಾಗಿ, ನಿರ್ಮೋಹಿ, ನಿರ್ದೋಷ ಸಾಧುಗಳಾಗಿ ಮೋಕ್ಷ ಸುಖಕ್ಕಾಗಿ ಆತ್ಮಿಕ, ಅಕ್ಷಯ ಹಾಗೂ ಅನಂತಸುಖದಲ್ಲಿ ಲೀನರಾಗುವ ಆಚಾರ್ಯಶ್ರೀಗಳ ಭಾವದ ಬಗ್ಗೆ ಅಪಾರ ಆನಂದವಿದೆ. ಅವರ ಈ ಸಮ್ಯಕ್ ಧ್ಯಾನ ಶತಕ ನಮಗಾಗಿ ಹಾಗೂ ಓದುಗರಿಗಾಗಿ ಒಂದು ಪರಮ ಆಶೀರ್ವಾದವಾಗಲಿ ಎಂದು ನಾನು ಅಭಿಪ್ರಾಯ ಪಡುತ್ತೇನೆ.

ಆಚಾರ್ಯಶ್ರೀಗಳಿಂದ ಜೈನಾಗಮ ಸಂಸ್ಕಾರ, ತೀರ್ಥೋದಯ ಕಾವ್ಯ, ಪರಮಾರ್ಥ ಸಾಧನೆ, ಉತ್ತಮ ಜೀವನ, ಬಾಲ್ಯದ ಸಂಸ್ಕಾರ, ಧರ್ಮಭಾವನಾಶತಕ, ಆರ್ಜವ ಕವಿತೆಗಳು, ಆರ್ಜವವಾಣಿ, ಜೈನಶಾಸನದ ಹೃದಯ ಹಾಗು ಬಾರಸಾಣುವೆಕ್ಖಾ, ಇಷ್ಟೋಪದೇಶ, ಸಮಾಧಿತಂತ್ರ ಹಾಗು ದ್ರವ್ಯ ಸಂಗ್ರಹಗಳ ಪದ್ಯಾನುವಾದ ಇತ್ಯಾದಿ ಪುಸ್ತಕಗಳು ಬರೆಯಲ್ಪಟ್ಟಿವೆ. ಅವುಗಳನ್ನು ಸಹ ಓದುವ ಅವಕಾಶ ನನಗೆ ದೊರಕಿದೆ, ಇದಕ್ಕಾಗಿ ನಾನು ನನ್ನ ಮಹಾನ್ ಪುಣ್ಯೋದಯವೆಂದು ಭಾವಿಸುತ್ತೇನೆ. ಪರಮಪೂಜ್ಯ ಆಚಾರ್ಯಶ್ರೀ ಹೀಗೆಯೇ ಅಭೀಕ್ಷ್ಣ ಜ್ಞಾನೋಪಯೋಗದಿಂದ ಜಿನವಾಣಿಯ ಸೇವೆ ಮಾಡುತ್ತಾ ಧರ್ಮ ಹಾಗು ಸಮಾಜಕ್ಕೆ ದಿವ್ಯ ಸಾಹಿತ್ಯಿಕ ಅವದಾನವನ್ನು, ಕೊಡುಗೆಯನ್ನು ನೀಡಿ ಸಂಸಾರದ ಭವ್ಯ ಪ್ರಾಣಿಗಳಿಗೆ ಧರ್ಮ ಹಾಗು ಮೋಕ್ಷದ ಮಾರ್ಗವನ್ನು ಪ್ರಶಸ್ತಗೊಳಿಸುವವರಾಗಲಿ ಇದೇ ನನ್ನ ಆಂತರಿಕ ಭಾವನೆಯಾಗಿದೆ.

**ಪರಮಪೂಜ್ಯ ಆಚಾರ್ಯಶ್ರೀಗಳ**
**ಚರಣಕಮಲಗಳಲ್ಲಿ ಸಾದರ ನಮೋಸ್ತುಗಳು**

**ಡಾ. ಬಿ.ಎಲ್. ಸೇಠಿ**
ಎಂಎ, ಎಂ.ಫಿಲ್, ಪಿ.ಹೆಚ್.ಡಿ. ಜೈನದರ್ಶನಾಚಾರ ಡಿ.ಲಿಬ್ ಅಧ್ಯಕ್ಷ
ಇತಿಹಾಸ ವಿಭಾಗ
ಸೇಠ ಮೋತಿಲಾಲ್ (ಪಿ.ಜಿ) ಕಾಲೇಜ್ ಝುಂಝುನೂ ರಾಜಸ್ಥಾನ

# ಸಮ್ಯಕ್ ಧ್ಯಾನ ಶತಕ

ಪರಮಪೂಜ್ಯ ಸಂತ ಶಿರೋಮಣಿ ಆಚಾರ್ಯ ಶ್ರೀ 108 ವಿದ್ಯಾಸಾಗರ ಮಹಾರಾಜರ ಸುಯೋಗ್ಯ ಶಿಷ್ಯ ಪೂಜ್ಯ ಆಚಾರ್ಯ ಶ್ರೀ 108 ಆರ್ಜವಸಾಗರ ಮಹಾರಾಜರು ಸದಾಕಾಲ ಜಿನಾಗಮದ ಸ್ವಾಧ್ಯಾಯ, ಮನನ ಚಿಂತನ, ಲೇಖನ ಅಥವಾ ಧ್ಯಾನ ಸಾಧನೆಯಲ್ಲಿ ನಿರತರಾಗಿರುತ್ತಾರೆ.

ಸಂಸಾರದ ದುಃಖಗಳಿಂದ ಮುಕ್ತರಾಗಿ ಸುಖಿಗಳಾಗಿರುವ ಅನಂತ ಜೀವಗಳು ಧ್ಯಾನಾವಸ್ಥೆಯಲ್ಲಿಯೇ ಮುಕ್ತರಾಗಿದ್ದಾರೆ. ನಮ್ಮ ಜಿನಪ್ರತಿಮೆಗಳು ಸಹ ಧ್ಯಾನಸ್ಥ ಸ್ವರೂಪದಲ್ಲಿಯೇ ಇರುತ್ತವೆ. ಜಿನಾಗಮಗಳಲ್ಲಿ ಧ್ಯಾನದ ಮೇಲೆ ಅಪಾರ ಸಾಹಿತ್ಯವಿದೆ. ವರ್ತಮಾನ ಯುಗದಲ್ಲಿಯೂ ಧ್ಯಾನ ಶಾರೀರಿಕ, ಮಾನಸಿಕ ಹಾಗೂ ಅಧ್ಯಾತ್ಮಿಕ ಈ ಮೂರು ದೃಷ್ಟಿಗಳಿಂದ ಬಹಳ ಪ್ರಚಾರದ ವಿಷಯ ಹಾಗೂ ಪ್ರಕ್ರಿಯೆ ಆಗಿದೆ. ಧ್ಯಾನವಂತೂ ಪ್ರತಿಯೊಬ್ಬ ಮಾನವ ಅಥವಾ ಜೀವಿಗೆ ಪ್ರತಿಯೊಂದು ಕ್ಷಣದಲ್ಲಿರುತ್ತದೆ. ಆದರೆ ಧ್ಯಾನದ ವಾಸ್ತವಿಕ ಸ್ವರೂಪವನ್ನು ಶಾಶ್ವತ ಸುಖಪ್ರಾಪ್ತಿಗಾಗಿ ಕಾರಣವೆಂಬುದು ಬಹಳ ಕಡಿಮೆ ಜನರಿಗೆ ತಿಳಿದಿದೆ. ಈ ಸಂಬಂಧವಾಗಿ ಕೆಳಗಿನ ವಿವರಣೆ ನೋಡಬೇಕಿದೆ..

**ಧ್ಯಾನ ಧ್ಯಾನವೆಂದು ಎಲ್ಲರೂ ಹೇಳುವರು**
**ಆದರೆ ಯಾರು ತಿಳಿಯರು ಧ್ಯಾನವನು**
**ಧ್ಯಾನದ ಮರ್ಮ ತಿಳಿಯದ ವಿನಹ ಎಲ್ಲಿಂದಾದುದು ಆ ಧ್ಯಾನ ॥**

ಮೇಲೆ ಹೇಳಿದ ಸತ್ಯವನ್ನು ಗಮನದಲ್ಲಿಟ್ಟುಕೊಂಡು ನೋಡಿದರೆ ಆಚಾರ್ಯಶ್ರೀಗಳ ಕೃತಿಯು ಇಂದಿನ ವಾತಾವರಣದಲ್ಲಿ ಒಂದು ಅನುಪಮ ಕೃತಿಯಾಗಿದೆ. ಗದ್ಯದ ಅಪೇಕ್ಷೆಯಿಂದ ಈ ಕೃತಿಯು ಪದ್ಯಬದ್ಧವಾಗಿದೆ. ಪದ್ಯಗಳು ಹೆಚ್ಚು ಲೋಕಪ್ರಿಯವಾಗಿವೆ. ಏಕೆಂದರೆ ಪದ್ಯವನ್ನು ಮೇಲಿಂದ ಮೇಲೆ ಮನನ ಮಾಡುವುದರಿಂದ ಹೆಚ್ಚು ಪ್ರಭಾವ ಹೊಂದಿರುತ್ತದೆ. ಇದು ಸಾಸುವೆಯಲ್ಲಿ ಸಾಗರ ಎನ್ನುವ ಜನಪದ ಮಾತುಗಳನ್ನು ಪುಷ್ಟೀಕರಿಸುತ್ತದೆ. ಇದು ಧ್ಯಾನದ ಬಹು ದೊಡ್ಡ ಸರಳ ಕೀಲಿಯಂತಿದೆ.

ಸಹಜ ಹಾಗೂ ಸುಬೋಧವಾಗಿದೆ. ಯೋಗ, ಧ್ಯಾನ ವಿಷಯಗಳ ಮೇಲೆ ನನ್ನ ಅಭಿರುಚಿಯನ್ನು ಕಂಡು ಆಚಾರ್ಯಶ್ರೀಗಳು ನನಗೆ ಸಮ್ಯಕ್ ಧ್ಯಾನ ಶತಕದ ಒಂದು ಸ್ವಹಸ್ತಲಿಖಿತ ಪ್ರತಿಯನ್ನು ಕೊಟ್ಟರು. ಇದರಿಂದ ನನಗೆ ಆರಂಭದಿಂದ ಅಂತ್ಯದವರೆಗೆ ಓದುವ ಸೌಭಾಗ್ಯ ದೊರಕಿತು. ಇದನ್ನು ನಾನು ಪೂರ್ವ ಪುಣ್ಯದ ಫಲವೆಂದೇ ತಿಳಿದಿದ್ದೇನೆ.

ಈ ಕೃತಿಯಲ್ಲಿ 113 ಪದ್ಯಗಳಿವೆ. 113 ಸಂಖ್ಯೆಗೆ ಅದರದೇ ಆದ ಅಧ್ಯಾತ್ಮಿಕ ಮಹತ್ವವಿದೆ. ಒಂದು ಎಂದರೆ ಆತ್ಮ. 113 ಪದ್ಯಗಳಲ್ಲಿ ಭೇದ ವಿಜ್ಞಾನದ ಪರಿಚಯವಿದೆ. ಅದು ಮೋಕ್ಷ ಪ್ರಾಪ್ತಿಯ ಮೂಲ ಕಾರಣವಿದೆ.

ಈ ಪದ್ಯಗಳ ಭಾವದ ಅನುಸಾರ ಧ್ಯಾನ ಮಾಡಿರಿ. ಅದರಿಂದ ಧರ್ಮಧ್ಯಾನದ ಅರಿವು, ಶಾಂತಿಯ ಉಪಾಯ ಮುಂತಾದವುಗಳು ದೊರೆಯುತ್ತವೆ. ಆರ್ತ ಮತ್ತು ರೌದ್ರಧ್ಯಾನಗಳನ್ನು ಬಿಟ್ಟಾಗಲೇ ಧರ್ಮಧ್ಯಾನವಾಗುತ್ತದೆ.

ಧ್ಯಾನದ ಪೂರ್ವಭೂಮಿಕೆಗಳು ದ್ರವ್ಯ, ಕ್ಷೇತ್ರ, ಕಾಲ ಮತ್ತು ಭಾವ, ಇಂದ್ರಿಯ ಸಂಯಮ (ಪ್ರತ್ಯಾಹಾರ), ಆಸನ, ಆಹಾರ ಇವು ಧ್ಯಾನದಲ್ಲಿ ಮಹತ್ವಪೂರ್ಣ ಹೊಂದಿವೆ ಎನ್ನುವುದು ಇದೆ. ಆಹಾರದಂತೆ ಮನಸ್ಸು, ಧ್ಯಾನದ ಅಂತಿಮ ಸ್ಥಿತಿ ಶುಕ್ಲಧ್ಯಾನವಾಗಿದ್ದು ಅದು ಮೋಕ್ಷದ ಸಾಕ್ಷಾತ್ ಕಾರಣವಾಗಿದೆ. ಕಾವ್ಯಕೃತಿಯನ್ನು ಬಹಳ ಸರಳ ಭಾಷೆಯಲ್ಲಿ ವಿವೇಚನೆ ಮಾಡಲಾಗಿದೆ. ಕೃತಿ ರಚನೆಯಲ್ಲಿ ಕ್ಷೇತ್ರ ಪ್ರಭಾವು ಇರುತ್ತದೆ. ಈ ಕೃತಿಯ ರಚನೆಯು ಆಚಾರ್ಯಶ್ರೀಗಳು ಗೋಪಾಚಲ ಸಿದ್ಧಕ್ಷೇತ್ರದಲ್ಲಿ ಮಾಡಿದ್ದಾರೆ. ಅಲ್ಲಿಂದ ಸುಪ್ರತಿಷ್ಠಿತ ಕೇವಲಿಗಳು ನಿರ್ವಾಣ ಪಡೆದಿದ್ದರು. ಪ್ರಸ್ತುತ ಕೃತಿಯು ಕೆಳಗಿನ ಪದ್ಯ ವಿಶೇಷ ರೂಪದಿಂದ ಚಿಂತನೀಯವಾಗಿದೆ.

## ಮನವೆಂಬ ವಾನರ

**(ಮೂಲ ಹಿಂದಿ)**

**ಮನವನು ವಾನರ ಸಮವೆನ್ನುವರು**
**ಮನವದು ಚಂಚಲವೆಂದರಿತು**
**ಜ್ಞಾನ-ಧ್ಯಾನದಲಿ ನೀನಾಗು**
**ಶಾಂತಿಸುಖದಲಿ ತೇಲಾಡು**

**ವಿಷಯದ ಗಾಳಿಯು**
**ಬೀಸುತಲಿಹುದು**
**ಕಣ್ಣಿನ ಕಿಟಕಿಯಲಿ**

**ಕದವನು ಮುಚ್ಚಿ**
**ಮನವನು ತೆರದು**
**ನಿನ್ನಾತ್ಮನ ನೀ ನೋಡು**

**ತಿರುಗುತಲಿಹುದು**
**ಮನವದು ಜಗದಿ**
**ಮುಸುಕಿತು ನಿಜ ಸುಖವ**

**ಹಿಡಿದಿಡು ಮನವ**
**ಚಿಂತಿಸು ಆತ್ಮನ**
**ಧ್ಯಾನದಿ ದೊರೆವುದು ಕೇವಲಜ್ಞಾನ**

ಈ ಅನುಪಮ ಕೃತಿಯನ್ನು ರಚಿಸಿರುವ ಆಚಾರ್ಯ ಶ್ರೀ 108 ಆರ್ಜವಸಾಗರ ಮಹಾರಾಜರಿಗೆ ಅಂತರಂಗದಿಂದ ನಮೋಸ್ತುಗಳು. ಅಂತಿಮವಾಗಿ ಸರ್ವ ಮುಮುಕ್ಷುಗಳು ಆರ್ತ ಮತ್ತು ರೌದ್ರ ಧ್ಯಾನಗಳನ್ನು ಬಿಟ್ಟು, ವಿಧಿಪೂರ್ವಕ ಧರ್ಮಧ್ಯಾನ ಮಾಡಿ, ಕರ್ಮಗಳ ನಿರ್ಜರೆ ಮಾಡಿ, ಮೋಕ್ಷಮಾರ್ಗದ ಪಥಿಕರಾಗಲಿ ಎನ್ನುವ ಮಂಗಲಭಾವನೆ ಈ ಕೃತಿಯಲ್ಲಿ ಇದೆ.

ಇದಕ್ಕೂ ಮುನ್ನ ಆಚಾರ್ಯಶ್ರೀಗಳು ಜಿನಾಗಮದ ರಹಸ್ಯಗಳನ್ನು, ಜೀವನದಲ್ಲಿ ಬದುಕುವ ಕಲೆಯನ್ನು ತಿಳಿಯಲು ಸರಳ ಸುಬೋಧ ಭಾಷೆಯಲ್ಲಿ ಅನೇಕ ಗ್ರಂಥಗಳ ರಚನೆ ಮಾಡಿದ್ದಾರೆ. ಅವುಗಳಲ್ಲಿ ಜೈನಾಗಮ ಸಂಸ್ಕಾರ, ತೀರ್ಥೋದಯ ಕಾವ್ಯ ಮುಂತಾದವು ಲೋಕಪ್ರಿಯವಾಗಿವೆ.

**ಆಚಾರ್ಯಶ್ರೀಗಳ ಚರಣಗಳಲ್ಲಿ ನಮೋಸ್ತು, ಮಂಗಲವಾಗಲಿ**

**ಬಾಬುಲಾಲ್ ಸೇಠಿ (ಜೈನ)**
Mcom., S.A.S. AICWA ACA
ಅಧ್ಯಕ್ಷರು – ಆರೋಗ್ಯ ಭಾರತಿ ಜಯಪುರ
12, ಮಿಲಾಪ ನಗರ, ಬ್ಯಾಂಕ್ ರೋಡ್, ಜಯಪುರ, ರಾಜಸ್ಥಾನ

ಆಶೀರ್ವಚನ

# ಧ್ಯಾನದ ಪ್ರಕ್ರಿಯೆ

**ಆಚಾರ್ಯ ಶ್ರೀ ಆರ್ಜವಸಾಗರ್**

'ಧ್ಯೈ ಚಿಂತಾಯಾಮ್' ಧಾತುವಿನಿಂದ ಧ್ಯಾನ ಶಬ್ದ ನಿಷ್ಪನ್ನವಾಗುತ್ತದೆ. ಅದರ ಅರ್ಥ ಚಿಂತನೆ, ಮನನ ಮಾಡುವುದು ಎಂದಾಗಿದೆ. ತತ್ತ್ವಾರ್ಥಸೂತ್ರದ 'ಏಕಾಗ್ರಚಿಂತಾನಿರೋಧ...' ಸೂತ್ರದಲ್ಲಿ 'ಏಕ' ಪದದ ಅರ್ಥ 'ಕೇವಲ' ಮತ್ತು 'ಅಗ್ರ' ಪದದ ಅರ್ಥ 'ಮುಖ್ಯ' ಎಂದಿದೆ. ಏಕ+ಅಗ್ರ ಅದು 'ಏಕಾಗ್ರ'ವಾಗಿದೆ. ನಿರೋಧದ ಅರ್ಥ ನಿಯಂತ್ರಣ ಅಥವಾ ತಡೆಯುವುದು ಎಂದಾಗುತ್ತದೆ. ಅನ್ಯ ಪದಾರ್ಥದಲ್ಲಿ ಮುಖ್ಯವಾದವು ಅರ್ಥಾತ್ ಪದಾರ್ಥಗಳಿಂದ ಸರಿದು ಅಥವಾ ನಿವೃತ್ತರಾಗಿ, ಒಂದೇ ಪದಾರ್ಥದ ಚಿಂತನೆಯಲ್ಲಿ ಸ್ಥಿರವಾಗಿರುವುದು 'ಧ್ಯಾನ'ವೆಂದು ಕರೆಯಲಾಗುತ್ತದೆ. ಶುಕ್ಲಧ್ಯಾನರೂಪದ ಉತ್ಕೃಷ್ಟ ಧ್ಯಾನದ ಅಪೇಕ್ಷೆಯಿಂದ 'ಅಗ್ರ'ದ ಅರ್ಥ 'ಪ್ರಥಮ' ಅಥವಾ 'ಮುಖ್ಯ' ಎಂದಾಗುತ್ತದೆ. ಇದರಿಂದ ಧ್ಯಾನಿಗೆ ಎಲ್ಲ ಪದಾರ್ಥಗಳ ಪ್ರಥಮವು ತನ್ನ ಆತ್ಮನೇ ಆಗಿದ್ದಾನೆ ಹಾಗೂ ತತ್ತ್ವಗಳಲ್ಲಿ ಅಗ್ರಗಣ್ಯವಾದುದರಿಂದ ಅಗ್ರ ಶಬ್ದದಿಂದ ಆತ್ಮನ ಸ್ಮರಣೆ ಮಾಡಲಾಗಿದೆ. ಕೇವಲ ಆತ್ಮನ ಧ್ಯಾನದಲ್ಲಿ ಚಿತ್ತವೃತ್ತಿಯ ನಿಯಂತ್ರಣವಾಗುವುದು ಉತ್ತಮ ಧ್ಯಾನವಾಗಿದೆ.

ಸಂಸಾರದಲ್ಲಿ ಜೀವನು ಕರ್ಮದಿಂದ ಬದ್ಧನಾಗಿ ಅನಾದಿಕಾಲದಿಂದ ಚತುರ್ಗತಿಯಲ್ಲಿ ಪರಿಭ್ರಮಣೆ ಮಾಡುತ್ತಿದ್ದಾನೆ. ಆ ಜೀವನು ವೀತರಾಗಿ, ದೇವಾಧಿದೇವ, ಅರಿಹಂತ ಭಗವಾನ್, ನಿರ್ಗ್ರಂಥ ಗುರು ಹಾಗೂ ಸಮೀಚೀನ ಶಾಸ್ತ್ರವನ್ನು ನಿಮಿತ್ತ ಮಾಡಿಕೊಂಡು ಇವುಗಳ ಮೇಲೆ ಅಗಾಧ ಭಕ್ತಿಯನ್ನು ಧಾರಣೆ ಮಾಡಿ ಹಾಗೂ ಇವುಗಳ ಮೂಲಕ ಮೇಲೆ ಹೇಳಿದ ಮಾರ್ಗದಲ್ಲಿ ಅಚಲವಾದ ಶ್ರದ್ಧೆಯನ್ನು ಹೊಂದಿ, ಆತ್ಮನ ನಿಜವಾದ ಸ್ವರೂಪವನ್ನು ಗುರುತಿಸಿ, ಅದರ ಶ್ರದ್ಧೆ ಮಾಡಿ, ನಿರ್ಗ್ರಂಥನಾಗಿ, ಅದರಲ್ಲಿಯೇ ಲೀನನಾದಾಗ ಸಂಸಾರದ ಬಂಧನದಿಂದ ಮುಕ್ತನಾಗುತ್ತಾನೆ.

ಸಮ್ಯಗ್ದರ್ಶನ, ಸಮ್ಯಕ್‌ಜ್ಞಾನ ಮತ್ತು ಸಮ್ಯಕ್ಚಾರಿತ್ರಗಳು ಮುಕ್ತಿಯ ಸಾಧನಗಳಾಗಿವೆ. ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರ ಮತ್ತು ಮೋಕ್ಷ ಈ ಏಳು ತತ್ತ್ವಗಳಲ್ಲಿ ಯಥಾರ್ಥ ಶ್ರದ್ಧೆ ಹೊಂದುವುದು ಸಮ್ಯಗ್ದರ್ಶನವಾಗಿದೆ. ಜೀವದಲ್ಲಿ ಅಜೀವರೂಪದ ಕರ್ಮ ಬರುವುದು 'ಅಸ್ರವ'ವಾಗಿದೆ. ಹಾಗೂ ಜೀವದೊಂದಿಗೆ ಕರ್ಮದ ಬಂಧವಾಗುವುದು 'ಬಂಧ'ವಾಗಿದೆ. ಈ ಆಸ್ರವ ಬಂಧಗಳೇ ಸಂಸಾರದ ಪ್ರಮುಖ ಕಾರಣಗಳಾಗಿವೆ ಹಾಗೂ ಸಂಸಾರದ ಅಭಾವರೂಪ ಮೋಕ್ಷದ ಪ್ರಮುಖ ಕಾರಣ ಸಂವರ ಮತ್ತು ನಿರ್ಜರೆಗಳಾಗಿವೆ. ಸಂವರ ಮತ್ತು ನಿರ್ಜರೆಗಳ ಪ್ರಮುಖ ಕಾರಣ ಸಮ್ಯಕ್‌ಜ್ಞಾನ ಮತ್ತು ಸಮ್ಯಕ್ಚಾರಿತ್ರಗಳಾಗಿವೆ. ಸಮ್ಯಕ್ಚಾರಿತ್ರದಲ್ಲಿ ತಪವು ಸಹ ಗರ್ಭಿತವಾಗಿದೆ ಹಾಗೂ ತಪವು ಬಾಹ್ಯ ಮತ್ತು ಅಭ್ಯಂತರ ಭೇದಗಳಿಂದ ಎರಡು ಪ್ರಕಾರವಾಗಿದೆ. ಅಭ್ಯಂತರ ತಪಗಳ ಭೇದಗಳಲ್ಲಿ ಧ್ಯಾನವು ಒಂದು ಭೇದವಾಗಿವೆ. ತತ್ತ್ವಾರ್ಥಸೂತ್ರದಲ್ಲಿ 'ಆರ್ತರೌದ್ರಧರ್ಮಶುಕ್ಲಾನಿ' ಈ ಸೂತ್ರದ ಮೂಲಕ ಧ್ಯಾನವನ್ನು ನಾಲ್ಕು ಪ್ರಕಾರದ್ದೆಂದು ಹೇಳಿದೆ. ಮುಂದಿನ ಸೂತ್ರದಲ್ಲಿ 'ಪರೇ ಮೋಕ್ಷ ಹೇತು' ಅರ್ಥಾತ್ ನಂತರದ ಧರ್ಮ ಮತ್ತು ಶುಕ್ಲ ಧ್ಯಾನಗಳು ಮೋಕ್ಷಕ್ಕೆ ಕಾರಣಗಳಾಗಿವೆ. ಇದರ ಅರ್ಥ ಪಾರಿಶೇಷ ನ್ಯಾಯದಿಂದ 'ಪೂರ್ವೇ ಸಂಸಾರ ಹೇತು' ಅರ್ಥಾತ್ ಮೊದಲು ಹೇಳಿದ ಆರ್ತ-ರೌದ್ರ ಧ್ಯಾನಗಳು ಸಂಸಾರಕ್ಕೆ ಕಾರಣಗಳಾಗಿವೆ ಎಂದು ಸ್ವಯಂ ಸಿದ್ಧವಾಗುತ್ತದೆ. ಇದೇ ವಿವರಣೆಯಿಂದ ಸಾಕ್ಷಾತ್ ಮತ್ತು ಪರಂಪರೆಯಿಂದ ಮೋಕ್ಷಕ್ಕೆ ಕಾರಣಗಳಾದ ಧರ್ಮ ಮತ್ತು ಶುಕ್ಲಧ್ಯಾನಗಳು ಶುಭರೂಪದ ಧ್ಯಾನಗಳಾಗಿದ್ದು ಮತ್ತು ಸಂಸಾರಕ್ಕೆ ಕಾರಣಗಳಾದ ಆರ್ತ-ರೌದ್ರ ಧ್ಯಾನಗಳು ಅಶುಭ ರೂಪದ ಧ್ಯಾನಗಳೆಂದು ಸ್ಪಷ್ಟವಾಗುತ್ತದೆ. ಯಾರಾದರೂ ಭವ್ಯರು ನನಗೆ ಧ್ಯಾನದ ಅಭ್ಯಾಸ ಮಾಡಬೇಕಾಗಿದೆ ಎಂದರೆ ಸಂಸಾರದ ಪ್ರತಿಯೊಂದು ಪ್ರಾಣಿಗೆ ಅಶುಭ ಧ್ಯಾನದ ಅಭ್ಯಾಸ ಅನಾದಿಕಾಲದಿಂದ ಆಗುತ್ತಾ ಇದೆ ಆದರೆ ಶುಭಧ್ಯಾನಗಳಿಗೆ ವಿಶಿಷ್ಟ ಪುರುಷಾರ್ಥ ರೂಪ ಸಮ್ಯಗ್ದರ್ಶನ ಪೂರ್ವಕವಾಗಿ ಜ್ಞಾನ, ಚಾರಿತ್ರ ಅಥವಾ ಸಂವರ ನಿರ್ಜರೆಗಳ ಸಾಧನಾರೂಪದ ಗುಪ್ತಿ, ಸಮಿತಿ, ಧರ್ಮ ಅನುಪ್ರೇಕ್ಷಾ, ಪರಿಷಹ-ಜಯ ಹಾಗೂ ಚಾರಿತ್ರಗಳ ಅನಿವಾರ್ಯತೆ ಇರುತ್ತದೆ.

ಪರಿಗ್ರಹವುಳ್ಳ ಮೋಹಿ ಸಂಸಾರದ ಎಲ್ಲ ಪ್ರಾಣಿಗಳು ಚಿಂತೆಗಳಲ್ಲಿ ಸಿಲುಕಿದ್ದಾರೆ, ಅವರ ಹೃದಯದಲ್ಲಿ ಆಕುಲತೆ ವ್ಯಾಕುಲತೆಗಳ ಪರಿಣಾಮಗಳಿಂದ ಆರ್ತ-ರೌದ್ರ ಧ್ಯಾನಗಳ ನಿರಂತರತೆ ಇದ್ದು ಹಾಗೂ ತತ್ತ್ವ ಚಿಂತನೆಗಳೊಂದಿಗೆ ಧರ್ಮಧ್ಯಾನವಾಗದಿದ್ದರೆ ಚಿತ್ತ ನಿವೃತ್ತಿಯೊಂದಿಗೆ ಸಮೀಚೀನ ಅರ್ಥಾತ್ ಸಮ್ಯಕ್‌ಜ್ಞಾನವಾಗುವುದಿಲ್ಲ. ಸಮಾಧಿತಂತ್ರದಲ್ಲಿ ಧ್ಯಾನಿ ಸಾಧಕರ ಮನರೂಪದ ಜಲ, ರಾಗ-ದ್ವೇಷ ಇತ್ಯಾದಿಗಳ ಲಹರಿಗಳಿಂದ ಚಂಚಲಮನವಾಗದೇ ಇದ್ದರೆ ಅವರೇ ಆತ್ಮನ ನಿಜವಾದ ಸ್ವರೂಪವನ್ನು ಕಾಣುತ್ತಾರೆಂದು ಹೇಳಿದ್ದಾರೆ. ಉಳಿದವರು ಆ ಆತ್ಮ ತತ್ತ್ವದ ದರ್ಶನವನ್ನು ಮಾಡಲಾರರು.

ಶ್ಲೋಕ –

**ರಾಗದ್ವೇಷಾದಿ ಕಲ್ಲೋಲೈರಲೌಲಂ ಯನ್ಮನೋ ಜಲಂ**
**ಸ ಪಶ್ಯತ್ಯಾತ್ಮನಸ್ತತ್ತ್ವಂ, ತತ್‌ತತ್ತ್ವಂ ನೇತರೋ ಜನಂ** (ಸಮಾಧಿತಂತ್ರ)

ಎಷ್ಟೋ ದಾರ್ಶನಿಕರು ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ ಹಾಗೂ ಸಮಾಧಿ ಈ ಎಂಟನ್ನು ಯೋಗದ ಅಂಗಗಳೆಂದು ಒಪ್ಪಿದ್ದಾರೆ ಹಾಗೂ ಕೆಲವು ದಾರ್ಶನಿಕರು ಯಮ, ನಿಯಮಗಳನ್ನು ಬಿಟ್ಟು ಉಳಿದ ಆರು ಸಂಗತಿಗಳನ್ನು ಯೋಗದ ಅಂಗಗಳೆಂದು ಒಪ್ಪಿದ್ದಾರೆ. ಶುಭಚಂದ್ರಾಚಾರ್ಯರು ಉತ್ಸಾಹ, ನಿಶ್ಚಯ, ಧೈರ್ಯ, ಸಂತೋಷ, ತತ್ತ್ವನಿರ್ಣಯ ಹಾಗೂ ಜನಪದ ತ್ಯಾಗ ಈ ಆರು ಸಂಗತಿಗಳಿಂದ ಮುನಿಗೆ ಯೋಗಗಳ ಸಿದ್ಧಿಯಾಗುತ್ತದೆಂದು ಹೇಳಿದ್ದಾರೆ. ಇನ್ನೂ ಕೆಲವರು ಗುರು ಉಪದೇಶ, ಉಪದೇಶದ ಮೇಲಿನ ಭಕ್ತಿ, ದೃಢಶ್ರದ್ಧೆ, ತತ್ತ್ವಚಿಂತನೆ ಹಾಗೂ ಮನದ ಸ್ಥಿರತೆ ಇವು ಸಮ್ಯಕ್ ಧ್ಯಾನದ ಪ್ರಮುಖ ಸಾಧನಗಳಾಗಿವೆ ಎಂದು ಹೇಳುತ್ತಾರೆ. ಯೋಗಗಳ ಎಂಟು ಅಂಗಗಳ ಸಮೀಚೀನ ಅರ್ಥ ಹೀಗಿದೆ–

1. **ಯಮ** – ಅಹಿಂಸಾದಿ ವ್ರತಗಳನ್ನು ಜೀವನಪರ್ಯಂತ ಧಾರಣೆ ಮಾಡುವುದು 'ಯಮ'ವಾಗಿದೆ.

2. **ನಿಯಮ** – ದೇವಪೂಜೆ ಇತ್ಯಾದಿಗಳನ್ನು ನಿಯತಕಾಲದ ಷಟ್‌ಕರ್ಮ ಮತ್ತು ನಿಯತಕಾಲದ ಭೋಗೋಪಭೋಗ ಪರಿಮಾಣಗಳ ನಿಯಮ ಮಾಡುವುದು 'ನಿಯಮ'ವಾಗಿದೆ.

3. **ಆಸನ –** ಪದ್ಮಾಸನ, ಅರ್ಧಪದ್ಮಾಸನ, ಖಡ್ಗಾಸನಗಳಂತಹ ನಿಶ್ಚಲ ಮತ್ತು ದೃಢ ಆಸನಗಳನ್ನು ಆಸನಗಳೆಂದು ಸ್ವೀಕರಿಸಲಾಗಿದೆ. ಆಸನಗಳೊಂದಿಗೆ ಖಡ್ಗಾಸನದಲ್ಲಿ ನಿಂತಿರುವ ವ್ಯಕ್ತಿಯ ಕಾಲುಗಳ ನಡುವೆ ನಾಲ್ಕು ಅಂಗುಲ ಅಂತರವಿದ್ದು ಹಾಗೂ ಎರಡು ಹೆಬ್ಬೆರಳುಗಳ ನಡುವೆ 12 ಅಂಗುಲಗಳ ಅಂತರವಿರಲಿ. ಪದ್ಮಾಸನದಲ್ಲಿ ಮಾಡಲು ಎಡಗಡೆಯ ಕಾಲಿನ ಮೇಲೆ ಬಲಗಾಲನ್ನು ಇಟ್ಟು ಹಾಗೂ ಎಡಗಡೆಯ ಕೈಮೇಲೆ ಬಲಗಡೆಯ ಕೈ ಇರಲಿ. ಬೆನ್ನು ಮತ್ತು ಮುಖ ನೇರವಾಗಿರಲಿ, ದೃಷ್ಟಿಯು ಮೂಗಿನ ತುದಿಯ ಮೇಲಿರಲಿ.

4. **ಪ್ರಾಣಾಯಾಮ –** ಪೂರಕ, ಕುಂಭಕ ಮತ್ತು ರೇಚಕ ಇವುಗಳ ಮೂಲಕ ವಾಯುವಿನ ಉಸಿರಾಟ ಸಂಚಾರದಿಂದ ಪ್ರಾಣಾಯಾಮ ಮಾಡಲಾಗುತ್ತದೆ. ವಾಯುವನ್ನು ಒಳಗೆ ತೆಗೆದುಕೊಳ್ಳುವುದು 'ಪೂರಕ'ವಾಗಿದೆ. ವಾಯುವನ್ನು ಹೊಟ್ಟೆಯಲ್ಲಿ ಧಾರಣೆ ಮಾಡುವುದು 'ಕುಂಭಕ' ಮತ್ತು ಹೊರಗೆ ಬಿಡುವುದು 'ರೇಚಕ'ವೆನ್ನುತ್ತಾರೆ.

5. **ಪ್ರತ್ಯಾಹಾರ –** ಭೋಗ ವಿಷಯಗಳಿಂದ ವಿರಕ್ತರಾಗಿ ಚಿತ್ತದ ನಿರೋಧವಾದಾಗ ಇಂದ್ರಿಯಗಳನ್ನು ತಮ್ಮ ವಶ ಮಾಡಿಕೊಳ್ಳುವುದನ್ನು ಪ್ರತ್ಯಾಹಾರವೆನ್ನುತ್ತಾರೆ.

6. **ಧಾರಣಾ –** ಚಿತ್ತವನ್ನು ನಾಭಿಮಂಡಲ, ಹೃದಯಕಮಲ, ತುಟಿ, ಮೂಗು, ಹಣೆ ಮತ್ತು ತಲೆ ಇತ್ಯಾದಿಗಳಲ್ಲಿ ಅಥವಾ ಪೃಥ್ವಿ, ಅಗ್ನಿ, ವಾಯು, ಜಲ ಮತ್ತು ತತ್ತ್ವಧಾರಣೆಯ ಆಲಂಬನದಿಂದ ಏಕಾಗ್ರತೆಯಲ್ಲಿ ಲೀನರಾಗಿ ನಿರಾಕುಲ ಅವಸ್ಥೆಯನ್ನು ಹೊಂದುವುದಕ್ಕೆ ಧಾರಣೆ ಎನ್ನುತ್ತಾರೆ.

7. **ಧ್ಯಾನ –** ಒಂದೇ ತತ್ತ್ವದಲ್ಲಿ ಸ್ಥಿರತೆಯಿಂದ ಚಿಂತನೆ ಮಾಡುವುದರ ಹೆಸರು 'ಧ್ಯಾನ'.

8. **ಸಮಾಧಿ –** ಧ್ಯಾನ, ಧ್ಯಾನಿ, ಧ್ಯೇಯ ಈ ವಿಕಲ್ಪಗಳಿಂದ ರಹಿತವಾದ ಆತ್ಮ ತಲ್ಲೀನತಾರೂಪ, ಶೂನ್ಯದ ಸಮಾನ ಅರ್ಥ ಅಭಿಪ್ರಾಯರೂಪದ ಅವಸ್ಥೆ ಬಂದಾಗ ಅದನ್ನು ನಿರ್ವಿಕಲ್ಪಸಮಾಧಿ ಎಂದು ಹೇಳಲಾಗುತ್ತದೆ.

ಜೈನದರ್ಶನದಲ್ಲಿ ಇದನ್ನು ನಿರ್ಗ್ರಂಥರ ಜೀವನದಲ್ಲಿ ನಿರ್ವಿಕಲ್ಪ ಸಮಾಧಿ ಎಂದು ಹೇಳಲಾಗುತ್ತದೆ. ಅದನ್ನು ಶುದ್ಧೋಪಯೋಗದ ಉತ್ಕೃಷ್ಟ ಅವಸ್ಥೆ ಅಥವಾ ಶುಕ್ಲಧ್ಯಾನರೂಪದಿಂದ ಇಂಗಿತಗೊಳಿಸಲಾಗುತ್ತದೆ.

ವಿದ್ವಾಂಸರು ಧರ್ಮಧ್ಯಾನದ ನಂತರ ಪ್ರಾಣಾಯಾಮವನ್ನು ವ್ಯಾಖ್ಯಾನ ಮಾಡುತ್ತಾ ತಮ್ಮ ಸಿದ್ಧಾಂತದ ನಿರ್ಣಯ ಮಾಡುವ ಮುನಿಗಳು ಧ್ಯಾನದ ಸಿದ್ಧಿಯ ನಿಮಿತ್ತವಾಗಿ, ಮನಸ್ಸಿನ ಸ್ಥಿರತೆಗಾಗಿ ಪ್ರಾಣಾಯಾಮದ ಪ್ರಶಂಸೆ ಮಾಡುತ್ತಾರೆಂದು ಮೊಟ್ಟ ಮೊದಲು ವರ್ಣಿಸಿದ್ದಾರೆ. ಆದ್ದರಿಂದ ಬುದ್ಧಿವಂತ ಭವ್ಯ ಜನರು ಅದನ್ನು ಪಡೆಯಬೇಕು. ಏಕೆಂದರೆ ಇದರ ಹೊರತಾಗಿ ಮನಸ್ಸಿನ ಮೇಲೆ ವಿಜಯ ಸಾಧಿಸುವುದು ಸಾಧ್ಯವಿಲ್ಲ. ಆಚಾರ್ಯರು ಪ್ರತ್ಯಾಹಾರಕ್ಕಾಗಿ, ಸಮಾಧಿಸಿದ್ಧಿಗಾಗಿ ನಿಯಮಿತ ರೂಪದಿಂದ ಪ್ರಶಂಸನೀಯವೆಂದು ಹೇಳಿದ್ದಾರೆ. **'ಜ್ಞಾನಾರ್ಣವ'** ಶಾಸ್ತ್ರದಲ್ಲಿ ಶುಭಚಂದ್ರಾಚಾರ್ಯರು ಹೀಗೆ ಹೇಳಿದ್ದಾರೆ.

**ನಿಃಸಂಗಃ ಸಂವೃತಸ್ವಾಂತಃ ಕೂರ್ಮವೃತ್ಸಂವೃತೇಂದ್ರಿಯಃ ।**
**ಯಮೀ ಸಮತ್ವಮಾಪನ್ನೋ ಧ್ಯಾನತನ್ವೇ ಸ್ಥಿರೀ ಭವೇತ್ ॥**

**ಅರ್ಥ** – ಪರಿಗ್ರಹಗಳಿಂದ ನಿರ್ಮಮತ್ವರಾದ ಮುನಿಗಳು ಮನ ಸಾವದ್ಯ ಪ್ರವೃತ್ತಿಯಿಂದ ರಹಿತರಾಗಿರುತ್ತಾರೆ ಹಾಗೂ ಅವರ ಇಂದ್ರಿಯಗಳು ಆಮೆಯ ಹಾಗೆ ಸಂಕುಚಿತವಾಗಿ ಸ್ವಾಧೀನವಾಗಿರುತ್ತವೆ. ಅವರು ಸಮತಾಭಾವವನ್ನು ಹೊಂದಿ ಧ್ಯಾನದ ಸಿದ್ಧಿಯಲ್ಲಿ ದೃಢರಾಗಿರುತ್ತಾರೆ. ಅನಂತರ ಪ್ರತ್ಯಾಹಾರ ಮಹಿಮೆಯನ್ನು ಪಡೆದ ಆತ್ಮನಿಗೆ ಪ್ರಾಣಾಯಾಮದ ಅವಶ್ಯಕತೆ ಇರುವುದಿಲ್ಲ ಏಕೆಂದರೆ ಪ್ರಾಣಾಯಾಮದಿಂದ ಪ್ರಾಣ ಹಾಗೂ ಶರೀರ ಬಾಧಿತವಾಗುತ್ತದೆ.

**ಸಮ್ಯಕ್ ಸಮಾಧಿ ಸಿದ್ಧ್ಯರ್ಥಂ ಪ್ರತ್ಯಾಹಾರಃ ಪ್ರಶಸ್ಯತೇ ।**
**ಪ್ರಾಣಾಯಾಮೇನ ವಿಕ್ಷಿಪ್ತಂ ಮನಃ ಸ್ವಾಸ್ಥ್ಯಂ ನ ವಿಂದತಿ ॥ 1459 ॥**
**ಪೂರಣೇ, ಕುಂಭನೇ ಚೈವ ತಥಾ ಶ್ರ್ಯವಸನನಿರ್ಗಮೇ ।**
**ವ್ಯಾಗ್ರಿ ಭವಂತಿ ಚೇತೋಽಸಿ ಕ್ಲಿಶ್ಯಮಾನಾನಿ ವಾಯುಭಿಃ ॥ 1465 ॥**

**(ಜ್ಞಾನಾರ್ಣವ)**

**ಅರ್ಥ –** ಪ್ರಾಣಾಯಾಮವನ್ನು ಅಸ್ವಸ್ಥಗೊಳಿಸಿ ಕಷ್ಟಕರವಾದ ಹಾಗೂ ಮುಕ್ತಿಯನ್ನು ಪಡೆಯುವಲ್ಲಿ ಬಾಧಕವೆಂದು ಹೇಳಲಾಗಿದೆ. ಧ್ಯಾನದ ಅಧಿಕಾರಿ ಯಾರು ಆಗಬಲ್ಲರು? ಇದರ ವರ್ಣನೆಯನ್ನು ಮಾಡುತ್ತಾ ಆಚಾರ್ಯರು ಹೀಗೆ ಹೇಳುತ್ತಾರೆ.

**ವಿರಜ್ಯ ಕಾಮಭೋಗೇಷು ವಿಮುಚ್ಯ ವಪುಷಿ ಸ್ಪೃಹಾಮ್ ।**
**ನಿರ್ಮಮತ್ವಂ ಯದಿ ಪ್ರಾಪ್ತಸ್ತದಾ ಧ್ಯಾತಾಸಿ ನಾನ್ಯಥಾ ॥ 269 ॥**

(ಜ್ಞಾನಾರ್ಣವ)

**ಅರ್ಥ –** ಒಂದು ವೇಳೆ ನೀನು ಕಾಮಭೋಗಗಳಿಂದ ವಿರಕ್ತನಾಗಿ ಶರೀರದ ವಿಷಯದಲ್ಲಿ ನಿಸ್ಪೃಹನಾಗುತ್ತಾ ನಿರ್ಮಮತ್ವವನ್ನು ಹೊಂದಿದ್ದರೆ ಧ್ಯಾನದ ಅಧಿಕಾರಿ ಆಗಬಹುದು ಇಲ್ಲವಾದರೆ ಇಲ್ಲ.

ಸಮ್ಯಕ್‌ಜ್ಞಾನದ ಪ್ರಸಿದ್ಧಿಗಾಗಿ ಸುಯೋಗ್ಯ ದ್ರವ್ಯ, ಕ್ಷೇತ್ರ, ಕಾಲ ಮತ್ತು ಭಾವಗಳಿರುವುದು ಅನಿವಾರ್ಯವಾಗಿದೆ.

## ಸುಯೋಗ್ಯ ದ್ರವ್ಯ

ಭವ್ಯ ಆತ್ಮನು ಸ್ವಯಮೇವ ಆಧಾರ, ಧ್ಯಾನಿ ಮತ್ತು ಸಾಧ್ಯರೂಪ ಜೀವದ್ರವ್ಯವೆಂದು ಹೇಳಲಾಗುತ್ತದೆ. ಆರೋಗ್ಯಕರ ಶರೀರ, ಶ್ರೇಷ್ಠ ಸಂಹನನ, ಪದ್ಮಾಸನ, ಸಿದ್ಧಾಸನ, ಖಡ್ಗಾಸನ ಇತ್ಯಾದಿ ಆಸನಗಳು ಹಾಗೂ ಸಾತ್ವಿಕ, ಶುದ್ಧ ಪ್ರಾಸುಕ ಆಹಾರ ಇವೆಲ್ಲವೂ ಅಜೀವದ್ರವ್ಯಗಳೆಂದು ಹೇಳಲಾಗುತ್ತದೆ.

## ಸುಯೋಗ್ಯ ಕ್ಷೇತ್ರ

(ಆಚಾರ್ಯ ಸಮಂತಭದ್ರಸ್ವಾಮಿಗಳು)

**ಏಕಾಂತೇ ಸಾಮಯಿಕಂ ನಿರ್ವ್ಯಾಕ್ಷೇಪೇ ವನೇಷು ವಾಸ್ತುಷು ಚ ।**
**ಚೈತ್ಯಾಲಯೇಷು ವಾಪಿ ಚ ಪರಿಚೇತವ್ಯಂ ಪ್ರಸನ್ನದಿಯಾ ॥ 99 ॥**

(ರತ್ನಕರಂಡಕ ಶ್ರಾವಕಾಚಾರ)

**ಅರ್ಥ –** ಬಾಧಾರಹಿತವಾದ ಏಕಾಂತ ಕ್ಷೇತ್ರ (ಕೋಲಾಹಲ ಸಾಂಸಾರಿಕ ವಿಷಯಗಳಿಂದ ರಹಿತವಾದ) ವನ, ಗೃಹ ಅಥವಾ ಚೈತ್ಯಾಲಯ ರೂಪದಲ್ಲಿದ್ದು ಚಿತ್ತದೊಂದಿಗೆ ಸಾಮಾಯಿಕವನ್ನು

ವೃದ್ಧಿಸಿಕೊಳ್ಳಬೇಕು. ಏಕೆಂದರೆ ಇವಿಲ್ಲದೇ ಧ್ಯಾನಾಭ್ಯಾಸವಾಗುವುದು ಬಹುಶಃ ಅಸಂಭವವಾಗಿದೆ. ಆದರೆ ಸುದರ್ಶನ ಮುನೀಶ್ವರ ಮುಂತಾದವರಂತೆ ಅಭ್ಯಾಸ ಮಾಡಿದ ಆತ್ಮಗಳು ಯಾವುದೇ ರೀತಿಯಲ್ಲಿ ಬಾಧಿತ ಸ್ಥಳಗಳಲ್ಲಿಯೂ ಸಹ ಧ್ಯಾನಲೀನತೆಯನ್ನು ಸಾಧಿಸಬಲ್ಲರು.

## ಸುಯೋಗ್ಯಕಾಲ

ಸಂಧ್ಯಾ ಅಥವಾ ಸಂಧ್ಯಾಕಾಲದಲ್ಲಿ ಸುಷಮ್ನಾ ನಾಡಿ (ಸೂರ್ಯ ಮತ್ತು ಚಂದ್ರರಿಬ್ಬರೂ ಸ್ವರ ರೂಪದ) ನಡೆಯುವ ಬೆಳಗಿನ ಕಾಲ, ಮಧ್ಯಾಹ್ನ ಮತ್ತು ಸಾಯಂಕಾಲ ಧ್ಯಾನಕ್ಕಾಗಿ ಉಪಯುಕ್ತ ಕಾಲವೆಂದು ತಿಳಿಯಬೇಕು. ಇಂತಹ ಕಾಲದಲ್ಲಿ ಏಕಾಗ್ರತೆ ಹಾಗೂ ಸಮತಾರೂಪದ ಸಾಮಾಯಿಕ ಸಹಜತೆಯಿಂದ ವೃದ್ಧಿಯಾಗುತ್ತದೆ.

## ಸುಯೋಗ್ಯ ಭಾವ

**ಸಮತಾ ಸರ್ವಭೂತೇಷು ಸಂಯಮೇ ಶುಭಭಾವನಾ ।**
**ಆರ್ತರೌದ್ರಪರಿತ್ಯಾಸ್ತದ್ಧಿ ಸಾಮಾಯಿಕಂ ಮತಂ ॥**


**ಅರ್ಥ –** ಎಲ್ಲ ಜೀವಗಳಲ್ಲಿ ರಾಗ–ದ್ವೇಷ ರಹಿತ ಸಾಮ್ಯ ಪರಿಣಾಮ ಹೊಂದುವುದು, ಸಂಯಮಮಯ ಅರ್ಥಾತ್ ಪ್ರಾಣಿಗಳ ರಕ್ಷಣೆ ಮಾಡುತ್ತಾ 25, 16 ಇತ್ಯಾದಿ 70 ಪ್ರಕಾರಗಳ ಭಾವನೆಗಳನ್ನು ಚಿಂತನೆ ಮಾಡುತ್ತಾ ಹಾಗೂ ಆರ್ತ ರೌದ್ರ ಧ್ಯಾನಗಳನ್ನು ವಿಸರ್ಜನೆ ಮಾಡುತ್ತಾ ಜೊತೆಯಲ್ಲಿ ಆಜ್ಞಾವಿಚಯ, ಅಪಾಯವಿಚಯ, ವಿಪಾಕವಿಚಯ ಹಾಗೂ ಸಂಸ್ಥಾನವಿಚಯ ರೂಪದ ಧರ್ಮಧ್ಯಾನದ ಚಿಂತನೆ, ಮಂಥನವನ್ನು ತನ್ನ ಆತ್ಮನಲ್ಲಿ ಮಾಡುತ್ತಾ ಏಕಾಗ್ರತೆಯನ್ನು ಹೊಂದುವುದು ಸುಯೋಗ್ಯ ಭಾವವೆಂದು ಹೇಳಲಾಗುತ್ತದೆ.

ಆತ್ಮನಲ್ಲಿ ಅನಾದಿಕಾಲದಿಂದ ವಿಷಯ ಕಷಾಯಗಳ ಪ್ರವಾಹ ಹರಿಯುತ್ತಲಿದೆ. ಅದರ ವಾಸನೆಯಿಂದ ಮನಸ್ಸನ್ನು ಸ್ಥಿರಗೊಳಿಸುವುದು ಹಾಗೂ ಧರ್ಮಧ್ಯಾನದ ಕಡೆಗೆ ಆಕರ್ಷಿತವಾಗುವಂತೆ ಮಾಡುವುದು ಪ್ರತಿಯೊಂದು ಆತ್ಮನ ಹಿಡಿತದಲ್ಲಿರುವ ಸಂಗತಿಯಲ್ಲ. ಆದರೆ ಮಂಗನಂತೆ

ಚಂಚಲ ಜೀವನ ಅಥವಾ ಮನವೆಂಬ ಭೂತವನ್ನು ದಾನ, ಪೂಜೆ ಮುಂತಾದ ಧಾರ್ಮಿಕ ಕಾರ್ಯಗಳಲ್ಲಿ ಅನುರಕ್ತರಾಗುವಂತೆ ಮಾಡುವವರು ಹಾಗೂ ಕೆಲವು ವಿಶೇಷ ಭವ್ಯ ಆತ್ಮರುಗಳು ಪಂಚೇಂದ್ರಿಯಗಳ ಹೊಡೆತಗಳಿಂದ ಬರುವ ಇಂದ್ರಿಯ ಭೋಗ ವಿಷಯಗಳ ಗಾಳಿಯನ್ನು ತಡೆದು ಆಮೆಯಂತೆ ತಮ್ಮ ಇಂದ್ರಿಯಗಳ ಕ್ರಿಯೆಗಳಿಗೆ ವಿರಾಮ ನೀಡಿ ಯಮ, ನಿಯಮ, ಆಸನ ಇತ್ಯಾದಿಗಳೊಂದಿಗೆ ಸುಯೋಗ್ಯ ದ್ರವ್ಯ, ಕ್ಷೇತ್ರ, ಕಾಲ ಮತ್ತು ಭಾವಗಳೊಂದಿಗೆ ಧ್ಯಾನದಲ್ಲಿ ಲೀನರಾಗುತ್ತಾರೆ. ಆಗ ಅವರು, ಚಲಿಸದ ಜಲದಲ್ಲಿ ಮುಖ ಕಾಣುವಂತೆ ತಮ್ಮ ಆತ್ಮನಲ್ಲಿ ತಮ್ಮ ಆತ್ಮನ ದರ್ಶನ ಮಾಡತೊಡಗುತ್ತಾರೆ.

ಸಂಪೂರ್ಣ ಜಗತ್ತಿನಲ್ಲಿ ಓಡುತ್ತಿರುವ ಮನದಿಂದ ಧ್ಯಾನವು ಆಗುವುದಿಲ್ಲ ಹಾಗು ಕರ್ಮರೂಪದ ಇಂಧನವನ್ನು ಸುಡಲು ಸಾಧ್ಯವಾಗುವುದಿಲ್ಲ. ಪರಿಗ್ರಹಗಳ ಮಮತ್ವದಿಂದ ಧ್ಯಾನದ ಶಕ್ತಿ ಬಹಿರ್ಗಾಮಿನಿ ಆಗುತ್ತದೆ. ಕಾಮವಾಸನೆಯಿಂದ ಶಕ್ತಿಯು ಅಧೋಗಾಮಿನಿಯಾಗುತ್ತದೆ ಹಾಗೂ ಸಮ್ಯಕ್ ಧ್ಯಾನದಿಂದ ಶಕ್ತಿಯು ಊರ್ಧ್ವಗಾಮಿನಿಯಾಗುತ್ತದೆ. ಸಂಸಾರದ ಕಡೆಗೆ ಓಡುವ ಶಕ್ತಿಯು ಇಂದಿನವರಿಗೆ ನಮ್ಮ ಎಂಟು ಕರ್ಮಗಳನ್ನು ಸುಡಲು ಆಗಲಿಲ್ಲ. ಸೂರ್ಯನ ಕಿರಣಗಳು ಎಲ್ಲ ಕಡೆಗೆ ಹರಡುತ್ತಲಿದ್ದರೂ ಬಹಳಷ್ಟು ಬಿಸಿಲಿನಲ್ಲಿಯೂ ಸಹ ಬಿಸಿಲಿನಲ್ಲಿ ಬಿದ್ದ ಕಾಗದವನ್ನು ಸುಡಲು ಆಗಲಿಲ್ಲ. ಆದರೆ ಲೆನ್ಸ್‌ನಿಂದ ಕಿರಣಗಳನ್ನು ಕೇಂದ್ರಿತಗೊಳಿಸಿ ಒಂದು ಸ್ಥಾನದಲ್ಲಿ ಹಾಕಿದಾಗ ಕಾಗದವು ಸುಟ್ಟು ಹೋಗುತ್ತದೆ. ಹಾಗೆಯೇ ಸಮ್ಯಕ್ (ಸಮೀಚೀನ) ಶುಕ್ಲಧ್ಯಾನದಿಂದ ಕರ್ಮರೂಪದ ಇಂಧನವು ಸುಟ್ಟು ಹೋಗುತ್ತದೆ ಹಾಗೂ ಆತ್ಮನು ಕೇವಲಜ್ಞಾನಿ, ಪರಮಾತ್ಮ ಹಾಗೂ ಸಿದ್ಧನಾಗಿ ಮೋಕ್ಷದ ಅವಸ್ಥೆಯನ್ನು ಹೊಂದಿ ಅನಂತಕಾಲದವರೆಗೆ ಅನಂತಜ್ಞಾನ ಇತ್ಯಾದಿ ಗುಣಗಳಿಂದ ಸಂಪನ್ನನಾಗಿ ಲೋಕ ಶಿಖರದಲ್ಲಿ ವಿರಾಜಮಾನನಾಗುತ್ತಾನೆ.

**ಇತ್ಯಲಂ (ಇತಿ ಸಮಾಪ್ತಿ)**




ಪರಸ್ಪರೋಪಗ್ರಹೋ ಜೀವಾನಾಮ್

# ಸಮ್ಯಕ್ ಧ್ಯಾನ ಶತಕ

## ಮಂಗಲಾಚರಣೆ

1. **ಸಿದ್ಧ-ದೇವ ಜಿನ ಶ್ರೇಷ್ಠ ಹೈ, ಪರಮೇಷ್ಠಿ-ಪದ ರೂಪ ।**
**ನಮತಾ ಸಮ್ಯಕ್-ಧ್ಯಾನ ಮೇ, ಬನೂ ಆಪ್ತ-ಅನುರೂಪ ॥**

ಶ್ರೇಷ್ಠ ಜಿನರಾಗಿರುವ 'ಸಿದ್ಧ' ದೇವರು ಪರಮೇಷ್ಠಿ ಪದವಿಯಲ್ಲಿದ್ದಾರೆ. ಅವರಿಗೆ ನಾನು ಸಮೀಚೀನ ಧ್ಯಾನದಲ್ಲಿ ನಮಸ್ಕರಿಸುತ್ತೇನೆ. ಅದರ ಫಲಸ್ವರೂಪವಾಗಿ ನಾನು ಸಹ ಅವರಂತೆ ಸಿದ್ಧಸ್ವರೂಪವನ್ನು ಪಡೆಯುವಂತಾಗಲಿ.

## ಭೂಮಿಕೆ

2. **ಪರ-ಪದಾರ್ಥ ಸಂಯೋಗ ಸೇ, ಕರ್ಮ-ಬಂಧ ಸಂಸಾರ ।**
**ಭೋಗ-ತಜೇ ಚಿಂತಾ ಮಿಟೇ, ಧ್ಯಾನ-ಕರೇ ಭವ-ಪಾರ ॥**

ಆತ್ಮನಿಂದ ಭಿನ್ನನಾದ ಪರ ಪದಾರ್ಥಗಳು ದೊರೆತಾಗ ಅವುಗಳಲ್ಲಿ ಆಸಕ್ತನಾಗುವುದರಿಂದ ಕರ್ಮಗಳ (ಪಾಪಗಳ) ಬಂಧವಾಗುತ್ತದೆ. ಅದರಿಂದಾಗಿ ಸಂಸಾರದಲ್ಲಿ ಪರಿಭ್ರಮಣೆಯಾಗುತ್ತದೆ ಹಾಗೂ ಸಂಸಾರದ ವಿಷಯಭೋಗಗಳನ್ನು ತ್ಯಾಗ ಮಾಡುವುದರಿಂದ ಚಿಂತೆಗಳು ಕೊನೆಗೊಳ್ಳುತ್ತವೆ. ಅದರ ಫಲ ಸ್ವರೂಪದಿಂದ ಸಮ್ಯಕ್ ಧ್ಯಾನ ಪ್ರಕಟವಾಗುತ್ತದೆ. ಕೊನೆಯಲ್ಲಿ ಆತ್ಮನು ಸಂಸಾರ ಸಮುದ್ರದಿಂದ ಪಾರಾಗುತ್ತಾನೆ ಅಂದರೆ ಮೋಕ್ಷ ಪಡೆಯುತ್ತಾನೆ.

## ಸಂಸಾರದ ಲಕ್ಷಣ

3. **ಕರ್ಮ-ಬಂಧ ಗತಿ ಅಗತಿ, ಹೋತೆ ಜಿಸಮೇ ಕಾಮ ।**
**ಚಾರೋ ಗತಿಯೋ ಮೇ ಭ್ರಮಣ, ಜಿಸಕಾ ಭವ ಹೈ ನಾಮ ॥**

ಕರ್ಮಗಳ ಬಂಧ, ಜನ್ಮ ಮರಣ ಮತ್ತು ದೇವ, ಮನುಷ್ಯ, ನರಕ

ಹಾಗೂ ತಿರ್ಯಂಚಗತಿಗಳಲ್ಲಿ ಭ್ರಮಣೆ ಆಗುತ್ತಿರುವುದರ ಹೆಸರೇ ಭವವಾಗಿದೆ; 'ಸಂಸಾರ'ವಾಗಿದೆ.

## ಮೋಕ್ಷದ ಸ್ವರೂಪ

**4. ಸರ್ವ–ಕರ್ಮ ಕಾ ನಾಶ ಜಬ, ಜಹಾ ಹೋಯ ವಹ ಮೋಕ್ಷ ।**
**ನಿರ್ಗ್ರಂಥೋಂ ಕೋ ಪ್ರಾಪ್ತ ಹೋ, ಸಿದ್ಧ ಬನಾತಾ ಮೋಕ್ಷ ।**

ಎಲ್ಲಿ ನಿರ್ಗ್ರಂಥ ಮುನಿಗಳ ಎಲ್ಲ ಅಷ್ಟಕರ್ಮಗಳು ನಾಶವಾಗುವವೋ ಅದನ್ನು 'ಮೋಕ್ಷ'ವೆನ್ನುತ್ತಾರೆ. ಈ ಮೋಕ್ಷವೇ ಅವರನ್ನು ಸಿದ್ಧಪರಮಾತ್ಮನನ್ನಾಗಿ ಮಾಡುತ್ತದೆ.

## ಭವ್ಯರ ಲಕ್ಷಣ

**5. ರತ್ನತ್ರಯ–ಮಯ ಮೋಕ್ಷ–ಮಗ, ಪಾತಾ ಹೈ ವಹ ಭವ್ಯ ।**
**ಮೋಕ್ಷ–ಮಾರ್ಗ ಅರು ಮೋಕ್ಷ ಕೋ ಪಾತಾ ನಹೀ ಅಭವ್ಯ ॥**

ಸಮ್ಯಗ್ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್‌ಚಾರಿತ್ರ ರೂಪದ ರತ್ನತ್ರಯಮಯ ಮೋಕ್ಷಮಾರ್ಗವನ್ನು ಪಡೆಯಬಲ್ಲವರು 'ಭವ್ಯ'ರಾಗಿದ್ದಾರೆ. ಮತ್ತು ಮೋಕ್ಷವನ್ನು ಪಡೆಯಲಾಗದವರು 'ಅಭವ್ಯ' ಜೀವಗಳೆಂದು ಕರೆಯಲ್ಪಡುತ್ತಾರೆ.

## ಧರ್ಮಾಧಾರ – ದಯೆ

**6. ವಸ್ತು–ಸ್ವಭಾವರೂ ಧರ್ಮದಶ, ರತ್ನತ್ರಯ ಹೈ ಧರ್ಮ ।**
**ದಯಾ–ಧರ್ಮ ಆಧಾರ ಹೈ, ಜಿಸಕೆ ಬಿನಾ ಅಧರ್ಮ ॥**

ವಸ್ತು ಸ್ವಭಾವ, ದಶಧರ್ಮಗಳು, ರತ್ನತ್ರಯಗಳು ಹಾಗೂ ದಯಾಭಾವ ಇವುಗಳನ್ನು ಧರ್ಮವೆಂದು ಹೇಳಿದ್ದಾರೆ. ಅವುಗಳಲ್ಲಿ ದಯೆಯು ಧರ್ಮದ ಮೂಲಾಧಾರವಾಗಿದೆ. ದಯೆ ಇಲ್ಲದ ಧರ್ಮವನ್ನು 'ಅಧರ್ಮ'ವೆಂದು ತಿಳಿಯಬೇಕು.

## ಗುರಿ- ಮೆಟ್ಟಿಲುಗಳು

**7. ವಸ್ತು-ಸ್ವಭಾವ ಸು-ಲಕ್ಷ್ಯ ಹೋ, ಸಚ್ಚಾ-ಸೌಖ್ಯ ಸ್ವರೂಪ ।**
**ದಯಾ ಆದಿ ಸೋಪಾನ ಹೈ, ಶಿವ-ಮಂಜಿಲ ಅನುರೂಪ ॥**

ವಸ್ತು-ಸ್ವಭಾವ ನಮ್ಮ ಉತ್ತಮ ಗುರಿಯಾಗಿದೆ ಅದನ್ನು ನಿಜವಾದ ಸುಖ ಸ್ವರೂಪವೆಂದು ಭಾವಿಸಲಾಗಿದೆ. ದಯೆ, ರತ್ನತ್ರಯ ಮತ್ತು ಹತ್ತುಧರ್ಮಗಳು ಇವು ವಸ್ತು-ಸ್ವಭಾವ ರೂಪ ಮೋಕ್ಷ-ಸೌಧದ ಮೆಟ್ಟಿಲುಗಳೆಂದು ಹೇಳಲಾಗಿದೆ.

**ವಿಷಯ:** ಕ್ರೋಧದ ಅಭಾವ ರೂಪ ಪರಿಣಾಮ 'ಕ್ಷಮಾಧರ್ಮ' ಎನ್ನುತ್ತಾರೆ. ಮಾನದ ಅಭಾವ ಅಥವಾ ಮೃದುತ್ವ ಸ್ವಭಾವ 'ಮಾರ್ದವಧರ್ಮ' ಎನ್ನುತ್ತಾರೆ. ಮಾಯಾಚಾರದ ಅಭಾವ ಅಥವಾ ಸರಳತಾಭಾವ 'ಆರ್ಜವಧರ್ಮ' ಎನ್ನುತ್ತಾರೆ. ನಿರ್ಲೋಭತೆ ಅಥವಾ ಪವಿತ್ರತೆಯ ಹೆಸರು 'ಶೌಚಧರ್ಮ' ಎಂದು ಹೇಳಲಾಗುತ್ತದೆ. ಅಹಿತಕಾರಿ ವಚನಗಳ ತ್ಯಾಗ ಅಥವಾ ಸಜ್ಜನರ ಬಗ್ಗೆ ಹಿತಕರ ವಚನ ಹೇಳುವುದು 'ಸತ್ಯಧರ್ಮ' ಎನ್ನಲಾಗುತ್ತದೆ. ಇಂದ್ರಿಯಗಳನ್ನು ಪಾಪ-ಕಾರ್ಯಗಳಿಂದ ರಕ್ಷಿಸಿಕೊಳ್ಳುವುದು 'ಸಂಯಮಧರ್ಮ' ಎನ್ನುತ್ತಾರೆ. ಕರ್ಮಕ್ಷಯಗಳಿಗಾಗಿ ಉಪವಾಸ ಮುಂತಾದ ಅನುಷ್ಠಾನ 'ತಪಧರ್ಮ' ಎನ್ನುತ್ತಾರೆ. ಸಂಯತ ಜನರಿಗಾಗಿ ರತ್ನತ್ರಯ ಪಾಲನೆಯ ಉಪದೇಶ ನಿಯಮ ನೀಡುವುದನ್ನು ಮುನಿಗಳ 'ತ್ಯಾಗಧರ್ಮ' ಎಂದು ಹೇಳುತ್ತಾರೆ. ನಿಜಾತ್ಮವನ್ನಲ್ಲದೇ ಪರಮಾಣುವಿನಷ್ಟು ಸಹ ಪರವಸ್ತುವಿನಲ್ಲಿ ಮೋಹವಾಗದಿರುವುದೆ 'ಆಕಿಂಚನ್ಯಧರ್ಮ' ಎನ್ನುತ್ತಾರೆ ಹಾಗೂ ಸರ್ವ ಮಹಿಳೆಯರಿಂದ ವೈರಾಗ್ಯಭಾವ ಹಾಗೂ ಆತ್ಮಲೀನತಾ ರೂಪ ಪರಿಣಾಮದವರಾಗುವುದು 'ಬ್ರಹ್ಮಚರ್ಯಧರ್ಮ' ಎನ್ನಲಾಗುತ್ತದೆ. ಈ ಎಲ್ಲ ಹತ್ತು ಧರ್ಮಗಳು ಮೋಕ್ಷ ಪ್ರಾಪ್ತಿಯ ಭಾವನೆಯಿಂದ ಪಾಲನೆ ಮಾಡಲಾಗುತ್ತದೆ. ಆದ್ದರಿಂದ "ಉತ್ತಮ" ಈ ವಿಶೇಷಣೆಯಿಂದ ಕೂಡಿರುತ್ತದೆ. ಖಾದ್ಯ, ಲೇಹ್ಯ, ಸ್ವಾದ ಮತ್ತು ಪೇಯ ಆಹಾರಗಳನ್ನು ತ್ಯಾಗ ಮಾಡುವುದು 'ಉಪವಾಸ', ಹಸಿವೆಗಿಂತ ಕಡಿಮೆ ಸೇವನೆ 'ಅವಮೌದರ್ಯ', ನಿಯಮ ಪೂರ್ವಕವಾಗಿ ಯಾವುದಾದರೂ ಆಹಾರ ಸೇವಿಸುವುದು 'ವೃತ್ತಿಪರಿಸಂಖ್ಯಾನ',

ಹಾಲು ಅಥವಾ ಉಪ್ಪು ಮುಂತಾದವುಗಳ ತ್ಯಾಗ ಮಾಡುವುದು 'ರಸಪರಿತ್ಯಾಗ', ಏಕಾಂತ ಸ್ಥಾನದಲ್ಲಿ ಆಸನಗಳನ್ನು ಹಾಕುವುದು 'ವಿವಿಕ್ತಶಯ್ಯಾಸನ' ಹಾಗೂ ಸಮತಾ ಪೂರ್ವಕ ಕಷ್ಟಗಳನ್ನು ಸಹಿಸಿಕೊಳ್ಳುವುದು 'ಕಾಯಕ್ಲೇಶತಪ' – ಹೀಗೆ ಇವು 6 ಬಹಿರಂಗ ತಪಗಳಾಗಿವೆ. ದೋಷಗಳನ್ನು ಪರಿಮಾಣ ಮಾಡುವುದು 'ಪ್ರಾಯಶ್ಚಿತ್ತ', ವೀತರಾಗದ ಆದರ ನಮನ ಆದಿ ಮಾಡುವುದು 'ವಿನಯ', ನಿರ್ಗ್ರಂಥರ ಸೇವೆ 'ವೈಯಾವೃತ್ಯ', ಆಗಮಗಳ ಪಠಣ ಮುಂತಾದವುಗಳನ್ನು ಮಾಡುವುದು 'ಸ್ವಾಧ್ಯಾಯ', ಶರೀರ ಮುಂತಾದ ಪದಾರ್ಥಗಳಿಂದ ನಿಸ್ಪೃಹನಾಗುವುದು ಪರಮಾತ್ಮಲೀನತೆ ರೂಪವಾಗಿರುವುದು 'ವ್ಯುತ್ಸರ್ಗ' ಮತ್ತು ಧರ್ಮ ಶುಕ್ಲರೂಪ ಪರಿಣಾಮ ಧ್ಯಾನ 'ತಪ' – ಹೀಗೆ ಈ ಆರು ಅಂತರಂಗ ತಪವಾಗಿದೆ.

## ಆತ್ಮಹಿತ ಹೇಗೆ?

**8. ಆತಮ–ಹಿತ ಶಿವಸೌಖ್ಯ ಹೈ, ಆಕುಲತಾ ಸೇ ದೂರ ।**
**ರತ್ನತ್ರಯ ಸೇ ಪ್ರಾಪ್ತ ಹೋ, ಆತ್ಮಗುಣೋಂ ಸೇ ಪೂರ ॥**

ಆತ್ಮನ ಹಿತವು ಆತ್ಮನ ಗುಣಗಳಿಂದ ಪರಿಪೂರ್ಣವಾದ ಮೋಕ್ಷ ಸುಖದಲ್ಲಿದೆ. ಆ ಸುಖದಲ್ಲಿ ಇಂದ್ರಿಯ ವಿಷಯಗಳ ಇಚ್ಛೆಯ ಆಕುಲತೆ ಇರುವುದಿಲ್ಲ ಹಾಗೂ ಅಲ್ಲಿ ಸುಖಕರ ರತ್ನತ್ರಯ ರೂಪದ ಮೋಕ್ಷಮಾರ್ಗವು ದೊರೆಯುತ್ತದೆ.

## ಧ್ಯಾನ ಸಾಧನೆಗಾಗಿ ಚಿಂತನೆ

**9. ಮನ ಯಹ ವಾನರ–ಸಮ ಕಹಾ, ಬಡಿ ಚಪಲತಾ ಮಾನ ।**
**ಜ್ಞಾನ, ಧ್ಯಾನ ಮೇ ಲೀನ ಜಬ, ಆತ್ಮಶಾಂತಿ ಸುಖ ಜಾನ ॥**

ನಮ್ಮ ಮನಸ್ಸು ಬಹಳ ಚಂಚಲ ಸ್ವಭಾವದ್ದಾಗಿದ್ದು ಮಂಗನಂತಿರುವುದನ್ನು ತಿಳಿಯಬೇಕು. ನಾವು ಮನಸ್ಸನ್ನು ಏಕಾಗ್ರಗೊಳಿಸಿ ಜ್ಞಾನ ಧ್ಯಾನದಲ್ಲಿ ಲೀನರಾದಾಗ ಬಹಳ ಶಾಂತಿ ಮತ್ತು ಸುಖವು ದೊರೆಯುತ್ತವೆ.

❖

**10. ಮನಸ್-ಭೂತ ಕೋ ಧರ್ಮ ಮೇ, ಸದಾ ಲಗಾನಾ ಜ್ಞಾನ ।**
**ಪಾಪ-ಬಂಧ ಸೇ ದೂರ ಹೋ, ಪಾತೇ ಸಮತಾ ಧ್ಯಾನ ॥**

ಸುಮ್ಮನೆ ಇರುವುದರ ಬದಲಾಗಿ ಮನಸ್ಸೆಂಬ ಭೂತವನ್ನು ಧರ್ಮಕಾರ್ಯದಲ್ಲಿ ತೊಡಗಿಸುವುದು ಜ್ಞಾನಿ ಪುರುಷರ ಕಾರ್ಯವಾಗಿದೆ. ಅದರ ಫಲ ಸ್ವರೂಪವಾಗಿ ನಾವು ಪಾಪಕರ್ಮಗಳ ಬಂಧದಿಂದ ದೂರವಾಗಿ ಸಮತಾಭಾವ ಹಾಗೂ ಧ್ಯಾನದ ಪ್ರಾಪ್ತಿಯನ್ನು ಮಾಡಿಕೊಳ್ಳುತ್ತೇವೆ.

❖

**11. ಅಕ್ಷ-ಖಿಡಕಿಯೋಂ ಸೇ ಸದಾ, ವಿಷಯ-ಪವನ ಕಾ ಜೋರ ।**
**ಅಗರ ಬಂದ ಹೋ ಖಿಡಕಿಯಾ, ನಿಜ-ಸುಖ ಕೀ ಹೋ ಭೋರ ॥**

ಇಂದ್ರಿಯ ರೂಪದ ಕಿಟಕಿಗಳಿಂದ ಯಾವಾಗಲೂ ಪಂಚೇಂದ್ರಿಯಗಳ ವಿಷಯಗಳ ಗಾಳಿಯು ಬೀಸಿ ಬಹಳ ಬಾಧೆಯನ್ನು ಉಂಟುಮಾಡುತ್ತದೆ. ಒಂದು ವೇಳೆ ಇಂದ್ರಿಯ ರೂಪದ ಕಿಟಕಿಗಳನ್ನು ಮುಚ್ಚಿ ತನ್ನ ಆತ್ಮನೆಡೆಗೆ ಗಮನ ಹರಿಸಿದರೆ ಅದು ತನ್ನ ಆತ್ಮ ಸುಖದ ಬೆಳಕು ಆಗುತ್ತದೆ.

❖

**12. ಪೈರ ವ ಮುಖ ಅಂದರ ಕರೇ, ಕಛುಆ ಪೀಠ ದಿಖಾಯ ।**
**ಬಾಧಕ ಸೇ ಧ್ಯಾನೀ ಬಚೇ, ಸಂಯಮ-ಸುಖ ಮಹಕಾಯ ॥**

ಬಾಧಕಗಳಿಂದ ರಕ್ಷಿಸಿಕೊಳ್ಳಲು ಆಮೆಯು ತನ್ನ ಬೆನ್ನಿನ ಕೆಳಭಾಗದಲ್ಲಿ ಕಾಲು ಹಾಗೂ ಮುಖಗಳನ್ನು ಎಳೆದುಕೊಂಡು ಸುರಕ್ಷಿತವಾಗಿ ಇಟ್ಟುಕೊಳ್ಳುವಂತೆ ಧ್ಯಾನಿಯು ಅಶುಭ ಕರ್ಮಗಳ ಆಸ್ರವದಿಂದ ರಕ್ಷಿಸಿಕೊಳ್ಳಲು ಧ್ಯಾನ ಮತ್ತು ಏಕಾಗ್ರತೆಯ ಸಹಾಯದಿಂದ ಐದೂ ಇಂದ್ರಿಯಗಳನ್ನು ತನ್ನ ವಶದಲ್ಲಿ ಇಟ್ಟುಕೊಂಡು ಸಂಯಮ ಮತ್ತು ಸುಗಂಧವನ್ನು ಹೊಂದುತ್ತಾನೆ. ಅಂದರೆ, ಅಲೌಕಿಕ ಸುಖದ ಅನುಭವವನ್ನು ಹೊಂದುತ್ತಾನೆ.

❖

13. ವಾಯು ಬಹತೀ ವೇಗ ಸೇ, ಜಲ ಮೇ ಉಠೇ ತರಂಗ ॥
ವಿಷಯೋಂ ಕಿ ವಾಯು ರುಕೇ, ನಿರ್ಮಲ ಆತ್ಮ ವಿರಂಗ ॥

ವಾಯುವು ಜೋರಾಗಿ ಬೀಸಿದಾಗ ನೀರಿನಲ್ಲಿ ದೊಡ್ಡ ದೊಡ್ಡ ಅಲೆಗಳು ಏಳತೊಡಗುವಂತೆ ಹಾಗೂ ಆ ನೀರಿನಲ್ಲಿ ನಮ್ಮ ಪ್ರತಿಬಿಂಬ (ನೆರಳು) ಕಾಣದಿರುವಂತೆ, ಮೋಹಿಗಳಿಗೆ ವಿಷಯ ವಾಸನೆಯ ವಾಯುವಿನಿಂದ ಆತ್ಮನ ದರ್ಶನ ಆಗುವುದಿಲ್ಲ. ಆದರೆ ಯೋಗಿಯು ವಿಷಯ ವಾಸನೆಗಳಿಂದ ಮುಕ್ತನಾಗಿ ಅಥವಾ ನಿರ್ಮೋಹಿಯು, ಸಾಂಸಾರಿಕ ವ್ಯವಹಾರಗಳಿಂದ ದೂರನಾಗಿ ತನ್ನ ಆತ್ಮನ ಧ್ಯಾನದಿಂದ ನಿಶ್ಚಿತವಾಗಿ ಶಾಂತನಾಗುತ್ತಾನೆ. ಆಗ ಆತನು ನಿರ್ಮಲ ವೀತರಾಗ ಆತ್ಮನ ದರ್ಶನ ಪಡೆಯುತ್ತಾನೆ.

❖

14. ರವಿ–ಕಿರಣೇ ಬಿಖರೀ ತಪೇ, ಕಾಗಜ ಜಲಾ ನ ದೇತ ।
ಕಾಂಚ ಸಾಥ ದುರ್ಬಿನ ಕಾ, ಭಷ್ಮಸಾತ್ ಕರ ದೇತ ॥

ಸೂರ್ಯನ ಕಿರಣಗಳು ಸಂಪೂರ್ಣ ಜಗತ್ತಿನಲ್ಲಿ ಹರಡಿ ತಪಿಸುತ್ತಿದ್ದರೂ ಒಂದು ಕಾಗದದ ತುಂಡನ್ನೂ ಸುಡಲಾರವು. ಆದರೆ ಅವು ಗಾಜಿನಲ್ಲಿ(ಲೆನ್ಸ್) ಆ ಕಿರಣಗಳನ್ನು ಕೇಂದ್ರೀಕರಿಸಿ ಕಾಗದದ ಮೇಲೆ ಸ್ಥಿರಗೊಳಿಸಿದಾಗ ಸ್ವಲ್ಪ ಸಮಯದಲ್ಲಿಯೇ ಕಾಗದ ಸುಟ್ಟು ಭಸ್ಮವಾಗಿಬಿಡುತ್ತದೆ.

❖

15. ಮನ ಪೂರೇ ಜಗ ಮೇ ಫಿರೇ, ಏಕ–ಜಗಹ ನಾ ಧ್ಯಾನ ।
ಕೇಂದ್ರಿತ ನಿಜ ಮೇ ಧ್ಯಾನ ತಬ, ಪ್ರಗಟೇ ಕೇವಲಜ್ಞಾನ ॥

ಮಾನವನ ಮನಸ್ಸು ಸಂಪೂರ್ಣ ಜಗತ್ತಿನಲ್ಲಿ ಅಲೆದಾಡುತ್ತಾ

ಇರುವವರೆಗೆ ಏಕಾಗ್ರತೆಯಿಂದ ಆತ್ಮನ ಧ್ಯಾನ ಮಾಡಲು ಆಗುವುದಿಲ್ಲ. ಉತ್ತಮ ಶಕ್ತಿ (ವಜ್ರ ವೃಷಭನಾರಾಚ ಸಂಹನನ)ಯೊಂದಿಗೆ ನಿರ್ಗ್ರಂಥನಾಗಿ ಏಕಾಗ್ರತೆಯಿಂದ ತನ್ನ ಆತ್ಮನಲ್ಲಿ ಅಂತರ್ಮುಹೂರ್ತ ಕಾಲದವರೆಗೆ ಶುಕ್ಲಧ್ಯಾನ ಮಾಡಿದರೆ ಆಗ ಘಾತಿಕರ್ಮಗಳು ಕ್ಷಯವಾಗುತ್ತವೆ ಹಾಗೂ ಕೇವಲಜ್ಞಾನ ಪ್ರಕಟವಾಗುತ್ತದೆ.

(ವಜ್ರ ವೃಷಭನಾರಾಚ ಸಂಹನನ, ನಿರ್ಗ್ರಂಥ, ಅಂತರ್ಮುಹೂರ್ತ ಘಾತಿಕರ್ಮ ಮತ್ತು ಕೇವಲಜ್ಞಾನ ಈ ಶಬ್ದಗಳ ಅರ್ಥವನ್ನು ಕೊನೆಯಲ್ಲಿ ಕೊಟ್ಟಿರುವ ಶಬ್ದಕೋಶದಿಂದ ತಿಳಿಯಿರಿ)

## ಧ್ಯಾನದ ಅವಸ್ಥೆಗಳು

**16. ಸಮತಾ, ಧ್ಯಾನ-ಸಮಾಧಿ ವಾ, ಗುಪ್ತಿ, ಶುದ್ಧ-ಉಪಯೋಗ ।**
**ನಿಜಾನುಭವ ನಿಶ್ಚಯ ಕಹೋ, ಯಥಾಖ್ಯಾತ ಸತ್ಯೋಗ ॥**

ಧ್ಯಾನ, ಸಮತೆ, ಗುಪ್ತಿ, ಶುದ್ಧೋಪಯೋಗ, ನಿಜಾನುಭವ, ನಿಶ್ಚಯ ಮತ್ತು ಯಥಾಖ್ಯಾತ – ಇವೆಲ್ಲವೂ ಧ್ಯಾನದ ಅವಸ್ಥೆಗಳಾಗಿವೆ. ಸಮೀಚೀನ ಯೋಗದ ಸದೃಢರೂಪವಾಗಿವೆ. ಇವುಗಳ ವರ್ಣನೆಯನ್ನು ಮುಂದೆ ಮಾಡಲಾಗಿದೆ.

## ಧ್ಯಾನದ ಯೋಗ್ಯ ಸಾಮಗ್ರಿಗಳು

**17. ದ್ರವ್ಯ, ಕ್ಷೇತ್ರ, ಸು-ಕಾಲ ಸಹ, ಭಾವ ಜೀವ ಜಬ ಪಾಯ ।**
**ಸಮತಾ ಧ್ಯಾನಾದಿಕ ಮಿಲೇ, ಸುಯೋಗ್ಯ ವಹ ಬನ ಜಾಯ ॥**

ಸುಯೋಗ್ಯ ದ್ರವ್ಯ, ಕ್ಷೇತ್ರ, ಕಾಲ ಮತ್ತು ಭಾವ – ಇವೆಲ್ಲವುಗಳನ್ನು ಜೀವ ಪಡೆದಾಗ ಜೀವನಿಗೆ ಸಮತೆ ಹಾಗೂ ಧ್ಯಾನ ಮುಂತಾದವುಗಳು ದೊರೆಯುತ್ತವೆ; ಅವನು ಮೋಕ್ಷಮಾರ್ಗಕ್ಕೆ ಯೋಗ್ಯನಾಗುತ್ತಾನೆ.

## ಧ್ಯಾನಕ್ಕೆ ಕಾರಣವಾಗುವ ದ್ರವ್ಯ

**18. ಜೀವ–ದ್ರವ್ಯ ಆಧಾರ ಹೈ, ಧ್ಯಾತಾ, ಸಾಧ್ಯ, ಸ್ವಜೀವ ।**
**ಸಂಹನನ ಆದಿ ಅಜೀವ ಹೈ, ಹೇತು ದೇವ, ಗುರು ಜೀವ ॥**

ಧ್ಯಾನಕ್ಕೆ ಜೀವದ್ರವ್ಯವು ಆಧಾರರೂಪವೆಂದು ಭಾವಿಸಲಾಗಿದೆ. 'ಧ್ಯಾತಾ' ಅಂದರೆ ಧ್ಯಾನ ಮಾಡುವವನು, 'ಸಾಧ್ಯ' ಅಂದರೆ ಸಾಧನೆ ಮಾಡಬೇಕೆನ್ನುವವನು ತನ್ನ ಜೀವಾತ್ಮರೂಪದ ದ್ರವ್ಯವಾಗಿದ್ದಾನೆ. ಸಂಹನನ ಮುಂತಾದವುಗಳನ್ನು ಸಾಧನರೂಪದ ಅದ್ರವ್ಯಗಳೆಂದು ಕರೆಯಲಾಗಿದೆ. ವೀತರಾಗ ದೇವ ಹಾಗೂ ನಿರ್ಗ್ರಂಥಗುರುಗಳನ್ನು ಜೀವದ್ರವ್ಯವೆನ್ನಲಾಗುತ್ತದೆ.

## ಸಂಹನನ

**19. ವಜ್ರವೃಷಭನಾರಾಚ ಯಹ, ಸಂಹನನ ಶ್ರೇಷ್ಠ ಸುಜಾನ ।**
**ಶುಭ–ಧ್ಯಾನಿ ಬನ ಕರ್ಮ–ಕ್ಷಯ, ಹೋವೆ ಮೋಕ್ಷ ಮಹಾನ ॥**

ವಜ್ರ–ವೃಷಭ–ನಾರಾಚ ಸಂಹನನವನ್ನು ಧ್ಯಾನಕ್ಕಾಗಿ ಉತ್ತಮ ಸಂಹನನವೆಂದು ತಿಳಿಯಬೇಕು. ಇದೇ ಸಂಹನನದಿಂದ ಶುಕ್ಲಧ್ಯಾನದ ಮೂಲಕ ಕರ್ಮಗಳ ಕ್ಷಯ ಮಾಡಿ ಆತ್ಮನು ಮಹಾನ್ ಮೋಕ್ಷಪದವನ್ನು ಪಡೆಯುತ್ತಾನೆ.

## ಆಸನ

**20. ಖಡ್ಗಾಸನರು ಪದ್ಮಾಸನ, ಸಿದ್ಧಾಸನ ಕಾ ಯೋಗ ।**
**ವೀರಾಸನರು ವಜ್ರಾಸನ, ಧ್ಯಾನಿ ಬನೇ ಅಯೋಗ ॥**

ಖಡ್ಗಾಸನ, ಪದ್ಮಾಸನ, ಸಿದ್ಧಾಸನ, ವೀರಾಸನ ಮತ್ತು ವಜ್ರಾಸನ ಮುಂತಾದವುಗಳಿಂದ ಧ್ಯಾನಿ ಯೋಗಿಯು ಧ್ಯಾನಮಾಡಿ ಕರ್ಮಗಳಿಂದ ಮುಕ್ತನಾಗಿ ಯೋಗದ ಅತಿ ಎತ್ತರದ ಉತ್ಕೃಷ್ಟ ಅಯೋಗ ಅವಸ್ಥೆಯನ್ನು ಪಡೆಯುತ್ತಾನೆ.

## ಆಹಾರ

**21. ಅಶನ ರಾಜಸಿಕ, ತಾಮಸಿಕ, ಜಿಸೇ ಛೋಡನಾ ಶ್ರೇಷ್ಠ ।**

**ಸಾತ್ವಿಕ, ಪ್ರಾಸುಕ ಹೋ ಅಶನ, ಧ್ಯಾನ ಬಢೇ, ವಯ ಜೇಷ್ಠ ॥**

ರಾಜಸಿಕ, ತಾಮಸಿಕ ಆಹಾರವನ್ನು ಬಿಟ್ಟು ಸಾತ್ವಿಕ ಆಹಾರವನ್ನು ಪ್ರಾಸುಕ ಮಾಡಿ ಸ್ವೀಕರಿಸುವುದು ಶ್ರೇಷ್ಠ ಕಾರ್ಯವಾಗಿದೆ. ಇದರ ಫಲ ಸ್ವರೂಪವಾಗಿ ಧ್ಯಾನದ ವೃದ್ಧಿಯಾಗುತ್ತದೆ ಹಾಗೂ ಧ್ಯಾನಿಯು ದೀರ್ಘ ಆಯುವಿನ ಜೀವನ ನಡೆಸುತ್ತಾನೆ.

❖

**22. ನಶಾ, ಆಮಿಸ, ಕಂದ ತಜ, ನಿಶಿ ಮೇ ಛೋಡೆ ಭೋಜ ।**

**ಮರ್ಯಾದಿತ, ಶೋಧಿತ–ಅಶನ, ಸ್ವಸ್ಥ–ಧ್ಯಾನ ಹೋ ರೋಜ ॥**

ಧ್ಯಾನದ ಆಕಾಂಕ್ಷಿಯು ಮಾಂಸ, ಮಾದಕ ದ್ರವ್ಯಗಳನ್ನು, ಕಂದಮೂಲ ಹಾಗೂ ರಾತ್ರಿಭೋಜನವನ್ನು ಬಿಟ್ಟು ಮರ್ಯಾದಿತ ಹಾಗೂ ಶೋಧಿಸಲ್ಪಟ್ಟ ಆಹಾರದ ಸೇವನೆ ಮಾಡಿದರೆ ಪ್ರತಿನಿತ್ಯ ಆರೋಗ್ಯಪೂರ್ಣ ಧ್ಯಾನವನ್ನು ಹೊಂದುತ್ತಾನೆ.

❖

**23. ಏಕ ಬಾರ ಭೋಜನ ಕರೇ, ಯೋಗೀ ವಹ ಕಹಲಾಯ ।**

**ದೋಯ ಬಾರ ಭೋಗೀ ಕರೇ, ತ್ರಯ ರೋಗಿ ಹೋ ಜಾಯ ॥**

ಇಪ್ಪತ್ನಾಲ್ಕು ಗಂಟೆಗಳಲ್ಲಿ ಹಗಲು ಒಂದು ಸಾರಿ ಆಹಾರ ಮಾಡುವವನನ್ನು 'ಯೋಗಿ' ಎಂದು ಕರೆಯುತ್ತಾರೆ. ಎರಡು ಸಾರಿ ಆಹಾರ ಮಾಡುವವನನ್ನು 'ಭೋಗಿ' ಹಾಗೂ ಮೂರು ಸಾರಿ ಆಹಾರ ಮಾಡುವವನನ್ನು 'ರೋಗಿ' ಎಂದು ಕರೆಯುತ್ತಾರೆ, ಇವರಿಗೆ ಧ್ಯಾನದ ಪ್ರಾಪ್ತಿ ಅತಿ ದುರ್ಲಭವಾಗಿದೆ.

❖

**24. ಅರ್ದ್ಧ–ಉದರ ಭೋಜನ ಕರೇ, ದುಗುನಾ–ಜಲ, ಹೋ ಧ್ಯಾನ ।**
**ತಿಗುನಾ–ಪರಿಶ್ರಮ ಜೋ ಕರೇ, ಶತಾಯು ಹೋ ಧೀಮಾನ ॥**

ಅರ್ಧಹೊಟ್ಟೆ ಆಹಾರ ಮಾಡಿ ಅದರ ಎರಡು ಪಟ್ಟು ನೀರು ಕುಡಿದು ಮೂರು ಪಟ್ಟು ಪರಿಶ್ರಮ ಮಾಡುವ ಯೋಗಿಯು ಪೂರ್ಣದಿವಸ ಪ್ರಮಾದ ರಹಿತನಾಗಿರುತ್ತಾನೆ. ಅವನಿಗೆ ಧ್ಯಾನವು ಸಿದ್ಧಿಸುತ್ತದೆ. ಈ ಧೀಮಂತ ಯೋಗಿಯು ಶತಾಯು ಆಗುತ್ತಾನೆ.

❖

**25. ಖೋವಾ, ಮೇವಾ ಆದಿ ಹೈ, ಜಹಾ ಪದಾರ್ಥ ಗರಿಷ್ಠ ।**
**ಜೋ ಪದಾರ್ಥ ರುಚಿಕರ ಲಗೇ, ಕಹಲಾತೇ ಹೈ ಇಷ್ಟ ॥**

ಖೋವಾ, ಮೇವಾ (ದ್ರಾಕ್ಷಿ, ಬಾದಾಮಿ, ಪಿಸ್ತಾ) ಮುಂತಾದ ಪದಾರ್ಥಗಳು ಗರಿಷ್ಠ (ಭಾರಿ) ಪದಾರ್ಥಗಳೆಂದು ಕರೆಯಲ್ಪಟ್ಟಿವೆ ಹಾಗೂ ಮನಸ್ಸಿಗೆ ಪ್ರಭಾವವನ್ನುಂಟು ಮಾಡುವ ರುಚಿಕರವಾದ ಪದಾರ್ಥಗಳನ್ನು ಇಷ್ಟ ಆಹಾರ ಪದಾರ್ಥಗಳೆಂದು ಕರೆಯುತ್ತಾರೆ.

## ಬಾಧಕ ತತ್ತ್ವ

**26. ಇಷ್ಟ, ಗರಿಷ್ಠ–ಪದಾರ್ಥ ವಾ, ಸ್ತ್ರೀ ಕಾ ಸಂಸರ್ಗ ।**
**ವ್ಯಸನ ಸಭೀ ಸದ್‌ಧ್ಯಾನ ಮೇ, ಬಾಧಾ ದೇ ಉಪಸರ್ಗ ॥**

ಇಷ್ಟ, ಗರಿಷ್ಠ ಪದಾರ್ಥಗಳು ಹಾಗೂ ಸ್ತ್ರೀ ಸಂಪರ್ಕ (ಸ್ತ್ರೀಯರಿಗೆ ಪುರುಷರ ಸಂಪರ್ಕ) ಹೀಗೆಯೇ ಸಪ್ತವ್ಯಸನಗಳು – ಇವೆಲ್ಲವೂ ಸಮೀಚೀನ ಧ್ಯಾನದಲ್ಲಿ ಬಾಧಕ ಹಾಗೂ ಉಪಸರ್ಗದ ಸಮಾನವಾಗಿವೆ.

## ಸಾಧಕರಿಗೆ ಲಾಭ

**27. ಏಕಾಶನ ಉಪವಾಸ ಹೋ, ಹಲ್ಕೇಪನ-ಸಹ ಧ್ಯಾನ ।**
**ನಾ ಪ್ರಮಾದ-ನಿದ್ರಾ ಜಗೇ, ಮುನಿ-ಅನುಭೂತಿ ಸುಜಾನ ॥**

ಏಕಾಸನ ಹಾಗೂ ಉಪವಾಸದ ದಿನಗಳಲ್ಲಿ ಹಗುರತೆಯ ಕಾರಣ ಧ್ಯಾನ ಉಂಟಾಗುತ್ತದೆ. ಪ್ರಮಾದ ಉಂಟಾಗುವ ಮತ್ತು ನಿದ್ರೆ ಬರುವ ಸಂಭವವಿಲ್ಲ. ಹೀಗೆ ಮುನಿಜನರ ಅನುಭೂತಿ ಇರುತ್ತದೆಂದು ತಿಳಿಯಬೇಕು.

❖

**28. ಸ್ಪರ್ಶನ, ರಸನಾ ರಹೀ, ಕಾಮ-ಇಂದ್ರಿಯಾ ಜಾನ ।**
**ಕಾಮಜಯೀ ಕೇ ಊರ್ಧ್ವ ಮೇ, ವಹೇ ಊರ್ಜಾ ಮಾನ ॥**

ಸ್ಪರ್ಶನ (ಚರ್ಮ) ಮತ್ತು ರಸನ (ನಾಲಿಗೆ) ಇವೆರಡು ಕಾಮದ ಇಂದ್ರಿಯಗಳಾಗಿವೆ. ಈ ಕಾಮದ ಇಂದ್ರಿಯಗಳನ್ನು ಗೆಲ್ಲುವವರ ಶಕ್ತಿಯು ಊರ್ಧ್ವಗಾಮಿನಿಯಾಗಿರುತ್ತದೆ ಎಂದು ತಿಳಿಯಬೇಕು.

## ಧ್ಯಾನದ ಸುಯೋಗ್ಯ ವಿಧಿ ಹಾಗೂ ಪ್ರಕ್ರಿಯೆ

**29. ಮಮತ್ವ ತನ ಕಾ ತ್ಯಾಗ ಹೋ, ಕಾಯೋತ್ಸರ್ಗ ಮಹಾನ ।**
**ಆವರ್ತ ನಮನ ಸಾಥ ಹೋ, ನಿಷಧಾ ಸಹ ಸು-ಧ್ಯಾನ ॥**

ಶರೀರದ ಮೇಲಿನ ಮಮಕಾರವನ್ನು (ಅನ್ಯ ಪದಾರ್ಥಗಳ ಮಮತ್ವವನ್ನೂ) ಬಿಟ್ಟು ನಿಂತುಕೊಂಡು ಧ್ಯಾನ ಮಾಡುವುದು ಕಾಯೋತ್ಸರ್ಗ ಧ್ಯಾನವಾಗಿದೆ. ನಾಲ್ಕು ದಿಕ್ಕುಗಳಲ್ಲಿ ಮೂರು ಮೂರು ಆವರ್ತಗಳಿಂದ(ಗಡಿಯಾರದ ಮುಳ್ಳುಗಳು ಸುತ್ತುವಂತೆ) ಕೈ ಜೋಡಿಸಿ, ತಲೆಬಾಗಿಸಿ, ನಮಸ್ಕರಿಸುತ್ತಾ ಎರಡು ಸಾರಿ (ಪೂರ್ವದಲ್ಲಿ ಅಥವಾ ಉತ್ತರದಲ್ಲಿ) ಗೋಆಸನದಲ್ಲಿ ನಮಸ್ಕರಿಸಿ (ಪೂರ್ವ ಅಥವಾ ಉತ್ತರಾಭಿಮುಖವಾಗಿ) ಕುಳಿತು ಧ್ಯಾನ ಮಾಡುವುದನ್ನು ಸಮ್ಯಕ್ ಧ್ಯಾನ ಅಥವಾ ಸಾಮಾಯಿಕವೆಂದು ಕರೆಯಲಾಗುತ್ತದೆ.

❖

**30. ನೇತ್ರ ಖುಲೇ ನಾ ಬಂದ ಹೋ, ನಾಶಾ-ದೃಷ್ಟಿ ಸುಹಾಯ ।**
**ಅಧೋ ದಾಂತ ಫಿರ ಊರ್ಧ್ವ ಕೀ, ಪಂಕ್ತಿ ಸುಸೌಮ್ಯ ಕಹಾಯ ॥**

ಧ್ಯಾನ ಮಾಡುವಾಗ ತಮ್ಮ ಎರಡೂ ಕಣ್ಣುಗಳನ್ನು ಪೂರ್ಣ ತೆರೆಯದೇ ಹಾಗೂ ಪೂರ್ಣ ಮುಚ್ಚದೇ ಮೂಗಿನ ತುದಿಯ ಮೇಲೆ ದೃಷ್ಟಿ ಇಡುವುದು ಶೋಭನೀಯವೆನಿಸುತ್ತದೆ. ಹಲ್ಲಿನ ಕೆಳಗಿನ ಸಾಲಿನ ಮೇಲೆ ಮೇಲಿನ ಹಲ್ಲಿನ ಸಾಲು ಇದ್ದರೆ ಅದನ್ನು ಸುಂದರ ಸೌಮ್ಯ ಎಂದು ಕರೆಯಲಾಗುತ್ತದೆ.

❖

**31. ಸರ್ವ ಅಕ್ಷ-ವ್ಯಾಪಾರ ಕೋ, ವಿರಾಮ ಯೋಗಿ ದೇತ ।**
**ಧೀರೇ-ಧೀರೇ ಶ್ವಾಸ-ಲೇ, ಧ್ಯಾನ-ಏಕ ಕರ ಲೇತ ॥**

ಮನ, ವಚನ ಮತ್ತು ಕಾಯದ ಕೃತ-ಕಾರಿತ-ಅನುಮೋದನಾದಿ ಎಲ್ಲ ಕ್ರಿಯೆಗಳನ್ನು ನಿಲ್ಲಿಸಿ ಯೋಗಿಯು ತನ್ನ ಸ್ವಾಭಾವಿಕ ಶ್ವಾಸದ ಗತಿಯನ್ನು ಧ್ಯಾನದಲ್ಲಿಡುತ್ತಾ ಧ್ಯಾನದ ಏಕಾಗ್ರತೆಯನ್ನು ಪಡೆಯುತ್ತಾನೆ.

❖

**32. ನಹೀ ದೃಷ್ಟಿ ಹೋ ಚಂಚಲಾ, ಆಸನ-ವಿಜಯೀ ಪೂರ್ಣ ।**
**ಭೌತಿಕ-ಸಾಧನ ದೂರ ಸಬ, ಪ್ರಕೃತಿ-ಸಾಥ ಸಂಪೂರ್ಣ ॥**

ದೃಷ್ಟಿಯ ಚಂಚಲತೆ ಇಲ್ಲದೇ ನಿಶ್ಚಲ ದೃಷ್ಟಿಯೊಂದಿಗೆ ಆಸನದ ದೃಢತೆಯನ್ನು ಹೊಂದಿ ಯೋಗಿಯು ಎಲ್ಲ ಭೌತಿಕ ಸಾಧನಗಳನ್ನು (ಫ್ಯಾನ್, ವಾತಾನುಕೂಲ ಕೂಲರ್ ಮುಂತಾದವು) ದೂರವಿರಿಸಿ ಪ್ರಕೃತಿಯ ಸೌಮ್ಯ ಮತ್ತು ಶಾಂತವಾತಾವರಣದಲ್ಲಿ ಧ್ಯಾನ ಸಂಪನ್ನನಾಗುತ್ತಾನೆ.

## ಉದ್ದೇಶ ಮತ್ತು ಸಾಧನ ದ್ರವ್ಯ

**33. ಶುದ್ಧ-ಆತ್ಮಾ ಧ್ಯೇಯ ಹೈ, ಪರಮೇಷ್ಠಿ, ನವ-ದೇವ ।**
**ನಿಮಿತ್ತ-ದ್ರವ್ಯ ವ ತತ್ತ್ವ ಭೀ, ಅಸ್ತಿಕಾಯ ಸದೈವ ॥**

ಶುದ್ಧ ಆತ್ಮನ ಧ್ಯಾನವು ಯೋಗ್ಯ ಧ್ಯೇಯವಾಗಿದೆ. ಪಂಚಪರಮೇಷ್ಠಿ, ನವದೇವತೆಗಳು, ಷಡ್‌ದ್ರವ್ಯಗಳು, ಸಪ್ತತತ್ತ್ವಗಳು ಮತ್ತು ಪಂಚಾಸ್ತಿ-ಕಾಯಗಳು - ಇವು ಧ್ಯಾನದ ಏಕಾಗ್ರತೆಯಲ್ಲಿ ಸಹಾಯಕವಾಗಿದ್ದು ಯಾವಾಗಲೂ ಚಿಂತನೆ ಮಾಡಲು ಯೋಗ್ಯ ನಿಮಿತ್ತ ದ್ರವ್ಯಗಳಾಗಿವೆ.

## ಧ್ಯಾನಕ್ಕಾಗಿ ಕ್ಷೇತ್ರ

**34. ಧ್ಯಾನ-ಕ್ಷೇತ್ರ ಏಕಾಂತ ಹೋ, ಬಾಧಾಓಂ ಸೇ ದೂರ ।**
**ಜಂಗಲ, ಗೃಹ, ಮಂದಿರ ರಹೇ, ಪ್ರಸನ್ನತಾ ಸೇ ಪೂರ ॥**

ಧ್ಯಾನಕ್ಕಾಗಿ ಏಕಾಂತ ಮತ್ತು ಬಾಧೆ ಇಲ್ಲದ ವಾತಾವರಣದ ಕ್ಷೇತ್ರ ಇರಬೇಕು. ಇಂತಹ ಧ್ಯಾನದ ವಾತಾವರಣ ವನದಲ್ಲಿ, ನಿರ್ಜನ ಮನೆ ಅಥವಾ ಜಿನಮಂದಿರ(ಜಿನಾಲಯ)ದಲ್ಲಿ ದೊರೆಯುತ್ತದೆ. ಇಂತಹ ಉತ್ತಮ ವಾತಾವರಣದಲ್ಲಿ ಪ್ರಸನ್ನತಾ ಪೂರ್ವಕವಾಗಿ ಧ್ಯಾನ ಸಂಪನ್ನವಾಗುತ್ತದೆ.

## ಧ್ಯಾನಕ್ಕಾಗಿ ಕಾಲ

**35. ಸುಬಹ, ಮಧ್ಯ ವ ಶಾಮ ಮೇ, ನಿತ್ಯ ಕರೇ ಶುಭ-ಧ್ಯಾನ ।**
**ಯೋಗ ಸುಷುಮ್ನಾ-ಸ್ವರ ಚಲೇ, ಪರಮ-ಶಾಂತಿ ಹೋ ಜಾನ ॥**

ಬೆಳಿಗ್ಗೆ ಸೂರ್ಯೋದಯದ ಮೊದಲು, ಮಧ್ಯಾಹ್ನ 12 ಗಂಟೆಯ ಸಮೀಪ ಹಾಗೂ ಸಾಯಂಕಾಲದಲ್ಲಿ ಏಳು ಗಂಟೆಯ ಸುಷುಮ್ನ ಯೋಗದ ಕಾಲದಲ್ಲಿ ಸೂರ್ಯ ಹಾಗೂ ಚಂದ್ರರು ಯಾವಾಗಲೂ

ಸಹಜ ರೂಪದ ಸ್ವರದಲ್ಲಿ ಸಾಗುತ್ತಿರುವಾಗ ಪ್ರತಿದಿನ ಶುಭಧ್ಯಾನ ಮಾಡುವುದರಿಂದ ಪರಮಶಾಂತಿ ದೊರೆಯುತ್ತದೆ.

❖

**36. ಛಹ, ಚಾರ ವ ದೋಯ ಘಡೀ, ಸಾಮಾಯಿಕ ಮೇ ಧ್ಯಾನ ।**
**ಉತ್ತಮ, ಮಧ್ಯಮ ವ ಜಘನ, ಕಾಲ ತೀನ ಪಹಚಾನ ॥**

ಸಾಮಾಯಿಕ ರೂಪದ ಧ್ಯಾನದಲ್ಲಿ ಆರು ಘಳಿಗೆ (ಎರಡು ಗಂಟೆ 24 ನಿಮಿಷಗಳು) 'ಉತ್ಕೃಷ್ಟ ಕಾಲ', ನಾಲ್ಕು ಘಳಿಗೆ (ಒಂದು ಘಂಟೆ 36 ನಿಮಿಷಗಳು) 'ಮಧ್ಯಮ ಕಾಲ', ಎರಡು ಘಳಿಗೆ (48 ನಿಮಿಷಗಳು) 'ಜಘನ್ಯ ಕಾಲ'ವೆಂದು ತಿಳಿಯಬೇಕು. ಈ ಕಾಲಗಳಲ್ಲಿ ಶುಭಧ್ಯಾನ ಮಾಡುವುದರಿಂದ ಮನಸ್ಸು ಹೆಚ್ಚು ಹೆಚ್ಚಾಗಿ ಏಕಾಗ್ರವಾಗುತ್ತಾ ಸಾಗುತ್ತದೆ.

## ಧ್ಯಾನಕ್ಕಾಗಿ ಭಾವ

**37. ಸಬ ಜೀವೋಂ ಪರ ಸಾಮ್ಯ ಹೋ, ಸಂಯಮ ಭಾವನ ನೇಕ ।**
**ಆರ್ತ್ತ, ರೌದ್ರ ಕಾ ತ್ಯಾಗ ಹೋ, ಸಮತಾ ಪೂರ್ಣ ವಿವೇಕ ॥**

ಜಗತ್ತಿನ ಎಲ್ಲ ಪ್ರಾಣಿಗಳ ಮೇಲೆ ಭೇದ ಭಾವವಿಲ್ಲದೇ ಸಮತಾ ಭಾವ ಹೊಂದಿರುವುದು ಹಾಗೂ ಇಂದ್ರಿಯಗಳನ್ನು ಪಾಪದಿಂದ ರಕ್ಷಿಸಿ, ಪ್ರಾಣಿಗಳ ರಕ್ಷಣೆಯ ಭಾವದೊಂದಿಗೆ ಶುಭಭಾವನೆಗಳನ್ನು ಹೊಂದುತ್ತಾ ಆರ್ತ ಮತ್ತು ರೌದ್ರ ಧ್ಯಾನಗಳನ್ನು ತ್ಯಾಗ ಮಾಡುವುದು ವಿವೇಕದ ಸಾಮಾಯಿಕ ರೂಪದ ಧ್ಯಾನವಾಗಿದೆ.

## ಸಮತಾ

**38. ನಾ ರಾಜಾ ನಾ ರಂಕ ಲಖ, ನಾ ಹೀ ಸೌಮ್ಯ ಕುರೂಪ ।**
**ಆತಮ ಇನಸೇ ಭಿನ್ನ ಹೈ, ಯತಿ ಲಖತಾ ಸಮ ರೂಪ ॥**

ನನ್ನ ದೃಷ್ಟಿಯಲ್ಲಿ ಯಾರೂ ರಾಜರಿಲ್ಲ; ಯಾರೂ ಬಡವರಿಲ್ಲ; ಯಾರೂ ಸುಂದರರಿಲ್ಲ ಹಾಗೂ ಯಾರೂ ಕುರೂಪಿಗಳಿಲ್ಲ. ಬದಲಾಗಿ ಆತ್ಮನು ಈ ಎಲ್ಲ ಬಾಹ್ಯ ಅವಸ್ಥೆಗಳಿಂದ ಬೇರೆಯಾಗಿದ್ದು ಸಮಾನ ರೂಪದಿಂದ ಅನಂತ ಶಕ್ತಿಯುಳ್ಳವನಾಗಿರುತ್ತಾನೆ.

## ಸಂಯಮ

**39. ಇಂದ್ರಿಯ–ವಿಷಯೋಂ ಮೇ, ಜಹಾ ಭೋಗ ರುಚಿಕಾ ತ್ಯಾಗ ।**

**ತ್ರಸ, ಥಾವರ ಕಾ ಘಾತ ತಜ, ತಜೇಂ ಜಗತ್ ಸೇ ರಾಗ ॥**

ಪಂಚೇಂದ್ರಿಯಗಳ ವಿಷಯಗಳಲ್ಲಿ ಭೋಗಾಸಕ್ತರಲ್ಲದ ಯೋಗಿಗಳು ಕ್ರಿಮಿ, ಕಪ್ಪೆಚಿಪ್ಪು ಮುಂತಾದ 'ದ್ವೀಂದ್ರಿಯ'; ಇರುವೆ, ಚೇಳು ಮುಂತಾದ 'ತ್ರೀಂದ್ರಿಯ'; ಸೊಳ್ಳೆ, ನೊಣ, ಭ್ರಮರ ಮುಂತಾದ 'ಚತುರಿಂದ್ರಿಯ'; ಹಾಗೂ ಇಲಿ, ಕಪ್ಪೆ, ಮೀನು, ಹಸು, ಮನುಷ್ಯ ಮುಂತಾದ 'ಪಂಚೇಂದ್ರಿಯ'ಗಳಂತಹ "ತ್ರಸ" ಜೀವಿಗಳ ಮತ್ತು ಪೃಥ್ವಿ, ಜಲ, ಅಗ್ನಿ, ವಾಯು, ವನಸ್ಪತಿ ಇಂತಹ "ಸ್ಥಾವರ" ಏಕೇಂದ್ರಿಯ ಜೀವಗಳ ಹಿಂಸೆಯನ್ನು ಬಿಡುತ್ತಾರೆ. ಸಂಸಾರದಲ್ಲಿ ರಾಗ, ದ್ವೇಷ ಮತ್ತು ಮೋಹದ ತ್ಯಾಗ ಮಾಡಿರುವವರನ್ನು ಧ್ಯಾನ ಮಾಡಲು ಯೋಗ್ಯ ಸಾವಧಾನಿ ಸಂಯಮಿಗಳೆಂದು ಕರೆಯಲಾಗುತ್ತದೆ.

## ಸದ್ಭಾವನೆಗಳ ಪ್ರಕಾರಗಳು

**40. ಜಹಾ ಭಾವನಾ ಧರ್ಮ ಕೀ, ಪಚ್ಚೀಸ ಸೋಲಹ ಜಾನ ।**

**ಬಾರಹ, ಸಪ್ತ ವ ಚಾರ ಭೀ, ತ್ರಿ, ದ್ವಿ, ಇಕ ಶುಭ ಮಾನ ॥**

ಧರ್ಮಕ್ಕೆ ಸಂಬಂಧಿಸಿದಂತೆ 25, 16, 12, 7, 4, 3, 2 ಮತ್ತು 1 ಹೀಗೆ ಒಟ್ಟು 70 ಪ್ರಕಾರದ ಭಾವನೆಗಳನ್ನು ಭಾವಿಸಲಾಗುತ್ತದೆ. ಅವುಗಳನ್ನು ಶುಭ ಭಾವನೆಗಳ ರೂಪದಲ್ಲಿ ಭಾವಿಸಬೇಕು.

❖

**41. ಪಾಂಚ-ವ್ರತೋಂ ಕೀ ಭಾವನಾ, ಪಾಂಚ-ಪಾಂಚ ಪಹಚಾನ ।**
**ದರ್ಶನವಿಶುದ್ಧಿ ಆದಿ ಭೀ, ಸೋಲಹ-ಭಾವನಾ ಮಾನ ।**

ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ರೂಪದ ವ್ರತಗಳ ಐದೈದು ಭಾವನೆಗಳನ್ನು ತಿಳಿಯಿರಿ ಹಾಗೂ ದರ್ಶನವಿಶುದ್ಧಿ ಮುಂತಾದ ಹದಿನಾರು ಭಾವನೆಗಳನ್ನು ತಿಳಿಯಿರಿ.

❖

**42. ಅನಿತ್ಯ ಆದಿಕ-ಭಾವನಾ, ಬಾರಹ-ಭಾವನ ಜಾನ ।**
**ಶಾಸ್ತ್ರಾಭ್ಯಾಸ ಜಿನ-ಸ್ತುತಿ, ಆದಿಕ ಸಾತ ಸು-ಮಾನ ॥**

ಅನಿತ್ಯ ಮುಂತಾದ ಅನುಪ್ರೇಕ್ಷೆಗಳ 12 ಭಾವನಾರೂಪಗಳನ್ನು ತಿಳಿಯಿರಿ ಹಾಗೂ ಶಾಸ್ತ್ರಾಭ್ಯಾಸ ಮತ್ತು ಜಿನೇಂದ್ರಸ್ತುತಿ ಮುಂತಾದವುಗಳ ಏಳು ಭಾವನೆಗಳನ್ನು ಸ್ವೀಕರಿಸಿರಿ.

❖

**43. ಮೈತ್ರೀ ಪ್ರಮೋದ-ಭಾವನಾ, ಕರುಣಾ ಭಿ ಶುಭ ರೂಪ ।**
**ಮಧ್ಯಸ್ಥೀ-ಚೌಥೀ ರಹೀ, ಮೋಕ್ಷಮಾರ್ಗ-ಅನುರೂಪ ॥**

ಮೈತ್ರಿ, ಪ್ರಮೋದ, ಕರುಣೆ ಮತ್ತು ಮಾಧ್ಯಸ್ಥ - ಈ ನಾಲ್ಕು ಭಾವನೆಗಳನ್ನು ಮೋಕ್ಷಮಾರ್ಗದ ಅನುರೂಪವಾಗಿ ಶುಭ ಭಾವನೆಗಳೆಂದು ತಿಳಿಯಬೇಕು.

❖

**44. ಸಮ್ಯಗ್ದರ್ಶನ ವಾ ಜ್ಞಾನ, ವ್ರತ, ರತ್ನತ್ರಯ ಹೈ ಜಾನ ।**
**ಸಂವೇಗರು ವೈರಾಗ್ಯ ಭೀ, ಶುಭ-ಭಾವನ ಪಹಿಚಾನ ॥**

ಸಮ್ಯಗ್ದರ್ಶನ ಸಮ್ಯಕ್‌ಜ್ಞಾನ ಮತ್ತು ಸಮ್ಯಕ್ಚಾರಿತ್ರ ಇವುಗಳ ರತ್ನತ್ರಯ ರೂಪದ ಮೂರು ಭಾವನೆಗಳನ್ನು ತಿಳಿಯಿರಿ ಹಾಗೂ ಸಂವೇಗ ಮತ್ತು ವೈರಾಗ್ಯ ಈ ಎರಡನ್ನೂ ಶುಭಭಾವನಾ ರೂಪದಲ್ಲಿ ತಿಳಿಯಿರಿ.

❖

**45. ಆತ್ಮ-ತತ್ತ್ವ ಕೀ ಭಾವನಾ, ಏಕ-ಭಾವನಾ ನೇಕ ।**
**ಶಿವಸುಖ ಕೀ ಯೇ ಭಾವನಾ ಕರೇ ಆತ್ಮ-ಅಭಿಷೇಕ ॥**

ನಮ್ಮ ಆತ್ಮ-ತತ್ತ್ವದ ಭಾವನೆಯು ಒಂದು ಸರಳ ಸುಂದರ ಭಾವನೆಯಾಗಿದೆ. ಶಿವಸುಖ(ಮೋಕ್ಷ) ಕೊಡುವ ಈ ಭಾವನೆಯು ನಮ್ಮ ಆತ್ಮನ ಅಭಿಷೇಕ ಮಾಡಿ ನಮ್ಮ ಆತ್ಮನ ಎಂಟೂ ಕರ್ಮಗಳನ್ನು ತೊಳೆದು ನಿರ್ಮಲ ಅವಸ್ಥೆಯನ್ನು ಪಡೆಯಲು ಸಹಕಾರಿಯಾಗಿದೆ.

## ಆರ್ತಧ್ಯಾನದ ಸ್ವರೂಪ

**46. ಅರ್ತ್ತಿತಭಾವ ಹೀ ಆರ್ತ್ತ ಹೈ, ಜಿಸಕಾ ದುಃಖ ಹೈ ನಾಮ ।**
**ಅಶುಭ-ಬಂಧ, ಹೋ ದುರ್ಗತಿ, ಬಿಗಡೇ ಧರ್ಮ ಸು-ಕಾಮ ॥**

ಆರ್ತ ಅಂದರೆ ದುಃಖ. ಇಂತಹ ದುಃಖರೂಪದ ಧ್ಯಾನಗಳನ್ನು ಆರ್ತಧ್ಯಾನ ಹೆಸರಿನಿಂದ ಕರೆಯಲಾಗುತ್ತದೆ. ಆರ್ತಧ್ಯಾನ ಮಾಡುವುದರಿಂದ ಧರ್ಮದ ಒಳ್ಳೆಯ ಕಾರ್ಯಗಳು ಕೆಟ್ಟುಹೋಗುತ್ತವೆ, ಅಶುಭ ಕರ್ಮಗಳ ಬಂಧವಾಗುತ್ತವೆ. ಆತ್ಮನು ತಿರ್ಯಂಚ ಮುಂತಾದ ದುರ್ಗತಿಯನ್ನು ಪಡೆಯುತ್ತಾನೆ.

## ಇಷ್ಟವಿಯೋಗ

**47. ಜಹಾ ನಷ್ಟ ಹೋ ಇಷ್ಟ ವೇ, ಪದಾರ್ಥ ಯಾ ಹೋ ದೂರ ।**
**ಕಹಾ ಮಿಲೇಂಗೆ, ಖೇದ ಯಹ, ಇಷ್ಟ-ವಿಯೋಗೀ ಪೂರ ॥**

ಮನಸ್ಸಿಗೆ ಇಷ್ಟವಾದ ಪದಾರ್ಥಗಳು ಹಾಗೂ ವ್ಯಕ್ತಿಗಳು ದೂರವಾದಾಗ ಅಥವಾ ಸಮಾಪ್ತಿಯಾದಾಗ ಅದು ಮತ್ತೆ ಎಲ್ಲಿ ಯಾವಾಗ ಸಂಯೋಗವಾಗಬಹುದೆಂದು ಮೂರು ಕಾಲಕ್ಕೆ ಸಂಬಂಧಿಸಿದಂತೆ ಆಗುವ ಖೇದ, ಚಿಂತೆ ಅಥವಾ ವಿಕಲತೆಯನ್ನು 'ಇಷ್ಟವಿಯೋಗ' ಆರ್ತಧ್ಯಾನವೆಂದು ಕರೆಯುತ್ತಾರೆ.

## ಅನಿಷ್ಟ ಸಂಯೋಗ

**48. ಜಹಾ ಅನಿಷ್ಟ-ಪದಾರ್ಥ ಕೇ, ಹಟ ಜಾನೇ ಕಾ ಭಾವ ।**
**ಅನಿಷ್ಟ-ಸಂಯೋಗಿ ಬನೇ, ಮಿಲತಾ ನಹೀ ಸ್ವಭಾವ ॥**

ಮನಸ್ಸಿಗೆ ಇಷ್ಟವಾಗದಿರುವ ಪದಾರ್ಥಗಳು ಅಥವಾ ವ್ಯಕ್ತಿಗಳು ದೊರಕಿದಾಗ ಅವುಗಳಿಂದ ಅಥವಾ ಅವರಿಂದ ದೂರವಾಗುವುದಕ್ಕೆ ಸಂಬಂಧಿಸಿದಂತೆ ಆಗುವ ಚಿಂತೆಯನ್ನು ತಮ್ಮ ವಾಸ್ತವಿಕ ಸ್ವಭಾವದಿಂದ ದೂರವಿಡುವುದಕ್ಕೆ 'ಅನಿಷ್ಟ ಸಂಯೋಗ' ಆರ್ತಧ್ಯಾನವೆಂದು ಕರೆಯುತ್ತಾರೆ.

## ಪೀಡಾ ಚಿಂತನೆ

**49. ತನ ಕೀ ಪೀಡಾ ಹೋಯ್ ಜಬ, ರೋಗಾದಿಕ ಹೋ ಮಾನ ।**
**ರೋಗ-ಭೂಖ ಆದಿಕ ಮಿಟೇ, ಪೀಡಾ-ಚಿಂತನ ಧ್ಯಾನ ॥**

ರೋಗ ಮುಂತಾದವುಗಳಿಂದ ಶಾರೀರಿಕ ಕಷ್ಟಗಳಿಗೆ ಸಂಬಂಧಿಸಿದಂತೆ ಹಾಗೂ ಹಸಿವು-ಬಾಯಾರಿಕೆ ಮುಂತಾದವುಗಳ ವೇದನೆಗಳನ್ನು ಶಮನ ಮಾಡುವುದಕ್ಕೆ ಸಂಬಂಧಿಸಿದಂತೆ ಆಗುವ ವಿಚಾರಗಳಿಗೆ 'ಪೀಡಾ ಚಿಂತನೆ'ಯ ಆರ್ತಧ್ಯಾನವೆಂದು ಕರೆಯುತ್ತಾರೆ.

## ನಿದಾನ

**50. ಇಂದ್ರಾದಿಕ ಕೀ ಸಂಪದಾ, ಇಂದ್ರಿಯ ಕೇ ವೇ ಭೋಗ ।**
**ಆಗೇ ಹಮಕೋ ಪ್ರಾಪ್ತ ಹೋ, ಯಹೀ ನಿದಾನ ಪ್ರಯೋಗ ॥**

ನಮ್ಮ ಸತ್ಕಾರ್ಯಗಳ ಫಲ ಸ್ವರೂಪವಾಗಿ ಇಂದ್ರ, ಚಕ್ರವರ್ತಿ, ರಾಜ ಮತ್ತು ಶ್ರೇಷ್ಠಿ ಮುಂತಾದ ಸಾಂಸಾರಿಕ ವೈಭವ ಅಥವಾ ಪಂಚೇಂದ್ರಿಯಗಳ ವಿಷಯಭೋಗಗಳು ಮುಂದೆ ನನಗೆ ದೊರಕಲಿ ಎಂದು ವಿಚಾರ ಮಾಡುವುದು 'ನಿದಾನ' ಆರ್ತಧ್ಯಾನ ಎನಿಸುತ್ತದೆ.

## ಆರ್ತಧ್ಯಾನದ ಗುಣಸ್ಥಾನ

**51. ಪ್ರಥಮ ಪಾಂಚ-ಗುಣಸ್ಥಾನ ತಕ, ಸಭಿ ಆರ್ತ ಹೋ ಧ್ಯಾನ ।**
**ಛಠವೇ ಉಸ ಗುಣಸ್ಥಾನ ಮೇ, ಬಿನ ನಿದಾನ ತ್ರಯ ಮಾನ ॥**

ಮಿಥ್ಯಾದೃಷ್ಟಿ, ಸಾಸಾದನ ಸಮ್ಯಗ್ದೃಷ್ಟಿ, ಸಮ್ಯಗ್ ಮಿಥ್ಯಾದೃಷ್ಟಿ, ಅಸಂಯತ ಸಮ್ಯಗ್ದೃಷ್ಟಿ ಹಾಗೂ ಸಂಯತಾಸಂಯತ – ಈ ಐದು ಗುಣಸ್ಥಾನಗಳವರೆಗೆ ಎಲ್ಲ ನಾಲ್ಕೂ ಆರ್ತಧ್ಯಾನಗಳು ಯಥಾ ಸಂಭವ ಆಗುತ್ತಿರುತ್ತವೆ. ಆದರೆ ಪ್ರಮತ್ತ ಸಂಯತ ಹೆಸರಿನ ಮುನಿಗಳ 6ನೇ ಗುಣಸ್ಥಾನದಲ್ಲಿ ನಿದಾನವನ್ನು ಬಿಟ್ಟು ಇಷ್ಟವಿಯೋಗ, ಅನಿಷ್ಟಸಂಯೋಗ ಮತ್ತು ಪೀಡಾಚಿಂತನೆ ಎಂಬ ಮೂರು ಆರ್ತಧ್ಯಾನಗಳು ಸೂಕ್ತ ಕಾಲದಲ್ಲಿ ಆಗುವ ಸಂಭವವಿದೆ.

## ರೌದ್ರಧ್ಯಾನ

**52. ರುದ್ರ-ಭಾವ ಹೀ ರೌದ್ರ ಹೈ, ಕ್ರೂರ ಉಠೇ ಪರಿಣಾಮ ।**
**ಜಿಸಕೋ ಭಿ ತಜನಾ ಕಹೂ, ತಭೀ ಹೋಯ ಶುಭ-ಧ್ಯಾನ ॥**

ರುದ್ರ ಅಂದರೆ ಕ್ರೂರ. ಹಿಂಸಾನಂದ, ಮೃಷಾನಂದ, ಚೌರ್ಯಾನಂದ ಮತ್ತು ಪರಿಗ್ರಹಾನಂದಗಳು ರೌದ್ರಧ್ಯಾನಾತ್ಮಕವಾಗಿವೆ. ಅವು ಕ್ರೂರ ಪರಿಣಾಮಗಳನ್ನು ಉಂಟುಮಾಡುತ್ತವೆ. ಅವುಗಳನ್ನು ಬಿಟ್ಟುಬಿಡಬೇಕು. ಆಗ ಶುಭಧ್ಯಾನದ ಉಪಲಬ್ಧಿಯಾಗುತ್ತದೆ.

## ಹಿಂಸಾನಂದ

**53. ಜಹಾ ಜೀವ ಕಾ ಘಾತ ಹೋ, ಐಸಾ ಕಾರ್ಯ ಸಹರ್ಷ ।**
**ಕರನಾ ಹಿಂಸಾನಂದ ಹೈ, ಜೀವನ ನಾ ಆದರ್ಶ ॥**

ತ್ರಸ ಮತ್ತು ಸ್ಥಾವರ ಜೀವಗಳು ಘಾತವಾಗುವಾಗ ಇಂತಹ ಕಾರ್ಯಗಳಲ್ಲಿ ಸಂತಸಪಡುವುದು ಅಥವಾ ಒಳ್ಳೆಯದೆಂದು ಭಾವಿಸುವುದು 'ಹಿಂಸಾನಂದ' ಹೆಸರಿನ ರೌದ್ರಧ್ಯಾನವಾಗಿದೆ. ಇಂತಹ ಹಿಂಸಕ (ಆರಂಭ ಮುಂತಾದ) ಕಾರ್ಯಗಳನ್ನು ಮಾಡುವವರನ್ನು ಜನರು ಸದಾಚಾರಿ ಎಂದು ಭಾವಿಸುವುದಿಲ್ಲ.

## ಮೃಷಾನಂದ

**54. ಝೂಟ-ವಚನ ಜೋ ಪಾಪ ಹೈ, ಉನಕಾ ಜಹಾ ಪ್ರಯೋಗ ।**
**ಮೃಷಾನಂದ ವಹ ಧ್ಯಾನ ಹೈ, ಶುದ್ಧ ನ ಹೋ ಉಪಯೋಗ ॥**

ಪಾಪರೂಪದ ಅಥವಾ ಹಿಂಸೆಗೆ ಕಾರಣವಾಗುವ ಅಸತ್ಯ ವಚನಗಳನ್ನು ಹೇಳುವುದು, ಹೇಳಿಸುವುದು 'ಮೃಷಾನಂದ' ಧ್ಯಾನವಾಗಿದೆ. ಇಂತಹ ಕಾರ್ಯಗಳನ್ನು ಮಾಡುವುದರಿಂದ ನಮ್ಮ ಆತ್ಮನ ಉಪಯೋಗವು ಅಶುದ್ಧರೂಪವಾಗುತ್ತದೆ.

## ಚೌರ್ಯಾನಂದ

**55. ಪರ-ಪದಾರ್ಥ ಕಾ ಹೋ ಹರಣ, ಛಲ-ಕಪಟೀ-ಮನ ಹೋಯ್**
**ಚೌರ್ಯಾನಂದೀ ಧ್ಯಾನ ಹೈ ದುರ್ಗತಿ ಮೇ ಗಮ ಜೋಯ ॥**

ಅನ್ಯರ ಧನ ಮುಂತಾದವುಗಳ ಅಪಹರಣ ಮಾಡುವುದರಿಂದ ಮನಸ್ಸು ಛಲ ಮತ್ತು ಕಪಟವಾಗುವುದು. ಅದರಲ್ಲಿ ಹರ್ಷಗೊಳ್ಳುವುದು ಇದು 'ಚೌರ್ಯಾನಂದ' ಎನಿಸುತ್ತದೆ. ಈ ಧ್ಯಾನವು ದುರ್ಗತಿಗೆ ತಲುಪಿಸಿ ಬಹಳ ದುಃಖವನ್ನು ಕೊಡುತ್ತದೆ.

## ಪರಿಗ್ರಹಾನಂದ

**56. ಇಚ್ಛಾ ಓಂಕಾ ಜಾಲ ಜೋ, ಬುನೇ ಸಂಗ ಕಾ ಭಾರ ।**
**ಪರಿಗ್ರಹಾನಂದೀ ಬನೇ, ನಾರಕ-ದುಕ್ಖ-ಮಝಾರ ॥**

ಸಾಂಸಾರಿಕ ಭೋಗ ಇಚ್ಛೆಗಳ ಬಲೆಯನ್ನು ಹರಡಿ, ಪರಿಗ್ರಹಭಾರವನ್ನು ಹೆಚ್ಚಿಸಿ, ಅದರಲ್ಲಿ ಹರ್ಷವನ್ನು ಆಚರಿಸುವ ಮೋಹಿ ಆತ್ಮನು 'ಪರಿಗ್ರಹಾನಂದ' ರೌದ್ರಧ್ಯಾನಿಯಾಗಿ ನರಕಾಯುವಿನ ಆಸ್ರವ ಮಾಡಿಕೊಂಡು ನರಕಗಳಲ್ಲಿ ಜನಿಸಿ ಮಹಾದುಃಖಗಳನ್ನು ಹೊಂದುತ್ತಾನೆ.

## ರೌದ್ರಧ್ಯಾನದ ಗುಣಸ್ಥಾನ

**57. ಪ್ರಥಮ ಪಾಂಚ-ಗುಣಸ್ಥಾನ ತಕ, ಸಭೀ ರೌದ್ರ ಹೋ ಧ್ಯಾನ ।**
**ಸಮಕಿತ, ಅಣುವ್ರತ ಹೋ ಜಹಾ, ತೀವ್ರ-ರೌದ್ರ ನಾ ಜಾನ ॥**

ಪ್ರಥಮ ಮಿಥ್ಯಾದೃಷ್ಟಿ ಗುಣಸ್ಥಾನದಿಂದ ಸಂಯತಾ ಸಂಯತಾ ಹೆಸರಿನ ಐದನೆ ಗುಣಸ್ಥಾನದವರೆಗೆ ಎಲ್ಲ ಪ್ರಕಾರದ ರೌದ್ರಧ್ಯಾನಗಳು ಯಥಾ ಸಮಯದಲ್ಲಿ ಸಂಭವಿಸುತ್ತವೆ. ಆದರೆ ಅಣುವ್ರತಗಳೊಂದಿಗೆ ಪ್ರಶಮ, ಸಂವೇಗ, ಆಸ್ತಿಕ್ಯ ಹಾಗೂ ಅನುಕಂಪರೂಪ ಸಮ್ಯಕ್ತ್ವವು ಇರುವಾಗ ಸ್ಥೂಲರೂಪದಿಂದ ಐದು ಪಾಪಗಳ ಅಥವಾ ಅನ್ಯಾಯ, ಅನೀತಿಗಳ ತ್ಯಾಗವಾಗುವುದರಿಂದ ರೌದ್ರಧ್ಯಾನವು ತೀವ್ರರೂಪದಿಂದ ಆಗುವುದಿಲ್ಲ. ಬದಲಾಗಿ ಅದರಿಂದ ಅನ್ಯಾಯ ಅನೀತಿಗಳನ್ನು ಪರಾಜಿತಗೊಳಿಸಲಾಗುತ್ತದೆ. (ರಾಮನು ರಾವಣನ ಅನೀತಿಯನ್ನು ಖಂಡನೆ ಮಾಡಲು ಯುದ್ಧ ಮಾಡಿದ್ದನು).

## ಧರ್ಮಧ್ಯಾನದ ಸ್ವರೂಪ

**58. ಆರ್ತ್ತ, ರೌದ್ರ ಕೋ ತ್ಯಾಗ ಕರ, ಕರೇ ಧರ್ಮ-ಮಯ ಧ್ಯಾನ ।**
**ರಾಗ-ದ್ವೇಷ ವಾ ಪಾಪ ಬಿನ, ಸಾಮಾಯಿಕ ಪಹಚಾನ ॥**

ಆರ್ತ ಮತ್ತು ರೌದ್ರ ಧ್ಯಾನಗಳನ್ನು ಬಿಟ್ಟು ಧರ್ಮಧ್ಯಾನ ಮಾಡಬೇಕು. ಈ ಧರ್ಮಧ್ಯಾನದಿಂದ ರಾಗ, ದ್ವೇಷ ಮತ್ತು ಪಾಪಗಳಿಂದ ರಹಿತವಾದ ಒಂದು ಉನ್ನತ ಅವಸ್ಥೆ 'ಸಾಮಾಯಿಕ'ವು ಉಪಲಬ್ಧಿಯಾಗುತ್ತದೆ ಎಂದು ತಿಳಿಯಿರಿ.

❖

**59. ಸದಾ ಧರ್ಮ-ಮಯ ಭಾವ ಹೋ, ಆವಶ್ಯಕ ಮೇ ಲೀನ ।**
**ಧರ್ಮ-ಧ್ಯಾನ ತಬ ಸಾಥ ಹೋ, ವಹೀ ಭವ್ಯ ಸ್ವಾಧೀನ ॥**

ಮುನಿಗಳಿಗೆ ಸಂಬಂಧಿಸಿದ ಸಾಮಾಯಿಕ, ಸ್ತುತಿ, ವಂದನೆ, ಪ್ರತಿಕ್ರಮಣ, ಪ್ರತ್ಯಾಖ್ಯಾನ ಮತ್ತು ಕಾಯೋತ್ಸರ್ಗವೆಂಬ ಆರು ಆವಶ್ಯಕಗಳಲ್ಲಿ ಹಾಗೂ ಶ್ರಾವಕರಿಗೆ ಸಂಬಂಧಿಸಿದ ವೀತರಾಗ ದೇವನ ಪೂಜೆ, ನಿರ್ಗ್ರಂಥ ಗುರುವಿನ ಉಪಾಸನೆ, ನಾಲ್ಕು ಅನುಯೋಗಗಳ ಸ್ವಾಧ್ಯಾಯ, ಪ್ರಾಣಿರಕ್ಷಣೆ ರೂಪದ ಸಂಯಮ, ಉಪವಾಸ ಮತ್ತು ರಸ ಇತ್ಯಾದಿಗಳ ತ್ಯಾಗರೂಪದ ತಪ, ಆಹಾರ, ಔಷಧ, ಉಪಕರಣ ಮತ್ತು ಆವಾಸ ರೂಪದ ನಾಲ್ಕು ತರಹದ ದಾನರೂಪದ ಷಟ್‌ಕರ್ಮಗಳಲ್ಲಿ ಧರ್ಮಮಯ ಶುಭಭಾವಗಳಾಗುತ್ತವೆ. ಅದನ್ನು ಧರ್ಮಧ್ಯಾನವೆನ್ನುತ್ತಾರೆ. ಇಂತಹ ಧರ್ಮಧ್ಯಾನ ಮಾಡುವುದರಿಂದ ಭವ್ಯಾತ್ಮರಿಗೆ ಸ್ವಾಧೀನ ಅವಸ್ಥೆ ದೊರಕುತ್ತದೆ.

## ಧರ್ಮಧ್ಯಾನದ ಭೇದಗಳು

**60. ಆಜ್ಞಾ-ವಿಚಯ, ಅಪಾಯ ಭೀ, ಅರು ವಿಪಾಕ, ಸಂಸ್ಥಾನ ।**
**ಚಾರ ಧರ್ಮ ಯೇ ಧ್ಯಾನ ಹೈ, ಜಗ ಮೇ ಶುಭ ಹೈ ಧ್ಯಾನ ॥**

ಆಜ್ಞಾವಿಚಯ, ಅಪಾಯವಿಚಯ, ವಿಪಾಕವಿಚಯ ಮತ್ತು ಸಂಸ್ಥಾನವಿಚಯ ಈ ನಾಲ್ಕೂ ಧರ್ಮಧ್ಯಾನದ ಭೇದಗಳಾಗಿದ್ದು ಜಗತ್ತಿನಲ್ಲಿ ಶುಭಧ್ಯಾನಗಳೆಂದು ಮಾನ್ಯತೆ ಪಡೆದಿವೆ.

## ಆಜ್ಞಾವಿಚಯ

61. ವೀತರಾಗ ಕೀ ದೇಶನಾ, ದ್ರವ್ಯ, ತತ್ತ್ವ-ಉಪದೇಶ ।
ರತ್ನತ್ರಯ-ಮಯ ಮೋಕ್ಷಮಯ, ಗಹೇ ಮಾನ ಆದೇಶ ॥

ವೀತರಾಗ (ತೀರ್ಥಂಕರ ಅಥವಾ ಅರಿಹಂತ ಭಗವಾನರ) ವಾಣಿಯಿಂದ ಪಡೆದ ಆರುದ್ರವ್ಯ, ಏಳುತತ್ತ್ವ ಹಾಗೂ ಸಮ್ಯಗ್ದರ್ಶನ ಸಮ್ಯಕ್‌ಜ್ಞಾನ ಹಾಗೂ ಸಮ್ಯಕ್ಚಾರಿತ್ರ ರೂಪದ ರತ್ನತ್ರಯಮಯ ಮೋಕ್ಷಮಾರ್ಗದ ಉಪದೇಶವನ್ನು ನಾವು ಆದೇಶವೆಂದು ಭಾವಿಸಿ ಶ್ರದ್ಧೆಯಿಂದ ಆತ್ಮಕಲ್ಯಾಣಕ್ಕಾಗಿ ಸ್ವೀಕಾರ ಮಾಡುವ ಚಿಂತನೆಯ ವಿಚಾರಧಾರೆಯು 'ಆಜ್ಞಾವಿಚಯ' ಧರ್ಮಧ್ಯಾನವೆಂದು ಕರೆಯಲ್ಪಟ್ಟಿದೆ.

## ಅಪಾಯವಿಚಯ

62. ದುಖ-ಮಯ ಯಹ ಸಂಸಾರ ಹೈ, ಕುದರ್ಶ ಪಾಂಚೋ ಪಾಪ ।
ಛೋಡೇ ಯಹೀ ಅಪಾಯ ಹೈ, ಧ್ಯಾನಿ ದೇ ಜಿನ-ಜಾಪ ॥

ರೋಗ, ಹಸಿವು, ಬಾಯಾರಿಕೆ, ಶೀತ, ಉಷ್ಣ ಮುಂತಾದ ಶಾರೀರಿಕ ದುಃಖದಿಂದ, ಕಹಿ, ತಿರಸ್ಕಾರ ಮುಂತಾದ ವಚನರೂಪ ವಾಚನಿಕ ದುಃಖದಿಂದ ಹಾಗೂ ಚಿಂತೆ ಮತ್ತು ಭೋಗಾಕಾಂಕ್ಷೆ ಮುಂತಾದ ಮಾನಸಿಕ ದುಃಖದಿಂದ ಪರಿಪೂರ್ಣವಾಗಿರುವ ಈ ಸಂಸಾರ ಹಾಗೂ ಇಂತಹ ದುಃಖದಾಯಕ ಸಂಸಾರದ ಕಾರಣ ಸ್ವರೂಪವನ್ನು ಏಕಾಂತ, ವಿಪರೀತ, ವೈನಯಿಕ, ಸಂಶಯ ಮತ್ತು ಅಜ್ಞಾನ ರೂಪದ ಐದು ಮಿಥ್ಯಾತ್ವಗಳನ್ನು ಹಾಗೂ ಹಿಂಸೆ, ಸುಳ್ಳು, ಕಳ್ಳತನ, ಕುಶೀಲ ಮತ್ತು ಪರಿಗ್ರಹ ರೂಪದ ಐದು ಪಾಪಗಳಿಂದ ಈ ಸಂಸಾರೀ ಆತ್ಮನು ಯಾವಾಗ ಮುಕ್ತನಾಗುವನು ಎಂಬ ಚಿಂತನೆ ಮಾಡುವುದು 'ಅಪಾಯವಿಚಯ' ಎಂಬ ಧರ್ಮಧ್ಯಾನವೆಂದು ಕರೆಯಲ್ಪಟ್ಟಿದೆ. ಈ ಕಾರ್ಯದ ಸಫಲತೆಗಾಗಿ ಜಿನೇಂದ್ರ ಪ್ರಭುವಿನ ಹೆಸರಿನ ಜಪ ಮಾಡುವುದು ಸರ್ವಶ್ರೇಷ್ಠವೆಂದು ತಿಳಿಯಬೇಕು.

## ವಿಪಾಕವಿಚಯ

**63. ಕರ್ಮೋಂ ಕಾ ಜೋ ಪಾಕ-ಫಲ, ಭವ-ಸುಖ ದುಃಖ ದೇ ಜಾನ ।**
**ಲಖ-ಚೌರಾಸಿ ಯೋನಿ ಮೇ, ಚಉಗತಿ-ಭ್ರಮತ ಅಜಾನ ॥**

ಜ್ಞಾನಾವರಣೀಯ, ದರ್ಶನಾವರಣೀಯ, ವೇದನೀಯ, ಮೋಹನೀಯ, ಆಯು, ನಾಮ, ಗೋತ್ರ ಮತ್ತು ಅಂತರಾಯ ಈ ಎಂಟು ಕರ್ಮಗಳಿಂದ ಒಂದೊಂದರಂತೆ ಕ್ರಮವಾಗಿ ಜ್ಞಾನದಲ್ಲಿ ಬಾಧೆ ಉಂಟಾಗುವುದು; ದರ್ಶನದಲ್ಲಿ ತಡೆಯಾಗುವುದು; ಸಂಸಾರದಲ್ಲಿ ಮೋಹವಾಗುವುದು; ಗತಿಯಲ್ಲಿ ಬಂಧವಾಗುವುದು; ಸುಂದರ-ಅಸುಂದರ ರೂಪ ಉಂಟಾಗುವುದು; ಉಚ್ಚ-ನೀಚ ಕುಲದಲ್ಲಿ ಜನಿಸುವಂತಾಗುವುದು; ದಾನ, ಲಾಭ ಇತ್ಯಾದಿಗಳಿಗೆ ತಡೆಯಾಗುವುದು; ಸುಖ-ದುಃಖ ಉಂಟಾಗುವುದು; 84 ಲಕ್ಷಯೋನಿರೂಪದ ಚತುರ್ಗತಿ ಸಂಸಾರದಲ್ಲಿ ಅನಂತಕಾಲದವರೆಗೆ ಭ್ರಮಣೆಯಾಗುವಂತೆ ಮಾಡುತ್ತದೆ. ಇತ್ಯಾದಿಯಾಗಿ ಚಿಂತನೆ ಮಾಡುವುದು 'ವಿಪಾಕವಿಚಯ' ಧರ್ಮಧ್ಯಾನವಾಗಿದೆ.

## ಸಂಸ್ಥಾನವಿಚಯ

**64. ತೀನ-ಲೋಕ ಕಾ ಸಬ ಗಣಿತ, ಶುದ್ಧ-ದ್ರವ್ಯ ಉಪಯೋಗ ।**
**ಮುನಿ ಸಂಸ್ಥಾನ-ವಿಚಯ ಕರೇ, ಧ್ಯಾನ ರಹಾ ಸದ್‌ಯೋಗ ॥**

ಮೂರು ಲೋಕಗಳ ರಚನೆಯ ಸಂಪೂರ್ಣ ಗಣಿತ ಅಥವಾ ರಜ್ಜು ಹಾಗೂ ಯೋಜನ ಇತ್ಯಾದಿಗಳ ರೂಪದಲ್ಲಿ ಲೋಕದ ಪ್ರಮಾಣ ಹಾಗೂ ದ್ರವ್ಯಗಳ ಶುದ್ಧಸ್ವರೂಪ ಮತ್ತು ಆತ್ಮನ ಶುದ್ಧೋಪಯೋಗದ ಪ್ರಾಪ್ತಿಯಲ್ಲಿ ನಿಮಿತ್ತವಾದ ಪದಸ್ಥ, ಪಿಂಡಸ್ಥ, ರೂಪಸ್ಥ ಮತ್ತು ರೂಪಾತೀತ ಧ್ಯಾನಗಳನ್ನು ಮುನಿಗಳು ಚಿಂತನೆ ಮಾಡುವುದು 'ಸಂಸ್ಥಾನವಿಚಯ' ಧರ್ಮಧ್ಯಾನರೂಪದ ಉತ್ತಮ ಯೋಗವೆಂದು ಹೇಳಲಾಗುತ್ತದೆ.

## ಸಂಸ್ಥಾನವಿಚಯದ ಭೇದಗಳು

**65. ಪದಸ್ಥ ಅರು ಪಿಂಡಸ್ಥ ವಾ, ಹೈ ರೂಪಸ್ಥ ಸು-ಧ್ಯಾನ ।**
**ರೂಪಾತೀತ ಮಹಾನ ಯೇ, ಶಿವ-ಸುಖ ದೇ ಕಲ್ಯಾಣ ॥**

ಸಂಸ್ಥಾನವಿಚಯದ ಭೇದರೂಪ ಧರ್ಮಧ್ಯಾನದಲ್ಲಿ ಪದಸ್ಥ, ಪಿಂಡಸ್ಥ, ರೂಪಸ್ಥ ಮತ್ತು ರೂಪಾತೀತ ಧ್ಯಾನಗಳು ಮಹಾನ್ ಆಗಿವೆ. ಇವು ಶುಕ್ಲಧ್ಯಾನದ ಸಾಧನಗಳಾಗಿ ಮೋಕ್ಷಸುಖವನ್ನು ಕೊಟ್ಟು ಆತ್ಮನ ಕಲ್ಯಾಣ ಮಾಡುತ್ತವೆ.

## ಪದಸ್ಥಧ್ಯಾನ

**66. ಮಂತ್ರ-ವಾಕ್ಯ ಕಾ ಧ್ಯಾನ ಹೋ, ವೀತರಾಗ ಶುಭ ರೂಪ ।**
**ಪದಸ್ಥ ಜಾನೋ ಧ್ಯಾನ ವಹ, ಹೋ ಏಕಾಗ್ರ ಸ್ವರೂಪ ॥**

ವೀತರಾಗ ಶುಭ ರೂಪ, ಣಮೋಕಾರ ಮಂತ್ರ ಇತ್ಯಾದಿ ವಾಕ್ಯಗಳು ಅಥವಾ ಪದಗಳ ಧ್ಯಾನವನ್ನು 'ಪದಸ್ಥಧ್ಯಾನ' ಎಂದು ಹೇಳುತ್ತಾರೆ. ಈ ಧ್ಯಾನದಿಂದ ಏಕಾಗ್ರ ಸ್ವರೂಪದ ಪ್ರಾಪ್ತಿಯಾಗುತ್ತದೆ.

❖

**67. ಣಮೋಕಾರ ಶುಭ-ಮಂತ್ರ ಹೈ, ಸಬ್ ಮಂತ್ರೋಂ ಕಾ ರಾಜ ।**
**ಶೀಘ್ರ ಅಶುಭ-ವಿಧಿ-ನಾಶಕರ, ಸಿದ್ಧ ಬನಾವೇ ಕಾಜ ॥**

ಣಮೋಕಾರ ಮಂತ್ರವು ಮಂಗಳಕರವಾಗಿದೆ. ಎಲ್ಲ ಮಂತ್ರಗಳಲ್ಲಿ ಇದು ಪ್ರಧಾನವಾಗಿದೆ; ರಾಜಮಂತ್ರ ಎನಿಸಿದೆ. ಈ ಮಂತ್ರದಿಂದ ಎಲ್ಲ ಪಾಪಕರ್ಮಗಳು ಶೀಘ್ರವಾಗಿ ಕ್ಷಯವಾಗಿ ಪರಮೇಷ್ಠಿ ರೂಪದ ಸಿದ್ಧಪದವು ದೊರೆಯುತ್ತದೆ.

❖

**68. ಓಮ್ ಮಹಾ ಯಹ ಮಂತ್ರ ಹೈ, ಪರಮೇಷ್ಠಿ ಕಾ ಬೀಜ ।**
**ದ್ವಾದಶಾಂಗ-ಸಾಗರ ಕಹೇ, ಭವ-ಸುಖ, ಶಿವ ಕೀ ಬೀಜ ॥**

'ಓಂ' ಕೂಡ ಮಹಾಮಂತ್ರವಾಗಿದೆ. ಪಂಚಪರಮೇಷ್ಠಿಗಳ ಸಂಪೂರ್ಣ ಅರ್ಥವನ್ನು ಧಾರಣೆ ಮಾಡುವ ಬೀಜ ಮಂತ್ರವಾಗಿದೆ. ಇದು ದ್ವಾದಶಾಂಗ ರೂಪದ ಶಾಸ್ತ್ರ ಸಾಗರವನ್ನು ಧಾರಣೆ ಮಾಡುವಂತಹದ್ದಾಗಿದೆ. ಜಗತ್ತಿನಲ್ಲಿ ಜೀವಿಗಳು ಸುಖಿಗಳಾಗಿರುವಂತೆ ಮಾಡುತ್ತಾ; ಮೋಕ್ಷ ಸುಖದವರೆಗೆ ತಲುಪಿಸುವಂತಹುದಾಗಿದೆ.

❖

**69. ಹ್ರಂ ಅಕ್ಷರ ಜಿನ ಬುದ್ಧ ವಾ, ಹರಿ ಬ್ರಹ್ಮಾ ಶಿವ ರೂಪ ।**
**ಕೇವಲಜ್ಞಾನಿ, ಸಾರ್ವಮಯ, ಜಗತ್-ವಂಧ್ಯ ಸುಖ ರೂಪ ॥**

'ಹ್ರಂ' ಈ ಅಕ್ಷರವು ಜಿನೇಂದ್ರ ಸ್ವರೂಪ. ವೀತರಾಗ, ಬುದ್ಧ, ಹರಿ, ಬ್ರಹ್ಮಾ ಮತ್ತು ಶಿವ ಅರ್ಥಾತ್ ಮೋಕ್ಷಸ್ವರೂಪದ ಕೇವಲಜ್ಞಾನಿ ಸರ್ವಜ್ಞ; ಜಗತ್ತಿಗೆ ಪೂಜ್ಯ ಸುಖಶಾಂತಿಯನ್ನು ಕೊಡುವವನೆಂದು ಭಾವಿಸಲಾಗಿದೆ.

❖

**70. ಅರ್ಹಂ-ಅಕ್ಷರ ಶ್ರೇಷ್ಠ ಹೈ, ಅರ್ಹತ್-ಪದ ಕಾ ನಾಮ್ ।**
**ಪೂಜ್ಯ ರಹೇ ಜೋ ಲೋಕ ಮೇ, ಧ್ಯಾವೇ, ಬನತೇ ಕಾಮ ॥**

'ಅರ್ಹಂ' ಈ ಅಕ್ಷರವು ಸರ್ವಶ್ರೇಷ್ಠ ಅರ್ಹಂತ ಪದದ ವಾಚಕವಾಗಿದೆ. ಪೂರ್ಣ ಲೋಕದಲ್ಲಿ ಪೂಜ್ಯರೆಂದು ಗೌರವಿಸಲಾಗಿರುವ ಅರಿಹಂತರನ್ನು ಧ್ಯಾನ ಮಾಡುವುದರಿಂದ ಪಾಪಕರ್ಮಗಳ ಕ್ಷಯವಾಗುತ್ತದೆ ಹಾಗೂ ಪುಣ್ಯ ಹೆಚ್ಚಾಗುವುದರಿಂದ ಎಲ್ಲ ಶುಭಕಾರ್ಯಗಳ ಸಿದ್ಧಿಯಾಗುತ್ತದೆ.

❖

**71. ಹ್ರಾಂ ರಹಾ ಅರಿಹಂತ ಕಾ, ವಾಚಕ ಶ್ರೇಷ್ಠ ಮಹಾನ ।**
**ಘಾತಿಕರ್ಮ ಕಾ ನಾಶ ಕರ, ಜೀವನ-ಮುಕ್ತ ಸುಜಾನ ॥**

'ಹ್ರಾಂ' ಈ ಅಕ್ಷರವು ಸಹ ಅರಿಹಂತ ಪರಮೇಷ್ಠಿಗಳ ಶ್ರೇಷ್ಠ ಹಾಗೂ ಮಹಾನ್ ವಾಚಕ ಆಗಿದೆ. ಇದು ಘಾತಿಕರ್ಮಗಳ ನಾಶ ಮಾಡುವುದಾಗಿದೆ;

'ಪುನರ್ಜನ್ಮ' ಪಡೆಯದಂತೆ ಜೀವನ ಮುಕ್ತ ಮಾಡುವುದಾಗಿದೆ; ಅಂತಹ ಅರಿಹಂತರ ಜ್ಞಾನವುಂಟಾಗುವಂತೆ ಮಾಡುವುದಾಗಿದೆ. ಅಂತಹ ಧ್ಯಾನ ಮಾಡಿರಿ.

❖

**72. ಹ್ರೀಂ ರಹಾ ಶ್ರೀ ಸಿದ್ಧ ಕಾ, ವಾಚಕ ಶ್ರೇಷ್ಠ ಮಹಾನ ।**
**ಅಷ್ಟ-ಕರ್ಮ ಕಾ ನಾಶಕರ, ಗುಣ ಅನಂತ ಕೀ ಖಾನ ॥**

ಅಷ್ಟಕರ್ಮಗಳ ಕ್ಷಯ ಮಾಡಿ, ಅನಂತ ಗುಣಗಳ ಭಂಡಾರವಾಗುವಂತಹ ಸಿದ್ಧಭಗವಂತರ ವಾಚಕ 'ಹ್ರೀಂ' ಅಕ್ಷರ ಶ್ರೇಷ್ಠ ಹಾಗೂ ಮಹಾನ್ ಆಗಿದೆ.

❖

**73. ಹ್ರೂಂ ರಹಾ ಆಚಾರ್ಯ ಕಾ, ವಾಚಕ ಶ್ರೇಷ್ಠ ಮಹಾನ ।**
**ಪಂಚಾಚಾರ-ಪ್ರಧಾನ ಹೈ, ಕರೇ ಸರ್ವ-ಕಲ್ಯಾಣ ॥**

ಮುಖ್ಯವಾಗಿ ಪಂಚಾಚಾರಗಳನ್ನು ಪಾಲನೆ ಮಾಡುವವರೂ ಮತ್ತು ಎಲ್ಲ ಭವ್ಯರಿಗಾಗಿ ರತ್ನತ್ರಯವನ್ನು ನೀಡುತ್ತಾ ಕಲ್ಯಾಣವನ್ನುಂಟು ಮಾಡುವವರೂ ಆದ ಆಚಾರ್ಯ ಪರಮೇಷ್ಠಿಗಳ ವಾಚಕ 'ಹ್ರೂಂ' ಅಕ್ಷರ ಶ್ರೇಷ್ಠ ಹಾಗೂ ಮಹಾನ್ ಆಗಿದೆ.

❖

**74. ಹ್ರೌಂ ಶ್ರೇಷ್ಠ ವಾಚಕ ಸುಧೀ, ಉಪಾಧ್ಯಾಯ ಕಾ ನಾಮ ।**
**ದ್ವಾದಶಾಂಗ ಕೇ ಜ್ಞಾನ ಸೇ, ಮುನಿ ಪಾತೇ ಶಿವಧಾಮ ॥**

ಶಿವ ಪದವನ್ನು ಅಂದರೆ ಮೋಕ್ಷ ಪಡೆಯುವ ಮಾರ್ಗದಲ್ಲಿ ಸಾಗುವ ದ್ವಾದಶಾಂಗಗಳ ಜ್ಞಾನಿ, ಸುಬುದ್ಧಿ ಉಪಾಧ್ಯಾಯ ಪರಮೇಷ್ಠಿ ಮುನಿವರರ ವಾಚಕ 'ಹ್ರೌಂ' ಅಕ್ಷರ ಶ್ರೇಷ್ಠ ಹಾಗೂ ಮಹಾನ್ ಆಗಿದೆ.

❖

**75. ಹ್ರಃ ಅಕ್ಷರ ಯಹ ಸಾಧು ಕಾ, ವಾಚಕ ಶ್ರೇಷ್ಠ ಮಹಾನ ।**

**ರತ್ನತ್ರಯ ಸೇ ಆತ್ಮ ಮೇ, ಲೀನ ಕರೇ ನಿಜ ಧ್ಯಾನ ॥**

ರತ್ನತ್ರಯಗಳನ್ನು ಪಾಲಿಸುತ್ತಾ, ಆತ್ಮನಲ್ಲಿ ಲೀನನಾಗಿ ನಿಜದ ಧ್ಯಾನ ಮಾಡುವ ನಿರ್ಗ್ರಂಥ ಸಾಧು ಪರಮೇಷ್ಠಿಯ ವಾಚಕ 'ಹ್ರಃ' ಅಕ್ಷರ ಶ್ರೇಷ್ಠ ಹಾಗೂ ಮಹಾನ್ ಆಗಿದೆ.

❖

**76. ಅಗ್ರ ಓಮ್ ಪೀಛೇ ಜಹಾ, ನಮಃ ಲಗಾವೇ ಸಾಥ ।**

**ಉಪರಿಮ ಅಕ್ಷರ-ಜಾಪ ದೇ, ಬನೇ ಲೋಕ ಮೇ ನಾಥ ॥**

ಮೇಲಿನ ಅಕ್ಷರ 'ಹ್ರಂ' ಮುಂತಾದವುಗಳ ಮುಂದೆ ಓಂ ಅಕ್ಷರ ಹಾಕಿ ಹಾಗೂ ಆ 'ಹ್ರಂ' ಮುಂತಾದವುಗಳ ನಂತರ ನಮಃ ಸೇರಿಸಿ ಮಂತ್ರವನ್ನು ಜಪಿಸುವುದರಿಂದ ಕರ್ಮಗಳ ಕ್ಷಯ ಮಾಡಿ ಆತ್ಮ ಲೋಕದ ನಾಥ ಅರ್ಥಾತ್ ಸಿದ್ಧರ ಪದವನ್ನು ಪರಂಪರೆಯಿಂದ ಪಡೆಯುತ್ತಾರೆ.

## ಪಿಂಡಸ್ಥಧ್ಯಾನ

**77. ನಿಜಾತ್ಮ ಕೇ ಸಂಬಂಧ ಸೇ, ಸದ್ಗುಣ-ಗಣ ಕಾ ಧ್ಯಾನ ।**

**ಕಹಾ ಧ್ಯಾನ ಪಿಂಡಸ್ಥ ವಹ, ಜಿಸಮೇ ನಿಜ-ಕಲ್ಯಾಣ ॥**

ತನ್ನಾತ್ಮನಲ್ಲಿ ಲೀನನಾಗಿ ತನ್ನದೇ ಆದ ಗುಣಗಳನ್ನು ಧ್ಯಾನ ಮಾಡುವುದು 'ಪಿಂಡಸ್ಥಧ್ಯಾನ' ಆಗಿದೆ. ಈ ಧ್ಯಾನದಲ್ಲಿಯೇ ತನ್ನಾತ್ಮನ ಕಲ್ಯಾಣದ ರಹಸ್ಯ ಅಡಗಿರುತ್ತದೆ.

❖

**78. ದರ್ಶನ, ಸುಖ, ಚಾರಿತ್ರ-ಮಯ, ದಶ-ಧರ್ಮೊಂ ಸೇ ಪೂರ್ಣ ।**

**ಶಕ್ತಿ ಅನಂತ ಸುಕೋಷ್ ನಿಜ, ಗುಣ ಅನಂತ ಸಂಪೂರ್ಣ ॥**

ದರ್ಶನ, ಸುಖ, ಚಾರಿತ್ರಮಯ, ಉತ್ತಮ ಕ್ಷಮಾ ಮುಂತಾದ ದಶಧರ್ಮಗಳಿಂದ ತನ್ನಾತ್ಮ ಪರಿಪೂರ್ಣವಾಗಿದೆ; ಅನಂತ ಶಕ್ತಿಗಳ ಖಜಾನೆಯಾಗಿದೆ ಹಾಗೂ ಅನಂತ ಗುಣಗಳ ಧಾಮವಾಗಿದೆ– ಹೀಗೆ ಚಿಂತನೆ ಮಾಡುವುದು 'ಪಿಂಡಸ್ಥಧ್ಯಾನ' ಆಗಿದೆ.

## ಐದು–ಧಾರಣೆಗಳು

**79. ಪಂಚ ತರಹ ಕೀ ಧಾರಣಾ, ಕರತಾ ಧ್ಯಾನಿ ಹೋಯ ।**
**ಪೃಥ್ವೀ, ಅಗ್ನಿ, ವಾಯು, ಜಲ, ಔರ್ ತತ್ತ್ವ ಸಂಜೋಯ ॥**

ಪೃಥ್ವೀಧಾರಣೆ, ಅಗ್ನಿಧಾರಣೆ, ವಾಯುಧಾರಣೆ, ಜಲಧಾರಣೆ ಮತ್ತು ತತ್ತ್ವಧಾರಣೆ ಹೀಗೆ ಈ ಐದು ಧಾರಣೆಗಳು ಸಮ್ಯಕ್ ಧ್ಯಾನಕ್ಕಾಗಿ ಸುಯೋಗ್ಯವೆಂದು ಸ್ವೀಕರಿಸಲಾಗಿದೆ. ಇವುಗಳನ್ನು ವಿಧಿಪೂರ್ವಕ ಅಭ್ಯಾಸ ಮಾಡುವ ಯೋಗಿಯನ್ನು 'ಧ್ಯಾನಿ' ಎಂದು ಕರೆಯುತ್ತಾರೆ.

## ಪೃಥ್ವೀಧಾರಣೆ

**80. ಮಧ್ಯ–ಲೋಕ ಹೈ ಕ್ಷೀರ–ಸಮ, ಸಾಗರ ಶಾಂತ ಸ್ವರೂಪ ।**
**ಜಂಬೂದ್ವೀಪ ಸಹಸ್ರದಲ, ಇಕ–ಲಖ ಯೋಜನ ರೂಪ ॥**

ಅತ್ಯಂತ ಶಾಂತ ಸ್ವರೂಪ ಕ್ಷೀರಸಾಗರದಂತಿರುವ; ಮಧ್ಯಲೋಕದಲ್ಲಿ ಸಹಸ್ರದಳಗಳು ಇರುವಂತೆ ಒಂದು ಲಕ್ಷಯೋಜನವುಳ್ಳ ಜಂಬೂದ್ವೀಪವಿದೆ.

❖

**81. ವಹಾ ಕರ್ಣಿಕಾ–ಮಧ್ಯ ಮೇ, ಶ್ವೇತಾಸನ–ಶುಭ ರೂಪ ।**
**ಜಹಾ ವಿರಾಜಿತ ಆತಮಾ, ಬನ ನಿರ್ಗ್ರಂಥ ಸ್ವರೂಪ ॥**

ಜಂಬೂದ್ವೀಪದ ನಟ್ಟ ನಡುವೆ 99 ಸಾವಿರದಾ 40 ಯೋಜನ ಎತ್ತರವುಳ್ಳ ಕರ್ಣಿಕಾದ ಮಧ್ಯದಲ್ಲಿ; ಶುಭರೂಪದ ಧವಲ ಆಸನದ ಮೇಲೆ ತನ್ನಾತ್ಮನು ನಿರ್ಗ್ರಂಥ ರೂಪದಲ್ಲಿ ವಿರಾಜಮಾನನಾಗಿದ್ದಾನೆಂದು ಚಿಂತನೆ ಮಾಡುವುದನ್ನು 'ಪೃಥ್ವೀಧಾರಣೆ' ಎಂದು ಕರೆಯಲಾಗಿದೆ.

## ಅಗ್ನಿಧಾರಣೆ

**82. ನಿಜ-ನಾಭಿ ಮೇ ಊರ್ಧ್ವಮುಖ, ಸ್ವರ್ಣಮ-ದಲ ಶುಭ-ಮಾನ ।**
**ಸೋಲಹ-ಪಾಂಖುಡಿ ಸ್ವರ ಬಸೇ, ಮಧ್ಯ-ಬಸೇ ರ್ಹ್ರಂ ಜಾನ ॥**


ತಮ್ಮ ನಾಭಿಯಿಂದ ಊರ್ಧ್ವಮುಖಿ ಸ್ವರ್ಣಮಯಿ ಒಂದು ಕಮಲ ಉತ್ಪನ್ನವಾಗಿದೆ. ಆ ಕಮಲದ 16 ದಳಗಳ ಮೇಲೆ ಅ, ಆ, ಇ, ಈ, ಉ, ಊ, ಋ, ೠ, ಲ, ಲೂ, ಎ, ಏ, ಒ, ಔ, ಅಂ, ಅಃ- ಹೀಗೆ 16 ಸ್ವರಗಳು ಕ್ರಮವಾಗಿ ವಿರಾಜಮಾನವಾಗಿವೆ ಮತ್ತು ಕಾರ್ಣಿಕೆಯ ಮೇಲೆ ನಟ್ಟ ನಡುವೆ 'ರ್ಹ್ರಂ' ಅಕ್ಷರ ವಿರಾಜಮಾನವಾಗಿದೆ ಎಂದು ತಿಳಿಯಿರಿ.

❖


**83. ಅಧೋ-ಮುಖೀ ಹಿಯ-ಮಧ್ಯ ಮೇ, ಕಮಲ ವಿರಾಜಿತ ಸೋಹ ।**
**ಅಷ್ಟ-ಪಾಂಖುಡೀ ಕರ್ಮ ಕೀ, ದಹೇ ಧ್ಯಾನ ರ್ಹ್ರಂ ಹೋಹ ॥**

ತಮ್ಮ ಹೃದಯದ ಮಧ್ಯದಲ್ಲಿ ಅಧೋಮುಖಿಯಾಗಿರುವ ಒಂದು ಕಮಲ ಶೋಭಿತವಾಗಿದೆ. ಆ ಕಮಲದ ಎಂಟು ದಳಗಳ ಮೇಲೆ ಜ್ಞಾನಾವರಣೀಯ, ದರ್ಶನಾವರಣೀಯ, ವೇದನೀಯ, ಮೋಹನೀಯ, ಆಯು, ನಾಮ, ಗೋತ್ರ ಮತ್ತು ಅಂತರಾಯ ಹೆಸರಿನ ಎಂಟು ಕರ್ಮಗಳು ಕ್ರಮವಾಗಿ ಅಡಗಿ ಕುಳಿತಿವೆ ಹಾಗೂ ನಟ್ಟ ನಡುವೆ ಕಾರ್ಣಿಕೆಯ ಮೆಲೆ 'ರ್ಹ್ರಂ' ಅಕ್ಷರ ವಿರಾಜಮಾನವಾಗಿದ್ದು ತನ್ನೊಳಗೆ ಇರುವ 'ರ' ಅಕ್ಷರದಿಂದ ಮತ್ತು ನಾಭಿಯ ಕಮಲದ ಮಧ್ಯದಲ್ಲಿರುವ 'ರ್ಹ್ರಂ' ದೊಳಗೆ ಇರುವ 'ರ' ಅಕ್ಷರದ ಸಂಯೋಗಿ ಹಾಗೂ ಆ ಎರಡು 'ಕ'ಗಳ ಪಾರಸ್ಪರಿಕ ಘರ್ಷಣೆಯಿಂದ ಶುಕ್ಲಧ್ಯಾನಾಗ್ನಿಯನ್ನು ಪ್ರಕಟಪಡಿಸುತ್ತದೆ. ನಾವು ಒಂದು ಆತ್ಮತತ್ತ್ವದ ಸ್ವರೂಪದ ವಿಷಯದ ಆಳವಾದ ಚಿಂತನೆಯಲ್ಲಿ ಮುಳುಗುತ್ತಾ ಸಾಗುತ್ತೇವೆ. ಹಾಗೆಯೇ ನಮ್ಮ ಧ್ಯಾನವು ಉನ್ನತದಿಂದ ಉನ್ನತದ ಕಡೆಗೆ ಏರುತ್ತಾ ಹೋಗಿ ಬಿಡುತ್ತದೆ ಹಾಗೂ ಧ್ಯಾನರೂಪದ ಹೃದಯ ರೂಪದಲ್ಲಿರುವ ಕಮಲದ ದಳಗಳ ಮೇಲೆ ಅಡಗಿರುವ ಕರ್ಮಗಳನ್ನು ಬಹುಬೇಗನೇ ಕೇವಲ ಅಂತರ್ಮುಹೂರ್ತದಲ್ಲಿ ಸುಟ್ಟು ಹಾಕಿ ನಾಶ ಮಾಡಿಬಿಡುತ್ತದೆ. ಈ ಧ್ಯಾನವು 'ಅಗ್ನಿಧಾರಣೆ' ಎನಿಸುತ್ತದೆ


ಪೃಥ್ವಿಧಾರಣ


ಜ್ಞಾನಾವರಣ
ದರ್ಶನಾವರಣ
ಮೋಹನೀಯ
ಅಂತರಾಯ
ವೇದನೀಯ
ಆಯು
ನಾಮ
ಗೋತ್ರ
ರ್ಹ್ರಂ
ರ್ಹ್ರಂ
ಅ ಆ ಇ ಈ ಉ ಊ ಋ ೠ ಌ ೡ ಎ ಐ ಒ ಔ ಅಂ ಅಃ

ಅಗ್ನಿಧಾರಣ


ಸುಯ್ಯೋಂ ಸುಯ್ಯೋಂ
ಸುಯ್ಯೋಂ ಸುಯ್ಯೋಂ
ಸುಯ್ಯೋಂ ಸುಯ್ಯೋಂ
ಸುಯ್ಯೋಂ ಸುಯ್ಯೋಂ
ಸುಯ್ಯೋಂ ಸುಯ್ಯೋಂ
ಸುಯ್ಯೋಂ ಸುಯ್ಯೋಂ
ಸುಯ್ಯೋಂ ಸುಯ್ಯೋಂ
ವಾಯುಧಾರಣ


ಜಲಧಾರಣ

❖

**84. ಆತಮ ಮೇ ಪ್ರಕಟೇ ಜಹಾ, ಗುಣ-ಅನಂತ ಅಭಿರಾಮ ।**
**ಸಿದ್ಧ ಬನೇ ಪರಮಾತ್ಮಾ, ಸಿದ್ಧ ಹುಏ ಸಬ-ಕಾಮ ॥**

ಎಂಟು ಕರ್ಮಗಳ ನಾಶದಿಂದ ಆತ್ಮನು ಕೇವಲಜ್ಞಾನಿ, ಶುದ್ಧ, ಬುದ್ಧ, ಪರಮವೀತರಾಗಿ, ಸಿದ್ಧ ಪರಮಾತ್ಮನಾಗಿ ಜಗತ್ತಿನಲ್ಲಿ ಶೋಭೆಯನ್ನು ಹೊಂದುತ್ತಾನೆ. ಆ ಆತ್ಮನಲ್ಲಿ ಅನಂತಜ್ಞಾನ, ಅನಂತದರ್ಶನ, ಅನಂತಸುಖ ಮತ್ತು ಅನಂತಶಕ್ತಿ ಇತ್ಯಾದಿ ಅನಂತ ಶುಭಗುಣಗಳು ಪ್ರಕಟವಾಗುತ್ತವೆ. ಆ ಸಿದ್ಧಪರಮೇಷ್ಠಿಗಳು ಸದಾಕಾಲಕ್ಕೂ ಕೃತಕೃತ್ಯರಾಗುತ್ತಾರೆ.

❖

**85. ಘೃತ ಜೈಸೆ ಮಹಕೇ; ಪುನಃ, ನಹೀ ದುಗ್ಧ ಮೇ ಆಯ ।**
**ಭವ ಮೇ ನ ಅವತಾರ ಲೇ, ಶಿವ ಮೇ ಆತಮ ಭಾಯ ॥**

ಹಾಲಿನಲ್ಲಿ ಪ್ರಕಟವಾಗುವ ತುಪ್ಪ ಪುನಃ ಹಾಲಿನ ಅವಸ್ಥೆಗೆ ಹಿಂದಿರುಗಲು ಆಗದೇ ತನ್ನ ಸುಗಂಧವನ್ನು ನಾಲ್ಕೂ ಕಡೆ ಹರಡುವಂತೆ; ಸಂಸಾರ ಸಾಗರದಿಂದ ಪಾರಾದ ಸಿದ್ಧಪರಮಾತ್ಮರು ಅನಂತಕಾಲದಲ್ಲಿ ಎಂದಿಗೂ ಸಹ ಮೋಕ್ಷಪದದಿಂದ ಅಥವಾ ಸಿದ್ಧಲೋಕದಿಂದ ಹಿಂದಿರುಗಿ ಸಂಸಾರದಲ್ಲಿ ಪುನರ್ಜನ್ಮವನ್ನು ಹೊಂದುವುದಿಲ್ಲ. ಬದಲಾಗಿ ಸದಾಕಾಲ ಶಿವಾಲಯದಲ್ಲಿ ಸುಶೋಭಿಸುತ್ತಿರುತ್ತಾರೆ.

❖

**86. ಸಕಲ-ಜ್ಞೇಯ-ಜ್ಞಾಯಕ ಬನೇ, ಝುಲಕೇ ಸಭೀ ಪದಾರ್ಥ ।**
**ದರ್ಪಣ-ವತ್ ಆದರ್ಶ ಹೈ, ಗುಣ-ಅನಂತ ಪರಮಾರ್ಥ ॥**

ವ್ಯವಹಾರ ದೃಷ್ಟಿಯಿಂದ ವಿಶ್ವದ ಎಲ್ಲ ಪದಾರ್ಥಗಳನ್ನು ತಿಳಿಯುವ ಸರ್ವಜ್ಞರು ಹಾಗೂ ನಿಶ್ಚಯ ದೃಷ್ಟಿಯಿಂದ ಕನ್ನಡಿಯ ಹಾಗೇ ಇರುವ ಜಿನರ ಆತ್ಮರಲ್ಲಿ ವಿಶ್ವದ ಎಲ್ಲ ಪದಾರ್ಥಗಳು ಯಾವಾಗಲೂ ಹೊಳೆಯ ತೊಡಗುತ್ತವೆ. ಆ ಆತ್ಮಜ್ಞ ಸಿದ್ಧಪರಮಾತ್ಮರು ತಮ್ಮ ಅನಂತ ಗುಣಗಳ ಆನಂದದಲ್ಲಿ ಲೀನರಾಗಿರುತ್ತಾರೆ.

## ವಾಯು ಮತ್ತು ಜಲಧಾರಣೆ

**87. ಕರ್ಮ-ರಾಖ ಕೋ ತೀವ್ರ ವಹ, ಮಾರುತ ಕರತೀ ಸಾಫ ।**
**ಮೇಘೋಂ ಕೇ ಉಸ ನೀರ ಸೇ, ಥಲ ಭೀ ಧುಲತಾ ಆಪ ॥**

ಧ್ಯಾನಾಗ್ನಿಯಿಂದ ಭಸ್ಮನಾದ ಅಷ್ಟಕರ್ಮಗಳ ಬೂದಿಯನ್ನು, ತೀವ್ರ ಬಿರುಗಾಳಿಯಂತಿರುವ ವಾಯುವು ಹಾರಿಸಿಕೊಂಡು ದೂರ ಮಾಡಿ ಬಿಡುತ್ತದೆ. ಧಾರಾಕಾರ ಮಳೆಯಿಂದ ಮೇಘಗಳ ಜಲ, ಬೂದಿಯಿಂದ ಆದ ಕಲೆಗಳನ್ನು ತೊಳೆದು ಸ್ವಚ್ಛಮಾಡಿ ಬಿಡುತ್ತದೆ. ಹೀಗೆ ಶುಭ ಚಿಂತನೆ ಮಾಡುವುದು 'ವಾಯು ಮತ್ತು ಜಲಧಾರಣೆ' ಧ್ಯಾನವಾಗಿದೆ.

## ತತ್ತ್ವಧಾರಣೆ

**88. ಯಹ ಶುದ್ಧಾತ್ಮ ಅಜೀವ ಸೇ, ಭಿನ್ನ-ಸಿದ್ಧ ಹೈ ಜೀವ ।**
**ಪರಮ-ತತ್ತ್ವ ದರ್ಶನ ತಥಾ, ಜ್ಞಾನ ಸಹಿತ ಮಮ-ಜೀವ ॥**

ಈ ಶುದ್ಧಾತ್ಮವು ಶರೀರ, ವಸ್ತ್ರ, ಅಲಂಕಾರ ಮುಂತಾದವುಗಳಿಂದ ಭಿನ್ನವಾಗಿದೆ ಮತ್ತು ದರ್ಶನ ಜ್ಞಾನಸಹಿತ ಪರಮ ತತ್ತ್ವ ಸ್ವರೂಪವಾಗಿದೆ ಎಂದು ಚಿಂತನೆ ಮಾಡುವುದು 'ತತ್ತ್ವಧಾರಣೆ' ಧ್ಯಾನವಾಗಿದೆ.

## ರೂಪಸ್ಥಧ್ಯಾನ

**89. ಆತ್ಮ-ಸರ್ವ-ಚಿದ್ರೂಪ ಹೈ, ಜ್ಞಾನ-ಮಯೀ ಸು-ವಿಚಾರ ।**
**ಧ್ಯಾನ ರಹಾ ರೂಪಸ್ಥ ಯಹ, ಯತಿಓ ಕೋ ಸ್ವೀಕಾರ ॥**

ನಿಜಾತ್ಮನು ಸಂಪೂರ್ಣ ಚೈತನ್ಯ ಜ್ಞಾನಮಯನಾಗಿದ್ದಾನೆಂದು ವಿಚಾರ ಮಾಡುವುದು 'ರೂಪಸ್ಥಧ್ಯಾನ' ಎಂದು ಮುನಿಗಳು ಮಾನ್ಯ ಮಾಡಿದ್ದಾರೆ

❖

**90. ಅನಂತ-ಜ್ಞಾನ ಭಂಡಾರ-ಮಯ, ಆತಮ-ಗುಣ ಚಿದ್ರೂಪ ।**
**ಕರ್ಮ-ಮೇಘ ಹಟತೇ ಜಹಾ, ಬನೇ ಕೇವಲೀ ರೂಪ ॥**

ಅನಂತಜ್ಞಾನ ಮುಂತಾದವುಗಳ ಖಜಾನೆ ರೂಪದ ಆತ್ಮನು ಚೈತನ್ಯಗುಣಗಳ ಉದಯವಾದಾಗ; ಕರ್ಮರೂಪಿ ಮೇಘ ಪ್ರಬಲಗಳು ದೂರವಾದಾಗ; ಕೈವಲ್ಯ ಅವಸ್ಥೆಯ ಸ್ವಾಮಿಯಾಗಿ ಜಗತ್ತಿನಲ್ಲಿ ಹೊಳೆಯುವಂತೆ ಶೋಭಾಯಮಾನವಾಗುತ್ತಾನೆಂದು ವಿಚಾರ ಮಾಡುವುದು 'ರೂಪಸ್ಥಧ್ಯಾನ' ಆಗಿದೆ.

## ರೂಪಾತೀತಧ್ಯಾನ

**91. ನಿಷ್ಕಲಂಕ-ತ್ರಯಕಾಲ-ನಿಜ, ಶುದ್ಧ-ನಿರಂಜನ ಏಕ ।**
**ಚಿಂತನ ರೂಪಾತೀತ ಹೈ, ಧ್ಯಾನ ಕರೇ ಮುನಿ ನೇಕ ॥**

ಕರ್ಮಕಲಂಕಗಳಿಂದ ರಹಿತ ಮೂರು ಕಾಲಗಳಲ್ಲಿ ತನ್ನ ಆತ್ಮವು ಶುದ್ಧ, ನಿರಂಜನ, ಏಕವಾಗಿರುತ್ತದೆ ಎಂದು ಚಿಂತನೆ ಮಾಡುತ್ತಾ ಮುನಿರಾಜರು ಶ್ರೇಷ್ಠವಾದ 'ರೂಪಾತೀತಧ್ಯಾನ' ಮಾಡುತ್ತಾರೆ.

❖

**92. ಚಿದಾನಂದ-ಮಯ ಪೂರ್ಣ ಯಹ, ಶುದ್ಧಾತಮ ಗುಣ-ಖಾನ ।**
**ಅಮೂರ್ತ-ನಿತ್ಯ-ಪರಮಾತ್ಮಾ, ಧ್ಯಾವೇಂ ಸಿದ್ಧ-ಸಮಾನ ॥**

ತನ್ನಾತ್ಮನು ಚೈತನ್ಯದ ಆನಂದಮಯ ಗುಣಗಳ ಭಂಡಾರವಾಗಿದ್ದಾನೆ. ಅಮೂರ್ತ, ಶಾಶ್ವತ, ಪರಮಾತ್ಮನು ಸಿದ್ಧರ ಸಮಾನನಾಗಿದ್ದಾನೆಂದು ಮುನಿಜನರು ಧ್ಯಾನ ಮಾಡುತ್ತಾರೆ. ಈ ಧ್ಯಾನದ ಹೆಸರೇ ರೂಪಾತೀತ ಸಂಸ್ಥಾನವಿಚಯ ಧರ್ಮಧ್ಯಾನವಾಗಿದೆ.

## ಧರ್ಮಧ್ಯಾನದ ಒಡೆಯ

**93. ಚೌಥೇ ಉಸ ಗುಣಸ್ಥಾನ ಸೇ, ಸಪ್ತಮ ತಕ ಯೇ ಧ್ಯಾನ ।**
**ಧ್ಯಾನ; ವಿಚಯ ಸಂಸ್ಥಾನ ಯಹ, ಮುನಿವರ ಕೇ ಪಹಚಾನ ॥**

ಅಸಂಯತ ಸಮ್ಯಗ್ದೃಷ್ಟಿ ಹೆಸರಿನ 4ನೇ ಗುಣಸ್ಥಾನದಿಂದ ಅಪ್ರಮತ್ತ ಸಂಯತ ಹೆಸರಿನ 7ನೇ ಗುಣಸ್ಥಾನದವರೆಗೆ ಧರ್ಮಧ್ಯಾನ ಮಾಡುವ

ಯೋಗ್ಯತೆ ಇರುವುದೆಂದು ಒಪ್ಪಲಾಗಿದೆ. ಆದರೆ ಸಂಸ್ಥಾನವಿಚಯ ಧರ್ಮಧ್ಯಾನವು ಕೇವಲ ನಿರ್ಗ್ರಂಥ ದಿಗಂಬರ ಆತ್ಮಧ್ಯಾನಿ ಮುನಿಗಳಿಗೇನೇ ಆಗುವ ಸಂಭವವಿದೆ ಎಂದು ತಿಳಿದು ಅದನ್ನು ಪಡೆಯಲು ಪೂರ್ಣ ಪುರುಷಾರ್ಥ ಮಾಡಿರಿ.

## ಶುಕ್ಲಧ್ಯಾನ – ಪೃಥಕ್ತ್ವ ವಿತರ್ಕ ವೀಚಾರ

**94. ಅರ್ಥ, ವ್ಯಂಜನ, ಯೋಗ ಕಾ, ಪರಿವರ್ತನ ಜಬ ಹೋಯ ।**
**ಶ್ರುತ ಮೇ ಊಹಾಪೋಹ ಹೋ, ಶುಕ್ಲ–ಧ್ಯಾನ–ಅಥ ಹೋಯ ॥**

ಪೃಥಕ್ತ್ವ ಅರ್ಥಾತ್ ಅನೇಕ ಭೇದ ರೂಪ ದ್ರವ್ಯ; ವಿತರ್ಕ ಅರ್ಥಾತ್ ಶ್ರುತ(ಜ್ಞಾನ)ದೊಂದಿಗಿರುವುದು; ಮತ್ತು ವೀಚಾರ ಅರ್ಥಾತ್ ಅರ್ಥ (ಪದಾರ್ಥ), ವ್ಯಂಜನ (ಪರ್ಯಾಯ), ಯೋಗ (ಮನ,ವಚನ,ಕಾಯ) ಹೀಗೆ ಈ ಧ್ಯಾನದ ಶಾಬ್ಧಿಕ ಅರ್ಥವಿದೆ.

ಮುನಿಗಳು ಅನೇಕ ಭೇದಗಳ ಸಹಿತ ದ್ರವ್ಯಗಳನ್ನು ಮನ, ವಚನ ಮತ್ತು ಕಾಯ ಈ ಮೂರು ಯೋಗಗಳ ಮೂಲಕ ಧ್ಯಾನಿಸುವಾಗ 'ಪೃಥಕ್ತ್ವ'ವಾಗುತ್ತದೆ. ಮುನಿವರರ ಶ್ರುತಜ್ಞಾನದಲ್ಲಿ (ಅಂಗ ಸಹಿತ) ಪೂರ್ವ ಮುಂತಾದ ಜ್ಞಾನದಲ್ಲಿ ಚಿಂತನ ಮತ್ತು ಮಂಥನವಾಗುವಾಗ ಅದನ್ನು 'ವಿತರ್ಕ'ವೆನ್ನುತ್ತಾರೆ. ಹೀಗೆಯೇ ಒಂದು ಅರ್ಥ (ಪದಾರ್ಥ) ವನ್ನು ಬಿಟ್ಟು ಭಿನ್ನ ಅರ್ಥಗಳ ಧ್ಯಾನ ಮಾಡುವುದು ಮತ್ತು ಒಂದು ವ್ಯಂಜನ (ಪರ್ಯಾಯ) ಅಥವಾ ದ್ರವ್ಯದ ಅವಸ್ಥೆಯನ್ನು ಬಿಟ್ಟು ಇನ್ನೊಂದು ಅವಸ್ಥೆಯ ಧ್ಯಾನ ಮಾಡುವುದು ಹಾಗೆಯೇ ಮನಸ್ಸಿನಲ್ಲಿ ಚಿಂತನೆ ಮಾಡುತ್ತಾ ವಚನದಿಂದ ಚಿಂತನೆ ಮಾಡುವುದು ಪುನಃ ಕಾಯಯೋಗದಿಂದ ಚಿಂತನೆ ಮಾಡುವುದು ಹೀಗೆ ಈ ತರಹದ ಪರಿವರ್ತನೆ (ಸಂಕ್ರಮಣ)ಯು 'ವೀಚಾರ'ವೆಂದು ಕರೆಯಲ್ಪಡುತ್ತದೆ. ಈ ಅರ್ಥ, ವ್ಯಂಜನ ಮತ್ತು ಯೋಗಗಳ ಪರಿವರ್ತನೆಗಳಿಂದ ಈ ಧ್ಯಾನವು ಮೂರು ಪ್ರಕಾರದ ರೂಪವನ್ನು ತಾಳುತ್ತದೆ. ಇಂತಹ ಜ್ಞಾನ (ಶ್ರುತ)ದ ವಿಷಯದಲ್ಲಿ ಚಿಂತನ, ಮಂಥನ ಮಾಡುತ್ತಾ ಮಾಡುತ್ತಾ ಯೋಗಿಯು ಏಕಾಗ್ರತೆಯಿಂದ 'ಶುಕ್ಲಧ್ಯಾನ'ವನ್ನು ಧ್ಯಾನಿಸುತ್ತಾನೆ.

## ಏಕತ್ವವಿತರ್ಕ ಅವೀಚಾರ

**95. ಏಕ-ಯೋಗ ಮೇ ಥಿರ ರಹೇ, ಶ್ರುತ ಕಾ ಮಂಥನ ಹೋಯ ।**
**ಶುಕ್ಲ-ಧ್ಯಾನ ಫಿರ ದೂಸರಾ, ಕೇವಲಜ್ಞಾನೀ ಹೋಯ ॥**

ಮನ, ವಚನ ಮತ್ತು ಕಾಯಗಳಲ್ಲಿ ಯಾವುದೋ ಒಂದು ಯೋಗದಿಂದ ಮುನಿವರರು ಆರು ದ್ರವ್ಯಗಳಲ್ಲಿ ಯಾವುದಾದರೂ ಒಂದು ದ್ರವ್ಯದ, ನವಪದಾರ್ಥಗಳಲ್ಲಿ ಯಾವುದಾದರೊಂದು ಪದಾರ್ಥದ ಮತ್ತು ವ್ಯಂಜನ ಅಥವಾ ಅರ್ಥಪರ್ಯಾಯಗಳಲ್ಲಿ ಯಾವುದಾದರೂ ಒಂದು ಪರ್ಯಾಯದ ಶ್ರುತಜ್ಞಾನದ ಚಿಂತನ-ಮಂಥನದೊಂದಿಗೆ ಮಾಡುವ ಧ್ಯಾನವನ್ನು 'ಏಕತ್ವವಿತರ್ಕ ಅವೀಚಾರ' ಧ್ಯಾನವೆಂದು ಹೇಳಲಾಗುತ್ತದೆ. ಈ ಧ್ಯಾನದಲ್ಲಿ ಅರ್ಥ, ವ್ಯಂಜನ ಮತ್ತು ಯೋಗಗಳ ಪರಿವರ್ತನೆ ಆಗುವುದಿಲ್ಲ. ಅಂದರೆ ಹೆಚ್ಚಿನ ಸ್ಥಿರತೆ ಇರುತ್ತದೆ. ಈ ಧ್ಯಾನದ ಅಂತರ್ಮುಹೂರ್ತ ಕಾಲದಲ್ಲಿ ಮುನಿಗಳು ತಮ್ಮ ಆತ್ಮನಲ್ಲಿ ಅನಾದಿಕಾಲದಿಂದ ಬಂಧಿಸಲ್ಪಟ್ಟ ಜ್ಞಾನಾವರಣೀಯ, ದರ್ಶನಾವರಣೀಯ, ಮೋಹನೀಯ ಮತ್ತು ಅಂತರಾಯ ಈ ನಾಲ್ಕು ಘಾತೀಯ ಕರ್ಮಗಳ ಕ್ಷಯ (ನಾಶ) ಮಾಡಿ ಕೇವಲಜ್ಞಾನವನ್ನು ಪಡೆದು ಅರಿಹಂತ ಭಗವಂತರ ಪದವನ್ನು ಪಡೆದು ಕೊಳ್ಳುವುದು ವಿಶೇಷತೆಯಾಗಿದೆ.

## ಸೂಕ್ಷ್ಮಕ್ರಿಯಾಪ್ರತಿಪಾತಿ

**96. ಕಾಯಯೋಗ ಬಸ ಜಬ ರಹೇ, ನಾ ಪ್ರತಿಪಾತೀ ಹೋಯ ।**
**ಕೇವಲಜ್ಞಾನಿ ಆತ್ಮಾ, ಪರಮಾತಮ-ಸಮ ಜೋಯ ॥**

ಕೇವಲಿ ಭಗವಂತರ ಜೀವನದ ಕೊನೆಯಲ್ಲಿ ಆಗುವ ಪರಮಾತ್ಮನ ಉತ್ಕೃಷ್ಟ ಸಮತೆಯನ್ನು ನೀಡುವ ಧ್ಯಾನದಲ್ಲಿ ಕಾಯಯೋಗದ ಕ್ರಿಯೆಯು ಸಹ ಸೂಕ್ಷ್ಮವಾಗಿ ಬಿಡುತ್ತದೆ. ಆ ಸೂಕ್ಷ್ಮಕ್ರಿಯೆಯು ಅಪ್ರತಿಪಾತಿ (ಅರ್ಥಾತ್ ಕೆಳಗಿನ ಅವಸ್ಥೆಗೆ ಹಿಂತಿರುಗಲಾರದ) ಧ್ಯಾನವೆಂದು ಕರೆಯಲ್ಪಟ್ಟಿದೆ. ಇದು ಅವಿತರ್ಕ ಮತ್ತು ಅವೀಚಾರವಾಗಿದೆ. ಅಂದರೆ ಶ್ರುತದ ಅವಲಂಬನದಿಂದ ರಹಿತವಾಗಿದೆ. ಆದ್ದರಿಂದ ಅವಿತರ್ಕವಾಗಿದೆ

ಮತ್ತು ಇದರಲ್ಲಿ ಅರ್ಥ, ವ್ಯಂಜನ ಹಾಗೂ ಕಾರ್ಯಗಳ ಸಂಕ್ರಮಣವಿಲ್ಲ. ಆದ್ದರಿಂದ ಅವೀಚಾರವಾಗಿದೆ.

## ವ್ಯುಪರತಕ್ರಿಯಾನಿವೃತ್ತಿ

**97. ಬನೇ ಅಯೋಗೀ ಆತಮಾ, ಸರ್ವ-ನಿವೃತ್ತಿ ಹೋಯ್ ।**
**ಸರ್ವಕರ್ಮ ಬಿನಸೇ ತಭೀ, ಕ್ಷಣ ಮೇ ಮುಕ್ತಿ ಹೋಯ್ ॥**

ಸಂಪೂರ್ಣಯೋಗಗಳು ಅಥವಾ ಕಾಯಯೋಗವೂ ನಿರೋಧವಾಗುವುದರಿಂದ ಅಯೋಗಕೇವಲಿ ಪರಮಾತ್ಮರ ಧ್ಯಾನವು ವ್ಯುಪರತಕ್ರಿಯಾನಿವೃತ್ತಿ ಅಥವಾ ಅನಿವೃತ್ತಿ ನಿರುದ್ಧಯೋಗ ಅಥವಾ ಸಮುಚ್ಛಿನ್ನಕ್ರಿಯಾ ಶುಕ್ಲಧ್ಯಾನವೆಂದು ಕರೆಯಲ್ಪಡುತ್ತದೆ. ಈ ಧ್ಯಾನವು ಎಲ್ಲ ಧ್ಯಾನಗಳಲ್ಲಿ ಅಂತಿಮ ಮತ್ತು ಉತ್ಕೃಷ್ಟವಾಗಿರುವುದರಿಂದ ಅನುತ್ತರವಾಗಿದೆ. ಪರಿಪೂರ್ಣತೆಯಿಂದಾಗಿ ಸ್ವಚ್ಛ ಉಜ್ವಲವಾಗಿರುವುದರಿಂದ ಶುಕ್ಲವಾಗಿದೆ. ಇದು ಮಣಿಯ ದೀಪದ ಜ್ವಾಲೆಯಂತೆ ಇರುವುದರಿಂದ ಪೂರ್ಣರೂಪದಲ್ಲಿ ಅವಿಚಲವಾಗಿದೆ; ಹಾಗೆಯೇ ತೃತೀಯ ಶುಕ್ಲಧ್ಯಾನದಂತೆ ಅವಿತರ್ಕ ಅವೀಚಾರವೂ ಆಗಿದೆ. ಇಂತಹ ಉತ್ಕೃಷ್ಟ ಧ್ಯಾನದ ಮೂಲಕ ಸಂಪೂರ್ಣ ಕರ್ಮಗಳ ಕ್ಷಯ ಮಾಡಿ ಆತ್ಮನು ಕ್ಷಣಮಾತ್ರದಲ್ಲಿ ಮೋಕ್ಷವನ್ನು ಪಡೆದುಕೊಳ್ಳುತ್ತಾನೆ.

## ಹದಿನಾಲ್ಕನೆಯ ಗುಣಸ್ಥಾನದ ಕಾಲ

**98. ಗಣಧರ ಕೇ ಸ್ವರ-ಪಂಚ-ಲಘು, ಉಚ್ಚಾರಣ ಮೇ ಕಾಲ ।**
**ಜಿತನಾ, ಉತನಾ ಹೈ ಇಸೀ, ಗುಣಸ್ಥಾನ ಕಾ ಕಾಲ ॥**

ಗಣಧರ ಪರಮೇಷ್ಠಿಗಳಿಗೆ 'ಅ' 'ಇ' 'ಉ' 'ಋ' 'ಲು' ಈ ಐದು ಹ್ರಸ್ವ ಸ್ವರಗಳ ಉಚ್ಚಾರಣೆಯಲ್ಲಿ ತಗಲುವ ಅಲ್ಪಕಾಲ (ಜಘನ್ಯ ಅಂತರ್ಮುಹೂರ್ತ)ದಷ್ಟೇ ಈ ಹದಿನಾಲ್ಕನೇ ಗುಣಸ್ಥಾನದ ಕಾಲವಿರುತ್ತದೆ. ಅಷ್ಟರಲ್ಲಿ ಅಯೋಗ ಕೇವಲಿಗಳು ಮೋಕ್ಷವನ್ನು ಪಡೆದುಕೊಳ್ಳುತ್ತಾರೆ.

## ಶುಕ್ಲಧ್ಯಾನದ ಗುಣಸ್ಥಾನ

**99. ಅಷ್ಟಮ–ಗುಣಸ್ಥಾನ ಸೇ, ಪ್ರಥಮ–ಶುಕ್ಲ ಹೋ ಧ್ಯಾನ ।**
**ಬಾರಹವೇ–ಗುಣಸ್ಥಾನ ಮೇ, ಹೋಯ್ ದೂಸರಾ ಜಾನ ॥**

ಅಪೂರ್ವಕರಣ ಹೆಸರಿನ 8ನೇ ಗುಣಸ್ಥಾನದಿಂದ 'ಪೃಥಕ್ತ್ವವಿತರ್ಕ ವೀಚಾರ' ಹೆಸರಿನ ಪ್ರಥಮ ಶುಕ್ಲಧ್ಯಾನವು ಉಂಟಾಗುತ್ತದೆ. ಕ್ಷೀಣ ಕಷಾಯ ಹೆಸರಿನ 12ನೇ ಗುಣಸ್ಥಾನದಲ್ಲಿ 'ಏಕತ್ವವಿತರ್ಕ ಅವೀಚಾರ' ಹೆಸರಿನ 2ನೇ ಶುಕ್ಲಧ್ಯಾನ ಉಂಟಾಗುತ್ತದೆ.

❖

**100. ತೇರಹವೇ ಗುಣಸ್ಥಾನ ಮೇ, ತೀಜಾ–ಶುಕ್ಲ ಸು–ಧ್ಯಾನ ।**
**ಚೌದಹ ಮೇ ಚೌಥಾ–ಶುಕ್ಲ, ಫಿರ ಹೋ ಮೋಕ್ಷ–ಮಹಾನ್ ॥**

ಸಯೋಗ ಕೇವಲೀ ಹೆಸರಿನ 13ನೇ ಗುಣಸ್ಥಾನದಲ್ಲಿ 'ಸೂಕ್ಷ್ಮಕ್ರಿಯಾ ಪ್ರತಿಪಾತಿ' ಹೆಸರಿನ 3ನೇ ಶುಕ್ಲಧ್ಯಾನ ಉಂಟಾಗುತ್ತದೆ ಹಾಗೂ ಅಯೋಗ ಕೇವಲೀ ಹೆಸರಿನ 14ನೇ ಗುಣಸ್ಥಾನದಲ್ಲಿ 'ವ್ಯುಪರತಕ್ರಿಯಾನಿವೃತ್ತಿ' ಹೆಸರಿನ 4ನೇ ಶುಕ್ಲಧ್ಯಾನ ಉಂಟಾಗುತ್ತದೆ. ಈ ಅಂತಿಮ ಶುಕ್ಲಧ್ಯಾನದ ನಂತರ ಆತ್ಮನಿಗೆ ಮೋಕ್ಷ ಪ್ರಾಪ್ತವಾಗುತ್ತದೆ.

## ಅಂತಿಮ ಮಂಗಲ

**101. ಮುನಿವರ ಕಾ ಜೀವನ ಸದಾ, ಜ್ಞಾನ, ಧ್ಯಾನ ಮೇ ಲೀನ ।**
**ಆರ್ಜವ–ಮಯ ಉಪಯೋಗ ಸೇ, ಬನೇ ಸ್ವಯಂ–ಸ್ವಾಧೀನ ॥**

ಮುನಿಗಳ ಜೀವನ ಯಾವಾಗಲೂ ಜ್ಞಾನ–ಧ್ಯಾನ ಮುಂತಾದ ತಪಗಳಲ್ಲಿ ಲೀನವಾಗಿರುತ್ತದೆ. ಆರ್ಜವ ಅರ್ಥಾತ್ ಸರಳತಾಮಯ ಭಾವದಿಂದ ಅವರು ನಿಜ ಆತ್ಮನಲ್ಲಿ ಸ್ವಾಧೀನ ಸ್ವ ಆಶ್ರಿತ ಸುಖಿಗಳಾಗಿರುತ್ತಾರೆ.

❖

**102. ಸಾಗರ ವಹ ಅಧ್ಯಾತ್ಮ ಕಾ, ಜಿನಕೇ ಅಂದರ ಪೂರ ।**
**ರಚಿತ ಶುದ್ಧ–ನಿಜ–ಆತ್ಮ ಮೇ, ಭವ–ವಾಂಛ ಸೇ ದೂರ ॥**

ಹೃದಯದಲ್ಲಿ ಅಧ್ಯಾತ್ಮ ಸಾಗರ ಸಂಪೂರ್ಣವಾಗಿ ತುಂಬಿದ ಮುನಿಗಳು ಸಾಂಸಾರಿಕ ಇಚ್ಛೆಗಳಿಂದ ದೂರವಾಗಿದ್ದು ತಮ್ಮ ಶುದ್ಧಾತ್ಮನಲ್ಲಿ ಲೀನರಾಗಿರುತ್ತಾರೆ.

❖

**103. ಸಮ್ಯಕ್-ನಿಜ-ಉಪಯೋಗ ಹೋ, ಶುಭ ಅರು ಶುದ್ಧ ಮಹಾನ್ ।**
**ಧ್ಯಾನ ಜಗೇ ವಹ ಶುಕ್ಲ ಜಬ, ಮಿಲತಾ ಕೇವಲಜ್ಞಾನ ॥**

ಸಮೀಚೀನ ಸಮ್ಯಗ್ದೃಷ್ಟಿಯ ಆತ್ಮನ ಧಾರ್ಮಿಕ ಕ್ರಿಯಾರೂಪ ಶುಭೋಪಯೋಗದಿಂದ ಮುನಿಗಳಿಗೆ ಶುದ್ಧೋಪಯೋಗ ಪ್ರಾಪ್ತವಾದಾಗ ಹಾಗೂ ಶುಕ್ಲಧ್ಯಾನ ಉಂಟಾದಾಗ ಅದರ ಫಲ ಸ್ವರೂಪವಾಗಿ ಅವರಿಗೆ ಕೇವಲಜ್ಞಾನವೂ ಸಹ ಪ್ರಾಪ್ತವಾಗುತ್ತದೆ.

❖

**104. ಶತಕ-ವರ್ಷ ನಹಿ ಚಾಹಿಏ, ಅಂತಮುಹೂರ್ತ ಮಾತ್ರ ।**
**ಪೂರ್ಣ-ಲೀನ ನಿಶ್ಚಲ ಜಹಾ, ಮುನಿವರ ಮೋಕ್ಷ ಸು-ಪಾತ್ರ ॥**

ಸಂಸಾರ ಅಥವಾ ಕರ್ಮಗಳಿಂದ ಮುಕ್ತಿ ಹೊಂದಲು ನೂರಕ್ಕಿಂತಲೂ ಹೆಚ್ಚಿನ ವರ್ಷಗಳು ಇರಬೇಕಾದ ಅವಶ್ಯಕತೆ ಇಲ್ಲ. ಬದಲಾಗಿ ಕೇವಲ ಅಂತರ್ಮುಹೂರ್ತ ಕಾಲದಲ್ಲಿಯೇ ಮುನಿಗಳು ಒಂದು ವೇಳೆ ಪೂರ್ಣ ನಿಶ್ಚಲ ಏಕಾಗ್ರ ವೃತ್ತಿಯಿಂದ ತಮ್ಮ ಆತ್ಮನಲ್ಲಿ ಲೀನರಾಗಿ ಬಿಟ್ಟರೆ ಅವರಿಗೆ ಸಂಪೂರ್ಣ ಕರ್ಮಗಳಿಂದ ಬಿಡುಗಡೆ ಹೊಂದಲು ಬೇಕಾದ ಮುಕ್ತಿ ಅಥವಾ ಮೋಕ್ಷದ ಪ್ರಾಪ್ತಿಯಾಗುತ್ತದೆ.

❖

**105. ಅಷ್ಟಾಪದ ವ ಸಮ್ಮೇದಗಿರಿ, ಚಂಪಾಪುರ, ಗಿರನಾರ್ ।**
**ಪಾವಾಪುರ ಕೋ ಧ್ಯಾಯ ಜೋ, ಶೀಘ್ರ ಕರೇ ಭವ-ಪಾರ್ ॥**

ಭಗವಾನ್ ಆದಿನಾಥ ತೀರ್ಥಂಕರರ ಹಾಗೂ ಅನೇಕ ಮುನೀಶ್ವರರ ಮೋಕ್ಷಸ್ಥಾನ 'ಕೈಲಾಸಪರ್ವತ'; ಭಗವಾನ್ ಅಜಿತನಾಥ

ಮುಂತಾದ ವರ್ತಮಾನದ 24 ತೀರ್ಥಂಕರರಲ್ಲಿ 20 ತೀರ್ಥಂಕರರ ಹಾಗೂ ಅನಂತಾನಂತ ಮುನೀಶ್ವರರ ಮೋಕ್ಷಸ್ಥಾನ 'ಸಮ್ಮೇದಶಿಖರ'; ಭಗವಾನ್ ವಾಸುಪೂಜ್ಯ ತೀರ್ಥಂಕರರ ಮೋಕ್ಷಸ್ಥಾನ 'ಚಂಪಾಪುರ' (ಮಂದಾರಗಿರಿ); ಭಗವಾನ್ ನೇಮಿನಾಥ ತೀರ್ಥಂಕರ ಹಾಗೂ ಅನೇಕ ಮುನೀಶ್ವರರ ಮೋಕ್ಷಸ್ಥಾನ 'ಊರ್ಜಯಂತಗಿರಿ' (ಗಿರಿನಾರ್) ಮತ್ತು 24ನೇ ತೀರ್ಥಂಕರ ಮಹಾವೀರರ ಮೋಕ್ಷಸ್ಥಾನ 'ಪಾವಾಪುರಿ' ಈ ಕ್ಷೇತ್ರಗಳನ್ನು ಧ್ಯಾನ ಮಾಡುವ ಭವ್ಯಾತ್ಮರು ಅತಿ ಬೇಗನೆ ಸಂಸಾರ ಸಮುದ್ರದಿಂದ ಪಾರಾಗುತ್ತಾರೆ.

❖

**106. ತೀನ-ಗುಪ್ತಿ ಮೇ ಲೀನ ಹೋ, ಮನ-ವಚ-ತನ ಕೋ ರೋಕ ।**
**ಕರೇ ಧ್ಯಾನ ಶಿವ-ಮೋಕ್ಷ ಪಾ, ಜನ್ಮ, ಮೃತ್ಯು ನಾ ಶೋಕ ॥**

ಐದು ಮಿಥ್ಯಾತ್ವ, ಐದು ಪಾಪಗಳು ಹಾಗೂ ಐದು ಇಂದ್ರಿಯಗಳ ಕಡೆಗೆ ಮನ-ವಚನ-ಕಾಯಗಳ ಪ್ರವೃತ್ತಿಯನ್ನು ತಡೆದು ಮೂರು ಗುಪ್ತಿಗಳ ಮೂಲಕ ಆತ್ಮಲೀನತಾ ಪೂರ್ವಕ ಸಮ್ಯಕ್ ಧ್ಯಾನ ಮಾಡುವುದರಿಂದ ಜನನ-ಮರಣ-ಶೋಕಗಳು ಇಲ್ಲದಂತಹ ಮೋಕ್ಷವು ಪ್ರಾಪ್ತವಾಗುತ್ತದೆ.

## ಪ್ರಶಸ್ತಿ

**107. ಸುಪ್ರತಿಷ್ಠಿತ-ಕೇವಲೀ, ಮೋಕ್ಷ ಗಯೇ ವಹ ಥಾನ ।**
**ಗೋಪಗಿರಿ ಪಾವನಧರಾ, ಜಗ ಸೇ ಪೂಜ್ಯ ಮಹಾನ ॥**

ಗ್ವಾಲಿಯರ್ ನಗರದ ಸಮೀಪ 'ಸುಪ್ರತಿಷ್ಠಿತ' ಕೇವಲೀಗಳು ಮೋಕ್ಷ (ನಿರ್ವಾಣ)ವನ್ನು ಪಡೆದಿರುವ ಪರ್ವತ ಸ್ಥಾನ 'ಗೋಪಗಿರಿ' (ಗೋಪಾಚಲ) ಜಗತ್ತಿನಲ್ಲಿ ಮಹಾನ್ ಪೂಜ್ಯ ಮತ್ತು ಪವಿತ್ರವಾದ ಪಾವನವಾದ ಭೂಮಿ ಎಂದು ಭಾವಿಸಲಾಗಿದೆ.

❖

**108. ಗೋಪಾಚಲ ಯಹ ಗ್ವಾಲಿಯರ, ಸಿದ್ಧಾಂಚಲ ಜಹ ತೀರ್ಥ ।**
**ವೃಷಭಾಂಚಲ, ತ್ರಿಶಲಾಗಿರಿ, ನೇಮಿಗಿರಿ ಭೀ ತೀರ್ಥ ॥**

ಗ್ವಾಲಿಯರ್‌ನಗರದ ಪವಿತ್ರ ಪರ್ವತದ ಪೂರ್ವದಿಕ್ಕಿನ ಗುಹೆಗಳಲ್ಲಿ 42 ಅಡಿ ಎತ್ತರದ ಪಾರ್ಶ್ವನಾಥ ಭಗವಾನ್ ವಿರಾಜಮಾನರಾಗಿರುವ 'ಗೋಪಾಚಲತೀರ್ಥ'ವಿದೆ. ದಕ್ಷಿಣ ಮತ್ತು ಪಶ್ಚಿಮ ದಿಕ್ಕುಗಳ ಮಧ್ಯದಲ್ಲಿ ಭಗವಾನ್ ಮಹಾವೀರರ ಪಂಚಕಲ್ಯಾಣದ ದೃಶ್ಯ ಮತ್ತು ವೀತರಾಗಿ ಪ್ರತಿಮೆಗಳು ಹಾಗೂ ತ್ರಿಶಲಾಮಾತೆಯ ಸ್ವಪ್ನಾವಳಿ ಪ್ರತಿಮೆಗಳನ್ನು ಮಾಡಿದ್ದಾರೆ. ಆದ್ದರಿಂದ ಈ ಗಿರಿಯು 'ತ್ರಿಶಲಾಗಿರಿ' ಹೆಸರಿನಿಂದ ಪ್ರಸಿದ್ಧವಾಗಿದೆ. ಪಶ್ಚಿಮ ದಿಕ್ಕಿನಲ್ಲಿ 24 ಅಡಿ ಎತ್ತರದ ನಮಿನಾಥ ಮುಂತಾದ ಭಗವಂತರ ಜಿನಪ್ರತಿಮೆಗಳು ವಿರಾಜಮಾನವಾಗಿವೆ. ಹಾಗೆಯೇ ಇದೇ ರೀತಿಯಲ್ಲಿ ಈಶಾನ್ಯ ದಿಕ್ಕಿನಲ್ಲಿ ನೇಮಿನಾಥ ಮುಂತಾದ ಭಗವಂತರ ಪ್ರತಿಮೆಗಳನ್ನು ಮಾಡಿಸಲಾಗಿದ್ದಿತು. ಹೀಗೆ 'ನೇಮಗಿರಿತೀರ್ಥ'ವಿದೆ. ಹಾಗೆಯೇ ಉರವಾಹೀ ಬಾಗಿಲಿನಿಂದ ಪ್ರವೇಶ ಮಾಡಿ ಮೇಲೆ ಸಾಗುತ್ತಾ ಬೆಟ್ಟದ ಹೃದಯದಂತಿರುವ ನಟ್ಟ ನಡುವಿನ ಪ್ರದೇಶದಲ್ಲಿ 84 ಅಡಿ ಎತ್ತರದ ಆದಿನಾಥ (ವೃಷಭದೇವ)ರ ಮೂರ್ತಿ ಇದೆ.

❖

**109. ವರ್ಧಮಾನ-ಮಂದಿರ ಕಿಲಾ, ಸಹಿತ ಸು-ಪರ್ವತ ನಾಥ ।**
**ಗ್ವಾಲಿಯರ್ ಮೇ ಸಾಠ ಜಿನ, ಮಂದಿರ ನಮತೇ ಮಾಥ ॥**

ಸುಪ್ರತಿಷ್ಠ ಕೇವಲೀಗಳ ಸಿದ್ಧಕ್ಷೇತ್ರ ಗೋಪಗಿರಿಯ (ಗೋಪಾಚಲದ) ಮೇಲೆ ನಿರ್ಮಿಸಿರುವ ಪ್ರಾಚೀನ ವರ್ಧಮಾನ ಜಿನಾಲಯದ ನಾಲ್ಕೂ ಕಡೆಗೆ ನಿರ್ಮಿಸಿರುವ ಅರ್ವಾಚೀನ ಕೋಟೆಯ ಪರಿಸರದಲ್ಲಿ ಗುಹೆಗಳು ಹಾಗೂ ಮಂದಿರಗಳಲ್ಲಿ ವಿರಾಜಮಾನರಾಗಿರುವ ಜಿನ ಮಂದಿರಗಳನ್ನು ಮತ್ತು ಕೆಲವು ಪ್ರಾಕೃತಿಕ ವಿಕೋಪಗಳಿಂದ ಭಿನ್ನ-ಭಿನ್ನವಾಗಿರುವ ಶಿಲೆಗಳಿಂದ ಮಾಡಿದ 15 ಸಾವಿರ ದಿಗಂಬರ ಪ್ರತಿಮೆಗಳೊಂದಿಗೆ ಪವಿತ್ರ ಪರ್ವತ ಮತ್ತು ಗ್ವಾಲಿಯರ್ ಪಟ್ಟಣದಲ್ಲಿರುವ ಸ್ವರ್ಣಮಂದಿರ ಮುಂತಾದ 60 ದಿಗಂಬರ ಜೈನಮಂದಿರಗಳನ್ನು ನಾವು ವೀತರಾಗ ಭಾವದಿಂದ ತಲೆ ಬಾಗಿಸಿ ನಮಸ್ಕಾರ ಮಾಡುತ್ತೇವೆ.

❖

**110. ವರ್ಷ ವೀರ-ನಿರ್ವಾಣ ಕಾ, ಪಚ್ಚೀಸ್ ಸೌ ಚೌತೀಸ ।**
**'ಸಮ್ಯಕ್-ಧ್ಯಾನ ಶತಕ' ಲಿಖಾ, ಕಾವ್ಯ ಬನಾವೇ ಈಶ ॥**

ಮಹಾವೀರ ನಿರ್ವಾಣ ಸಂವತ್ಸರ 2534ರ ವರ್ಷಾಯೋಗದಲ್ಲಿ ಈ 'ಸಮ್ಯಕ್ ಧ್ಯಾನ ಶತಕ' ಹೆಸರಿನ ಕಾವ್ಯವು (ಸಮೀಚೀನ ಧ್ಯಾನ ಸಾಧನೆಗಾಗಿ) ಬರೆಯಲ್ಪಟ್ಟಿತು. ಈ ಕಾವ್ಯವು ಧ್ಯಾನ ಮಾಡುವವರಿಗೆ ಸಿದ್ಧಪದವಿಯನ್ನು ದೊರಕಿಸಿ ಕೊಡಲಿ.

❖

**111. ಮಂದಿರ ನಯಾ-ಬಜಾರ ಮೇ, ಪಾರ್ಶ್ವ-ಪ್ರಭೋ ಹೈ ನೇಕ ।**
**ವರ್ಷಾಯೋಗ ಮೇ ಕಾವ್ಯ ಯಹ, ರಚಾ ಸು-ಪೂರ್ಣ ವಿವೇಕ ॥**

ಗ್ವಾಲಿಯರ್ ನಗರದ ನಯಾ ಬಜಾರ್ ಜಿನಮಂದಿರದಲ್ಲಿ ವಿರಾಜಮಾನರಾಗಿರುವ ಪಾರ್ಶ್ವನಾಥ ಭಗವಂತರ ಭವ್ಯ ಪ್ರತಿಮೆಯ ಚರಣಗಳಲ್ಲಿ ಕುಳಿತು ಪಾವನ ವರ್ಷಾಯೋಗದಲ್ಲಿ ಆತ್ಮಧ್ಯಾನದ ಪ್ರಸಿದ್ಧಿಗಾಗಿ ಜ್ಞಾನ-ಧ್ಯಾನರೂಪ ವಿವೇಕವನ್ನು ಧಾರಣೆ ಮಾಡಿಕೊಂಡು ಈ ಕಾವ್ಯವನ್ನು ರಚಿಸಲಾಯಿತು.

❖

**112. ಪಾರ್ಶ್ವ-ಪ್ರಭೋ ಕೀ ಶರಣ ವಾ, ವಿದ್ಯಾ-ಗುರು ಆಶೀಷ ।**
**ಪೂರ್ಣ ಹುವಾ ಯಹ ಕಾವ್ಯ ಶುಭ, ಪಢೇ ಬನೇ ಶಿವ-ಈಶ ॥**


**ಭಗವಾನ್ ಪಾರ್ಶ್ವನಾಥರ** ಶರಣ ಹಾಗೂ **ಆಚಾರ್ಯ ಶ್ರೀ 108 ವಿದ್ಯಾಸಾಗರ ಮಹಾರಾಜರ** ಆಶೀರ್ವಾದದಿಂದ ಈ 'ಸಮ್ಯಕ್ ಧ್ಯಾನ ಶತಕ' ಶುಭ ಕಾವ್ಯವು ಸಂಪೂರ್ಣವಾಯಿತು. ಈ ಕಾವ್ಯವನ್ನು ಎಲ್ಲ ಜನರು ಪುನಃ ಪುನಃ ಓದಿ ಸಿದ್ಧ ಪದವಿಯನ್ನು ಪಡೆಯಲಿ.

❖

**113. ಇಕ ಸೌ ತೇರಾ ಪದ್ಯ ಹೈ 'ಧ್ಯಾನ ಶತಕ' ಮೇ ಪೂರ್ಣ ।**
**ಧ್ಯಾನ್ ಕರೇ ನಿಜ–ಏಕ ಸೌ, ತೇರಾ ಹೈ ಸಂಪೂರ್ಣ ॥**

ಈ **'ಸಮ್ಯಕ್ ಧ್ಯಾನ ಶತಕ'**ದಲ್ಲಿ 113 ಪದ್ಯಗಳನ್ನು ಬರೆಯಲಾಗಿದೆ. ಈ ಪದ್ಯಗಳ ಸಂಪೂರ್ಣ ಅರ್ಥ **'ಕೇವಲ ಓರ್ವ ಆತ್ಮನೇ ನಿನ್ನವನಾಗಿದ್ದಾನೆ; ಆ ಆತ್ಮನ ಧ್ಯಾನ ಮಾಡುವುದರಿಂದ ಸಂಪೂರ್ಣತೆಯ ಪ್ರಾಪ್ತಿ ಅಥವಾ ಸಂಪೂರ್ಣ ಸುಖರೂಪದ ಸಿದ್ಧಪದದ ಪ್ರಾಪ್ತಿಯಾಗುತ್ತದೆ'** ಎಂಬುದನ್ನು ನಿರೂಪಿಸುತ್ತದೆ.

ಈ 'ಸಮ್ಯಕ್ ಧ್ಯಾನ ಶತಕ'ದ ಹಿಂದಿ ಗದ್ಯಾನುವಾದವನ್ನು, ಪದ್ಯಗಳನ್ನು ರಚಿಸಿದವರಿಂದಲೇ ಮಹಾವೀರ ನಿರ್ವಾಣ ಸಂವತ್ಸರ 2543 (ಕ್ರಿ.ಶ.2017)ರ ಪುರವಾ ಜಬಲ್‌ಪುರ ವರ್ಷಾಯೋಗ ಸಂದರ್ಭದಲ್ಲಿ ಸಂಪನ್ನವಾಗಿದೆ.



# ಧ್ಯಾನದ ಭಾವನೆಗಳು

**ಸದ್ಭಾವನೆಗಳ ಪ್ರಕಾರಗಳು** – ಭಾವನೆಗಳು 25, 16, 12, 7, 4, 3, 2 ಮತ್ತು 1 ಈ ಪ್ರಕಾರ ಒಟ್ಟು 70 ಪ್ರಕಾರದ ಭಾವನೆಗಳಿವೆ.

## ಇಪ್ಪತ್ತೈದು ಭಾವನೆಗಳು

ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯ ಮತ್ತು ಪರಿಗ್ರಹತ್ಯಾಗ ಈ ಐದು ವ್ರತಗಳ 5x5 = 25 ಭಾವನೆಗಳು ಇವೆ.

### ಅಹಿಂಸಾವ್ರತದ ಐದು ಭಾವನೆಗಳು

**ವಾಙ್ಮನೋಗುಪ್ತೀರ್ಯಾದಾನನಿಕ್ಷೇಪಣಸಮಿತ್ಯಾಲೋಕಿತಪಾನಭೋಜನಾನಿ– –ಪಂಚ** । ತತ್ತ್ವಾರ್ಥಸೂತ್ರ 7/4

1. **ವಾಙ್ಮಗುಪ್ತಿ** – ವಚನದ ಪ್ರವೃತ್ತಿಯನ್ನು ತಡೆಯುವುದು.
2. **ಮನೋಗುಪ್ತಿ** – ಮನದ ಪ್ರವೃತಿಯನ್ನು ತಡೆಯುವುದು.
3. **ಈರ್ಯಾ ಸಮಿತಿ** – ನಡೆಯುವಾಗ ಮುಂದಿನ ನಾಲ್ಕು ಮೊಳ ನೆಲವನ್ನು ನೋಡುತ್ತಾ ಜೀವರಕ್ಷಣೆ ಮಾಡುತ್ತಾ ಸಾಗುವುದು.
4. **ಆದಾನ ನಿಕ್ಷೇಪಣಾ ಸಮಿತಿ** – ವಸ್ತುವನ್ನು ತೆಗೆದುಕೊಳ್ಳುವಾಗ ಮತ್ತು ಇಡುವಾಗ ನೋಡಿ ಶೋಧಿಸಿ ಜೀವರಕ್ಷಣೆಯನ್ನು ಗಮನಿಸುವುದು.
5. **ಆಲೋಕಿತಪಾನ ಭೋಜನ** – ಸೂರ್ಯ ಪ್ರಕಾಶದಲ್ಲಿ ಆಹಾರ ಇತ್ಯಾದಿ ಮಾಡುವಾಗ ನೋಡಿ ಶೋಧಿಸಿ ಆಹಾರ ಸ್ವೀಕರಿಸುವುದು.

### ಸತ್ಯವ್ರತದ ಐದು ಭಾವನೆಗಳು

**ಕ್ರೋಧಲೊಭಭೀರುತ್ವಹಾಸ್ಯಪ್ರತ್ಯಾಖ್ಯಾನಾನ್ಯನುವೀಚಿಭಾಷಣಂ ಚ ಪಂಚ** । ತತ್ತ್ವಾರ್ಥಸೂತ್ರ 7/5

1. **ಕ್ರೋಧ ಪ್ರತ್ಯಾಖ್ಯಾನ** – ಕೋಪವನ್ನು ತ್ಯಜಿಸುವುದು.
2. **ಲೋಭ ಪ್ರತ್ಯಾಖ್ಯಾನ** – ಲೋಭವನ್ನು ತ್ಯಜಿಸುವುದು.
3. **ಭೀರುತ್ವ ಪ್ರತ್ಯಾಖ್ಯಾನ** – ಭಯವನ್ನು ತ್ಯಜಿಸುವುದು.
4. **ಹಾಸ್ಯ ಪ್ರತ್ಯಾಖ್ಯಾನ** – ಹಾಸ್ಯ (ನಗುವುದು)ವನ್ನು ತ್ಯಜಿಸುವುದು.
5. **ಅನುವೀಚಿ ಭಾಷಣ** – ಶಾಸ್ತ್ರಕ್ಕನುಗುಣವಾಗಿ ನಿರ್ದೋಷ ವಚನವನ್ನು ಹೇಳುವುದು.

## ಅಚೌರ್ಯವ್ರತದ ಐದು ಭಾವನೆಗಳು

**ಶೂನ್ಯಾಗಾರ ವಿಮೋಚಿತಾವಾಸ ಪರೋಪರೋಧಾಕರಣ ಭೈಕ್ಷ್ಯಶುದ್ಧಿ –ಸಧರ್ಮಾಽವಿಸಂವಾದಾಃ ಪಂಚ** । ತತ್ತ್ವಾರ್ಥಸೂತ್ರ 7/6

1. **ಶೂನ್ಯಾಗಾರವಾಸ** – ಪರ್ವತಗಳ ಗುಹೆ, ಮರಗಳ ಪೊಟರು ಇತ್ಯಾದಿ ನಿರ್ಜನ ಸ್ಥಾನಗಳಲ್ಲಿರುವುದು.
2. **ವಿಮೋಚಿತಾವಾಸ** – ಬೇರೆಯವರು ಬಿಟ್ಟು ಹೋದ ಸ್ಥಳ, ನಿರ್ಜನ ಹಾಗೂ ಏಕಾಂತ ಸ್ಥಾನದಲ್ಲಿರುವುದು.
3. **ಪರೋಪರೋಧಾಕರಣ** – ನಾವು ತಂಗಿರುವ ಸ್ಥಳದಲ್ಲಿ ಇತರರು ತಂಗಲು ವಿರೋಧಿಸದಿರುವುದು.
4. **ಭೈಕ್ಷ್ಯಶುದ್ಧಿ** – ಚರಣಾನುಯೋಗದ ಶಾಸ್ತ್ರದ ಅನುಸಾರ ಆಹಾರ ಚರ್ಯೆಯ ಶುದ್ಧಿಯನ್ನು ಪಾಲಿಸುವುದು.
5. **ಸಧರ್ಮಾವಿಂಸವಾದ** – ಸಹಧರ್ಮಿಯರೊಂದಿಗೆ 'ಇದು ನನ್ನದು', 'ಇದು ನಿನ್ನದು' ಇತ್ಯಾದಿಯಾಗಿ ಹೇಳದೆ ಹೊಂದಿಕೊಳ್ಳುವುದು.

## ಬ್ರಹ್ಮಚರ್ಯವ್ರತದ ಐದು ಭಾವನೆಗಳು

**ಸ್ತ್ರೀರಾಗಕಥಾಶ್ರವಣತನ್ಮನೋಹರಾಂಗನಿರೀಕ್ಷಣಪೂರ್ವರತಾನುಸ್ಮರಣವೃಷ್ಯೇಷ್ಟರಸಸ್ವಶರೀರಸಂಸ್ಕಾರತ್ಯಾಗಾಃ ಪಂಚ** । ತತ್ತ್ವಾರ್ಥಸೂತ್ರ 7/7

1. **ಸ್ತ್ರೀರಾಗಕಥಾಶ್ರವಣ ತ್ಯಾಗ** – ಸ್ತ್ರೀಯರಲ್ಲಿ ರಾಗವನ್ನು ಹೆಚ್ಚಿಸುವ ಕಥೆ ಕೇಳುವುದನ್ನು ತ್ಯಾಗ ಮಾಡಬೇಕು.
2. **ತನ್ಮನೋಹರಾಗನಿರೀಕ್ಷಣ ತ್ಯಾಗ** – ಸ್ತ್ರೀಯರ ಅಂಗೋಪಾಂಗಗಳನ್ನು ನೋಡುವುದರ ತ್ಯಾಗ ಮಾಡಬೇಕು.
3. **ಪೂರ್ವರತಾನುಸ್ಮರಣ ತ್ಯಾಗ** – ಅವ್ರತ ಅವಸ್ಥೆಯಲ್ಲಿ ಭೋಗಿಸಿದ ವಿಷಯಗಳ ಸ್ಮರಣೆಯ ತ್ಯಾಗ ಮಾಡಬೇಕು.
4. **ವೃಷ್ಯೇಷ್ಟರಸ ತ್ಯಾಗ** – ಕಾಮವರ್ಧಕ, ಗರಿಷ್ಠ ರಸಗಳ ತ್ಯಾಗ.
5. **ಸ್ವಶರೀರ ಸಂಸ್ಕಾರ ತ್ಯಾಗ** – ತನ್ನ ಶರೀರದ ಮೇಲೆ ಕಾಮೋದ್ದೀಪಕ ಸಂಸ್ಕಾರ ರೂಪದ ಸೌಂದರ್ಯವನ್ನು ಹೆಚ್ಚಿಸುವ ವಸ್ತುಗಳ ತ್ಯಾಗ ಮಾಡಬೇಕು.

## ಪರಿಗ್ರಹತ್ಯಾಗವ್ರತದ ಐದು ಭಾವನೆಗಳು

**ಮನೋಜ್ಞಾಮನೋಜ್ಞೇಂದ್ರಿಯವಿಷಯರಾಗದ್ವೇಷ ವರ್ಜನಾನಿ ಪಂಚ ।** ತತ್ತ್ವಾರ್ಥಸೂತ್ರ 7/8

ಐದೂ (ಸ್ಪರ್ಶನ, ರಸನ, ಘ್ರಾಣ, ಚಕ್ಷು ಮತ್ತು ಶ್ರವಣ) ಇಂದ್ರಿಯಗಳ ಇಷ್ಟ ವಿಷಯಗಳಲ್ಲಿ ರಾಗ ಹೊಂದದಿರುವುದು ಹಾಗೂ ಅನಿಷ್ಟ ವಿಷಯಗಳಲ್ಲಿ ದ್ವೇಷ ಹೊಂದದಿರುವುದು.

# ಹದಿನಾರು ಭಾವನೆಗಳು

**ದರ್ಶನವಿಶುದ್ಧಿರ್ವಿನಯಸಂಪನ್ನತಾ ಶೀಲವ್ರತೇಷ್ವನತೀಚಾರೋऽಭೀಕ್ಷ್ಣ– ಜ್ಞಾನೋಪಯೋಗಸಂವೇಗೌ ಶಕ್ತಿತಸ್ತ್ಯಾಗತಪಸೀ ಸಾಧುಸಮಾಧಿರ್ವೈಯಾ– ವೃತ್ಯಕರಣಮರ್ಹದಾಚಾರ್ಯ ಬಹುಶ್ರುತ ಪ್ರವಚನಭಕ್ತಿರಾವಶ್ಯಕಾಪ ರಿಹಾಣಿಮಾರ್ಗಪ್ರಭಾವನಾ ಪ್ರವಚನ ವತ್ಸಲತ್ವಮಿತಿ ತೀರ್ಥಕರತ್ವಸ್ಯ ।** –ತತ್ತ್ವಾರ್ಥಸೂತ್ರ 6/24

1. **ದರ್ಶನವಿಶುದ್ಧಿ –** ಅರಹಂತ ಭಗವಂತರಿಂದ ಹೇಳಲ್ಪಟ್ಟ ವೀತರಾಗ ನಿರ್ಗ್ರಂಥರೂಪ ಮೋಕ್ಷಮಾರ್ಗದಲ್ಲಿ ಸಮ್ಯಗ್ದರ್ಶನದ ಎಂಟು ಅಂಗಗಳಿಂದ ಕೂಡಿದ ಹಾಗೂ 25 ಮಲದೋಷ ರಹಿತ ಆಸಕ್ತಿ ಹೊಂದುವುದು.
2. **ವಿನಯಸಂಪನ್ನತೆ –** ರತ್ನತ್ರಯ ಹಾಗೂ ರತ್ನತ್ರಯಗಳ ಧಾರಕರಾಗಿ ಆಗಮ ರೀತಿಯಲ್ಲಿ ನಡೆಯುವ ಸಾಧುಗಳನ್ನು ಅಂತರಂಗದಿಂದ ಆದರ, ಸತ್ಕಾರ ರೂಪ, ವಿನಯ ಮಾಡುವುದು ಅಥವಾ ನವದೇವತೆಗಳ ವಿನಯ ಮಾಡುವುದು.
3. **ಶೀಲ–ವ್ರತೇಷ್ವನತಿಚಾರ –** ಅಹಿಂಸೆ, ಸತ್ಯ ಮುಂತಾದ ವ್ರತಗಳ ಮತ್ತು ವ್ರತಗಳ ರಕ್ಷಣೆ ಮಾಡುವ ಶೀಲಗಳ ಅತಿಚಾರ ರಹಿತ (ನಿರ್ದೋಷ) ಪಾಲನೆ ಮಾಡುವುದು.
4. **ಅಭೀಕ್ಷ್ಣ ಜ್ಞಾನೋಪಯೋಗ –** ನಿರಂತರವಾಗಿ ಸಮ್ಯಕ್‌ಜ್ಞಾನದಲ್ಲಿ ತಮ್ಮ ಉಪಯೋಗವನ್ನು ತೊಡಗಿಸುವುದು ಅರ್ಥಾತ್ ಸದಾಕಾಲ ಸಮ್ಯಕ್‌ಜ್ಞಾನದ ಪಠನ–ಪಾಠನ, ಲೇಖನ ಇತ್ಯಾದಿಗಳಲ್ಲಿ ತೊಡಗಿಸಿಕೊಂಡಿರುವುದು.

5. **ಸಂವೇಗ** – ಪಂಚ ಪರಿವರ್ತನ ರೂಪದ ಸಂಸಾರದ ದುಃಖ–ಗಳಿಂದ ಮತ್ತು ದುಃಖಕ್ಕೆ ಕಾರಣವಾದ ಸಂಗತಿಗಳ ಬಗ್ಗೆ ಭಯಭೀತನಾಗಿರುವುದು ಅಥವಾ ರತ್ನತ್ರಯ ಜನಿತ ಹರ್ಷವನ್ನು ಹೊಂದುವುದು.
6. **ಶಕ್ತಿತಃ ತ್ಯಾಗ** – ತಮ್ಮ ಶಕ್ತಿಗನುಗುಣವಾಗಿ ರಸ ಮುಂತಾದವುಗಳನ್ನು ತ್ಯಾಗ ಮಾಡುವುದು ಅಥವಾ ವಿಧಿಪೂರ್ವಕ ದಾನ ನೀಡುವುದು.
7. **ಶಕ್ತಿತಃ ತಪ** – ತಮ್ಮ ಶಕ್ತಿಗನುಸಾರ ಜೈನ ಮಾರ್ಗಾನುಕೂಲ ತಪಸ್ಸನ್ನು (ಉಪವಾಸಾದಿ) ಮಾಡುವುದು.
8. **ಸಾಧು ಸಮಾಧಿ** – ಸಾಧು ಮುನಿಗಳ ತಪದಲ್ಲಿ ಬರುವ ವಿಘ್ನಬಾಧೆಗಳನ್ನು ದೂರ ಮಾಡಿ ಅವರ ಸಂಯಮದ ರಕ್ಷಣೆ ಮಾಡುವುದು.
9. **ವೈಯಾವೃತ್ತಿಕರಣ** – ಗುಣವಂತರಾದ(ನಿಜವಾದ) ಸಾಧುಜನರ ಕೈ, ಕಾಲು ಮುಂತಾದವುಗಳನ್ನು ಒತ್ತಿ ಜೊತೆಗೆ ವಿಹಾರ ಮಾಡಿ ಅಥವಾ ಆಹಾರದಾನ ಮತ್ತು ಉಪಕರಣ ಇತ್ಯಾದಿಗಳನ್ನು ದಾನ ಮಾಡಿ ಅವರ ಸೇವೆ ಮಾಡುವುದು.
10. **ಅರಹಂತ ಭಕ್ತಿ** – ವಿಶುದ್ಧ ಭಾವಗಳಿಂದ, ಗುಣಾನುರಾಗದಿಂದ ಅರಿಹಂತ ಭಗವಂತರ ಗುಣಗಾನ ಮಾಡುವುದು.
11. **ಆಚಾರ್ಯ ಭಕ್ತಿ** – ವಿಶುದ್ಧಭಾವಗಳಿಂದ, ಗುಣಾನುರಾಗದಿಂದ ಆಚಾರ್ಯ ಪರಮೇಷ್ಠಿಗಳ ಗುಣಗಾನ ಮಾಡುವುದು.
12. **ಬಹುಶ್ರುತ ಭಕ್ತಿ** – ವಿಶುದ್ಧಭಾವಗಳಿಂದ, ಗುಣಾನುರಾಗದಿಂದ 25 ಗುಣ (11 ಅಂಗ, 14 ಪೂರ್ವ)ಗಳ ಧಾರಿಗಳಾದ ಉಪಾಧ್ಯಾಯ ಪರಮೇಷ್ಠಿಗಳ ಗುಣಗಾನ ಮಾಡುವುದು.
13. **ಪ್ರವಚನ ಭಕ್ತಿ** – ವಿಶುದ್ಧಭಾವಗಳಿಂದ, ಗುಣಾನುರಾಗದಿಂದ ಶಾಸ್ತ್ರದ ಗುಣಗಾನ ಮಾಡುವುದು.
14. **ಆವಶ್ಯಕ ಪರಿಹಾಣಿ** – ಸಾಮಾಯಿಕ, ಸ್ತವನ, ವಂದನೆ, ಪ್ರತಿಕ್ರಮಣ, ಪ್ರತ್ಯಾಖ್ಯಾನ ಮತ್ತು ಕಾಯೋತ್ಸರ್ಗ ಈ ಆರು ಆವಶ್ಯಕ ಕಾರ್ಯಗಳಲ್ಲಿ ಎಂದಿಗೂ ಹಾನಿಯಾಗದಂತೆ ನೋಡುವುದು

ಮತ್ತು ಪ್ರತಿದಿನ ನಿರ್ದಿಷ್ಟ ಸಮಯದಲ್ಲಿ ಅವುಗಳನ್ನು ಚೆನ್ನಾಗಿ ಪಾಲನೆ ಮಾಡುವುದು.

15. **ಮಾರ್ಗ ಪ್ರಭಾವನೆ** – ಸಮ್ಯಕ್‌ಜ್ಞಾನದಿಂದ, ತಪದಿಂದ ಅಥವಾ ಜಿನೇಂದ್ರ ಭಗವಂತರ ಪೂಜೆ ಇತ್ಯಾದಿಗಳಿಂದ ಜಗತ್ತಿನಲ್ಲಿ ಜೈನಧರ್ಮದ ಪ್ರಭಾವನೆಯನ್ನು ಮಾಡುವುದು.

16. **ಪ್ರವಚನ ವತ್ಸಲತ್ವ** – ಹಸುವಿಗೆ ತನ್ನ ಕರುವಿನ ಬಗ್ಗೆ ಸಹಜವಾದ ಸ್ನೇಹ, ಪ್ರೇಮ ಇರುವಂತೆ ಸಹಧರ್ಮಿ ಜನಗಳನ್ನು ನೋಡಿ ಮನಸ್ಸನ್ನು ಪ್ರಮುಲ್ಲಿತಗೊಳಿಸುವುದು ಹಾಗೂ ಯಥಾಯೋಗ್ಯ ಆದರ ಸತ್ಕಾರ ಮಾಡುವುದು.

## ಹನ್ನೆರಡು ಭಾವನೆಗಳು

1. **ಅನಿತ್ಯ ಭಾವನೆ** – ಯೌವ್ವನ, ಧನ, ಮನೆ ಮತ್ತು ಪರಿಜನರು ಮುಂತಾದವು ಮೋಡ ಮತ್ತು ಕಾಮನಬಿಲ್ಲಿನಂತೆ ಪರಿವರ್ತನಶೀಲ/ ಅಶಾಶ್ವತವಾಗಿವೆ ಎಂದು ಚಿಂತನೆ ಮಾಡುವುದು 'ಅನಿತ್ಯ ಭಾವನೆ'.

2. **ಅಶರಣ ಭಾವನೆ** – ಈ ಜಗತ್ತಿನಲ್ಲಿ ದೊರೆತಿರುವ ಯಾವುದೇ ಸಮಾಗಮ ಜೀವನಿಗೆ ಶರಣಾಗತರಾಗಬೇಕಾಗಿಲ್ಲ. ಉದಾ:– ಸಿಂಹದ ಬಾಯಲ್ಲಿ ಸಿಲುಕಿರುವ ಜಿಂಕೆಯನ್ನು ರಕ್ಷಿಸಲು ಯಾರೂ ಸಮರ್ಥರಲ್ಲ. ಹಾಗೆಯೇ ಮರಣ ಬಂದಾಗ ಸುರ, ಅಸುರ, ವಿದ್ಯಾಧರ, ಚಕ್ರವರ್ತಿ ಮುಂತಾದವರನ್ನೂ ಸಹ ಮಣಿ, ಮಂತ್ರ, ತಂತ್ರ ಮುಂತಾದ ವಿವಿಧ ಉಪಾಯಗಳು ರಕ್ಷಿಸುವಲ್ಲಿ ಸಮರ್ಥವಲ್ಲವೆಂದು ಚಿಂತನೆ ಮಾಡುವುದು 'ಅಶರಣ ಭಾವನೆ' ಆಗಿದೆ.

3. **ಸಂಸಾರ ಭಾವನೆ** – ಈ ಪಂಚ ಪರಿವರ್ತನ ರೂಪದ ಸಂಸಾರದಲ್ಲಿ ಶುಭಾಶುಭ ಕರ್ಮಗಳ ಫಲಗಳನ್ನು ಭೋಗಿಸುತ್ತಾ ಸಂಸಾರೀ ಜೀವಗಳು ಚತುರ್ಗತಿಯಲ್ಲಿ ಭ್ರಮಣೆ ಮಾಡುತ್ತವೆ. ದುಃಖಗಳಿಂದ ತುಂಬಿರುವ ಈ ಸಂಸಾರದಲ್ಲಿ ವಾಸ್ತವಿಕ ಸುಖ ಸ್ವಲ್ಪವೂ ಇಲ್ಲ. ಇದರಲ್ಲಿ ಕಂಡುಬರುವ ಕ್ಷಣಿಕ ಸುಖವು ಖಡ್ಗದ ಅಲುಗಿನಲ್ಲಿ ಹಚ್ಚಿರುವ ಸಿಹಿಯನ್ನು ನಾಲಿಗೆಯಿಂದ ಚಪ್ಪರಿಸುವುದು

ದುಃಖದಾಯಕವಾಗಿದೆ ಎಂದು ಚಿಂತನೆ ಮಾಡುವುದು 'ಸಂಸಾರ ಭಾವನೆ' ಆಗಿದೆ.

4. **ಏಕತ್ವ ಭಾವನೆ** – ಜನ್ಮ–ಮರಣ, ಸುಖ–ದುಃಖ ಇತ್ಯಾದಿ ಅವಸ್ಥೆಗಳನ್ನು ಜೀವ ಏಕಾಂಗಿಯಾಗಿಯೇ ಭೋಗಿಸುತ್ತಾನೆ. ತಾಯಿ, ತಂದೆ, ಸಹೋದರ, ಸಹೋದರಿ, ಬಂಧು–ಬಾಂಧವರು ಇತ್ಯಾದಿ ಯಾರೂ ಸಹ ಈ ಜೀವದ ವಾಸ್ತವಿಕ ಜೊತೆಗಾರರಲ್ಲ. ಎಲ್ಲರೂ ತಮ್ಮ ಸ್ವಾರ್ಥ ಸಾಧನೆಯನ್ನು ಸಾಧಿಸುವವರಾಗಿದ್ದಾರೆ. ಹೀಗೆ ಮನಸ್ಸಿನಲ್ಲಿ ಮೇಲಿಂದ ಮೇಲೆ ವಿಚಾರ ಮಾಡುವುದು 'ಏಕತ್ವ ಭಾವನೆ' ಆಗಿದೆ.

5. **ಅನ್ಯತ್ವ ಭಾವನೆ** – ನೀರು ಮತ್ತು ಹಾಲು ಸೇರಿರುವಂತೆ ಆತ್ಮನು ಶರೀರದೊಂದಿಗೆ ಸೇರಿಕೊಂಡಿರುವಾಗ ಸಂಪತ್ತು, ಮನೆ, ವೈಭವ ಮತ್ತು ಪರಿಜನ ಮುಂತಾದವರು ನನ್ನ ಆತ್ಮನಿಗಿಂತ ಅತ್ಯಂತ ಭಿನ್ನರಾಗಿದ್ದಾರೆ. ಅವರು ಹೇಗೆ ತಾನೇ ನನ್ನವರಾಗುತ್ತಾರೆಂದು ಮೇಲಿಂದ ಮೇಲೆ ಚಿಂತನೆ ಮಾಡುವುದು 'ಅನ್ಯತ್ವ ಭಾವನೆ' ಆಗಿದೆ.

6. **ಅಶುಚಿ ಭಾವನೆ** – ಈ ಶರೀರವು ರಕ್ತ–ಮಾಂಸ ಇತ್ಯಾದಿ ಅಪವಿತ್ರ ಧಾತುಗಳಿಂದ ರಚನೆಯಾಗಿದೆ ಇದರಿಂದ ಸದಾಕಾಲ ನವ ಮಲದ್ವಾರಗಳಿಂದ ಮಲವು ಹರಿಯುತ್ತಿರುತ್ತದೆ ಮತ್ತು ಈ ಶರೀರಕ್ಕೆ ಎಷ್ಟೇ ಆಹಾರವನ್ನು ತಿನ್ನಿಸಿದರೂ, ಕುಡಿಸಿದರೂ ಹಾಗೂ ಅಲಂಕರಿಸಿದರೂ ಇದು ತನ್ನ ಸ್ವಭಾವವನ್ನು ಬಿಡುವುದಿಲ್ಲ. ಹೀಗೆ ಅಪವಿತ್ರ ಅಶುಚಿಮಯ ಶರೀರದಲ್ಲಿ ಪ್ರೀತಿ ಇಡದಿರುವ ಚಿಂತನೆಯು 'ಅಶುಚಿ ಭಾವನೆ' ಆಗಿದೆ.

7. **ಆಸ್ರವ ಭಾವನೆ** – ಮಿಥ್ಯಾತ್ವ, ಅವ್ರತ, ಪ್ರಮಾದ, ಕಷಾಯ ಮತ್ತು ಯೋಗಗಳಿಂದ ನವೀನ ಕರ್ಮಗಳ ಆಸ್ರವವಾಗುತ್ತದೆ ಮತ್ತು ಆಸ್ರವವೇ ದುಃಖದ ಮೂಲವಾಗಿದೆ. ಹೀಗೆ ಆಸ್ರವದಿಂದ ದೂರವಾಗುವ ಸಂಬಂಧದಲ್ಲಿ ಚಿಂತನೆ ಮಾಡುವುದು 'ಆಸ್ರವ ಭಾವನೆ' ಆಗಿದೆ.

8. **ಸಂವರ ಭಾವನೆ** – ಸಮ್ಯಕ್ತ್ವ ಪೂರ್ವಕ ಧಾರ್ಮಿಕ ಅನುಷ್ಠಾನಗಳಲ್ಲಿ ಮಿಥ್ಯಾತ್ವ, ಅವಿರತಿ, ಪ್ರಮಾದ, ಕಷಾಯ ಮತ್ತು ಯೋಗದ ಅಭಾವ

ಕ್ರಮವಾಗಿ ಅಥವಾ ದೂರವಾಗುವುದರಿಂದ ಎಲ್ಲ ಕರ್ಮಗಳು ಆತ್ಮನಲ್ಲಿ ಬರುವುದನ್ನು ತಡೆಯುವುದು ಸಂವರವೆಂದು ಪುನಃ ಪುನಃ ಭಾವಿಸುವುದು 'ಸಂವರ ಭಾವನೆ' ಆಗಿದೆ.

9. **ನಿರ್ಜರ ಭಾವನೆ –** ತನ್ನ ಸ್ಥಿತಿ ಉದಯಕ್ಕೆ ಬಂದಾಗ ಫಲ ನೀಡಿ ನಿರ್ಜರೆಯಾಗುವ ಕರ್ಮವು ನಿರ್ಜರೆ ಆಗಿದ್ದು, ಆ ನಿರ್ಜರೆಯಿಂದ ಮೋಕ್ಷ ದೊರೆಯುವುದಿಲ್ಲ ಮತ್ತು ಪುರುಷಾರ್ಥದಿಂದ ಹನ್ನೆರಡು ತಪಗಳಿಂದ ಕರ್ಮ ನಿರ್ಜರೆ ಮಾಡುವುದು. ಇದರಿಂದ ಶಿವ (ಮೋಕ್ಷ) ಸುಖದ ಲಾಭವಾಗುತ್ತದೆ ಎಂದು ಭಾವಿಸುವುದು 'ನಿರ್ಜರ ಭಾವನೆ' ಆಗಿದೆ.

10. **ಲೋಕ ಭಾವನೆ –** ಈ ಆರು ದ್ರವ್ಯಮಯ 343 ಘನರಜ್ಜು ಪ್ರಮಾಣ ಲೋಕವನ್ನು ಯಾರೂ ನಿರ್ಮಾಣ ಮಾಡಿಲ್ಲ, ಇದನ್ನು ಯಾರೂ ಧಾರಣೆ ಮಾಡಿಲ್ಲ ಹಾಗೂ ಯಾರೂ ನಾಶ ಮಾಡಲಾರರು. ಹೀಗೆ ಅನಾದಿ ಅನಿಧನ ಈ ಲೋಕದಲ್ಲಿ ಸಂಸಾರೀ ಜೀವಾತ್ಮರುಗಳು ಅನಂತ ಸಾರಿ ಜನ್ಮ–ಮರಣ ಮಾಡುತ್ತಿರುತ್ತವೆ ಎಂದು ಚಿಂತನೆ ಮಾಡುವುದು 'ಲೋಕ ಭಾವನೆ' ಆಗಿದೆ.

11. **ಬೋಧಿ ದುರ್ಲಭ ಭಾವನೆ –** ಈ ಜೀವಕ್ಕೆ ಅನೇಕ ಸಾರಿ ರಾಜ, ಅಹಮೀಂದ್ರರಂತಹ ಪದವಿಗಳು ಪ್ರಾಪ್ತವಾಗಿವೆ. ಆದರೆ ಸಮ್ಯಗ್ದರ್ಶನ, ಸಮ್ಯಕ್‌ಜ್ಞಾನ ಮತ್ತು ಸಮ್ಯಕ್ಚಾರಿತ್ರಗಳ ಪ್ರಾಪ್ತಿ ಇದಕ್ಕೆ ಅತಿ ದುರ್ಲಭವಾಗಿದೆ ಮತ್ತು ಈ ಜೀವಕ್ಕೆ ಇಂತಹ ರತ್ನತ್ರಯವು ಒಂದು ಸಾರಿ ಪ್ರಾಪ್ತವಾಗುವ ಅವಕಾಶ ದೊರಕಿದರೂ ಮೋಕ್ಷದ ಪ್ರಾಪ್ತಿ ಅತಿ ಬೇಗನೇ ಆಗುತ್ತದೆ ಎಂದು ಉತ್ತಮ ಚಿಂತನೆ ಮಾಡುವುದು 'ಬೋಧಿ ದುರ್ಲಭ ಭಾವನೆ' ಆಗಿದೆ.

12. **ಧರ್ಮ ಭಾವನೆ –** ಪರಮಾರ್ಥರೂಪದಿಂದ ರತ್ನತ್ರಯ ಧರ್ಮ ಹಾಗೂ ಅಹಿಂಸಾ ಪರಮೋಧರ್ಮ, ಇದು ಭವ್ಯ ಆತ್ಮರುಗಳ ಕಲ್ಯಾಣ ಮಾಡುವುದಾಗಿದೆ. ಇದನ್ನು ನಮ್ಮ ಹೃದಯದಲ್ಲಿ ಧಾರಣೆ ಮಾಡುವುದರಿಂದ ಎಲ್ಲ ಸಂಕಟಗಳು ದೂರವಾಗುತ್ತವೆ ಹಾಗೂ ಅಚಲವಾದ ಮೋಕ್ಷಸುಖ ಪ್ರಾಪ್ತವಾಗುತ್ತದೆ ಎಂದು ಮೇಲಿಂದ ಮೇಲೆ ಚಿಂತನೆ ಮಾಡುವುದು 'ಧರ್ಮ ಭಾವನೆ' ಆಗಿದೆ.

# ಏಳು ಭಾವನೆಗಳು

**ಶಾಸ್ತ್ರಾಭ್ಯಾಸೋ ಜಿನಪತಿನುತಿಃ ಸಂಗತಿಃ ಸರ್ವದಾರ್ಯೈಃ ।**
**ಸದ್‌ವೃತ್ತಾನಾಂ ಗುಣಗಣಕಥಾ ದೋಷವಾದೇ ಚ ಮೌನಮ್ ॥**
**ಸರ್ವಸ್ಯಾಪಿ ಪ್ರಿಯಹಿತವಚೋ ಭಾವನಾ ಚಾತ್ಮತತ್ತ್ವೇ ।**
**ಸಂಪದ್ಯಂತಾಂ ಮಮ ಭವಭವೇ ಯಾವದೇತೇಽಪವರ್ಗಃ ॥**

ಸಮಾಧಿಭಕ್ತಿ–2

1. ಶಾಸ್ತ್ರಗಳ ಅಧ್ಯಯನ ಮಾಡುವುದು, 2. ಜಿನೇಂದ್ರ ಭಗವಂತರ ಸ್ತುತಿ ಮಾಡುವುದು, 3. ಎಲ್ಲ ಶ್ರೇಷ್ಠ ಜನರ ಸಂಗತಿ ಮಾಡುವುದು, 4. ಸದ್‌ವೃತ್ತಿ (ಉತ್ತಮ ಆಚರಣೆ)ವುಳ್ಳವರ ಗುಣಗಾನ ಮತ್ತು ಅವರ ಕಥೆ ಕೇಳುವುದು, 5. ದೋಷಗಳ ಬಗ್ಗೆ ಮೌನವಾಗಿರುವುದು, 6. ಎಲ್ಲ ಸ್ಥಾನಗಳಲ್ಲಿ ಪ್ರಿಯ ಮತ್ತು ಹಿತವಾದ ಮಾತುಗಳನ್ನಾಡುವುದು ಮತ್ತು 7. ನಮ್ಮ ಆತ್ಮತತ್ತ್ವದ ಭಾವನೆ ಹೊಂದುವುದು.

ಹೇ ! ಪ್ರಭು ! ಮೋಕ್ಷ ಸಿಗುವವರೆಗೆ ಈ ಏಳು ಭಾವನೆಗಳನ್ನು ನಾವು ಸದಾಕಾಲ ಭಾವಿಸುತ್ತಿರುತ್ತೇವೆ. ಅರ್ಥಾತ್ ಚಿಂತನೆ ಮಾಡುತ್ತೇವೆ.

# ನಾಲ್ಕು ಭಾವನೆಗಳು

**ಸತ್ವೇಷು ಮೈತ್ರಿಂ ಗುಣಿಷು ಪ್ರಮೋದಂ**
**ಕ್ಲಿಷ್ಟೇಷು ಜೀವೇಷು ಕೃಪಾಪರತ್ವಂ**
**ಮಾಧ್ಯಸ್ಥ ಭಾವಂ ವಿಪರೀತ ವೃತ್ತೌ**
**ಸದಾಮಮಾತ್ಮಾ... ವಿದಧಾತು ದೇವ** ॥ ದ್ವಾತ್ರಿಂಶತಿಕಾ – 1

1. **ಸತ್ತ್ವೇಷು ಮೈತ್ರಿ** – ಸದಾಕಾಲ ಎಲ್ಲ ಜೀವಗಳಲ್ಲಿ ಮೈತ್ರಿಭಾವವಿರಲಿ.
2. **ಗುಣಿಷು ಪ್ರಮೋದಂ** – ಗುಣಿ ಜನರಲ್ಲಿ ಆಹ್ಲಾದ ಅಥವಾ ಸ್ನೇಹ ಭಾವವಿರಲಿ.
3. **ಕ್ಲಿಷ್ಟೇಷು ಜೀವೇಷು ಕೃಪಾಪರತ್ವಂ** – ದುಃಖಿ ಜೀವಗಳ ಮೇಲೆ ಕರುಣಾ ಭಾವವಿರಲಿ.
4. **ಮಾಧ್ಯಸ್ಥಭಾವಂ ವಿಪರೀತವೃತ್ತೌ** – ವಿಪರೀತ ಪ್ರವೃತ್ತಿಯವರಲ್ಲಿ ಮಾಧ್ಯಸ್ಥಭಾವವಿರಲಿ.

# ಮೂರು ಭಾವನೆಗಳು

ಸಮ್ಯಗ್ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್ಚಾರಿತ್ರ ರೂಪದ ರತ್ನತ್ರಯದ ಭಾವನೆ ಮಾಡುವುದು.

# ಎರಡು ಭಾವನೆಗಳು

**ಜಗತ್ಕಾಯಸ್ವಭಾವೌ ವಾ ಸಂವೇಗ ವೈರಾಗ್ಯಾರ್ಥಮ್ ।**–ತತ್ತ್ವಾರ್ಥ ಸೂತ್ರ 7/12

1. **ಸಂವೇಗ ಭಾವನೆ – ಸಂಸಾರಾನ್ ದುಃಖಾನ್ ನಿತ್ಯ ಭೀರುತಾ ಸಂವೇಗಃ** । ಸಂಸಾರದ ದುಃಖಗಳಿಂದ ಅರ್ಥಾತ್ ದುಃಖಗಳ ಕಾರಣರೂಪ ಪಾಪಗಳಿಂದ ಯಾವಾಗಲೂ ಹೆದರುತ್ತಾ ಇರುವುದರ ಹೆಸರೇ ಸಂವೇಗವಾಗಿದೆ.
2. **ವೈರಾಗ್ಯ ಭಾವನೆ –** ಈ ನಶ್ವರ ಅಶುಚಿ ಶರೀರದ ಸ್ವಭಾವದ ಚಿಂತನೆ ಮಾಡುತ್ತಾ ನಿರ್ಮಮತ್ವನಾಗುವುದು ವೈರಾಗ್ಯ ಭಾವನೆಯಾಗಿದೆ.

# ಒಂದು ಭಾವನೆ

ಕೇವಲ ತನ್ನ ಆತ್ಮನ ಸಂಬಂಧದ ಚಿಂತನೆ ಮಡುವುದು ಹೇಗೆಂದರೆ

**ಅಹಮಿಕ್ಕೋ ಖಲು ಸುದ್ಧೋ ದಂಸಣಣಾಮ ಮಇಓ ಸದಾ ರೂವಿ ।**
**ಣವಿ ಅತ್ಥಿ ಮಜ್ಝ ಕಿಂಚಿವಿ ಅಣ್ಣಂ ಪರಮಾಣುಮಿತ್ತಂ ಪಿ ॥**

–ಸಮಯಸಾರ 46

**ಅರ್ಥ –** ನಾನು ಒಬ್ಬನೇ ಇದ್ದೇನೆ, ನಿಶ್ಚಯವಾಗಿಯೂ ಶುದ್ಧನಾಗಿದ್ದೇನೆ, ದರ್ಶನ ಜ್ಞಾನಮಯ ಸ್ವರೂಪಿಯಾಗಿದ್ದೇನೆ, ಸದಾ ಅರೂಪಿಯಾಗಿದ್ದೇನೆ. ಯಾವುದೇ ಪರಮಾಣು ಪರದ್ರವ್ಯವಾಗಿದ್ದು ನನ್ನದಲ್ಲ.

* * *

# ಸಮ್ಯಕ್ ಧ್ಯಾನ ಶತಕ ಶಬ್ದಕೋಶ

**ಅಣುವ್ರತ** – ಸ್ಥೂಲರೂಪದಿಂದ ಹಿಂಸೆ, ಸುಳ್ಳು, ಕಳ್ಳತನ, ಕುಶೀಲ ಮತ್ತು ಪರಿಗ್ರಹ ರೂಪದ ಐದು ಪಾಪಗಳನ್ನು ತ್ಯಾಗ ಮಾಡುವುದು ಅಣುವ್ರತವಾಗಿದೆ.

**ಅರ್ಥ** – ಧ್ಯೇಯ, ಪ್ರಯೋಜನ, ದ್ರವ್ಯ ಮತ್ತು ಪರ್ಯಾಯ.

**ಅಥ** – ಈಗ.

**ಅಧರ್ಮ** – ಮಿಥ್ಯಾದರ್ಶನ, ಮಿಥ್ಯಾಜ್ಞಾನ, ಮಿಥ್ಯಾಚಾರಿತ್ರಗಳಿಗೆ ಅಧರ್ಮವೆನ್ನುತ್ತಾರೆ.

**ಅಧ್ಯೈತಾ** – ಅಧ್ಯಯನ ಮಾಡುವವರು.

**ಅಧ್ಯಾತ್ಮ** – ಆತ್ಮನಿಗೆ ಸಂಬಂಧಿಸಿದ.

**ಅನಿಷ್ಟ ಸಂಯೋಗ** – ನಮಗೆ ಬಾಧೆ ಕೊಡುವ ಪದಾರ್ಥ ಅಥವಾ ಒಳ್ಳೆಯದೆಂದು ಅನಿಸದಿರುವ ಪದಾರ್ಥಗಳು ದೊರಕಿದಾಗ ಅವು ಯಾವಾಗ ದೂರವಾಗುತ್ತವೆ ಎಂದು ಚಿಂತನೆ ಮಾಡುವುದು ಅನಿಷ್ಟಸಂಯೋಗ ಆರ್ತಧ್ಯಾನವಾಗಿದೆ.

**ಅಂತರ್ಮುಹೂರ್ತ** – 48 ನಿಮಿಷಗಳ ಎರಡು ಘಟಿಕಾಕ್ಕಿಂತ ಸ್ವಲ್ಪ ಕಡಿಮೆ ಮತ್ತು ಆವಲೀಗಿಂತ ಹೆಚ್ಚಿನ ಕಾಲವನ್ನು ಅಂತರ್ಮುಹೂರ್ತವೆನ್ನುತ್ತಾರೆ.

**ಅನುಕಂಪ** – ದಯೆ, ಕರುಣಾ, ಜೀವರಕ್ಷಣೆ

**ಅನುಭೂತಿ** – ಅನುಭವ

**ಅಪಾಯ ವಿಚಯ** – ಸಂಸಾರೀ ಆತ್ಮನು ಮಿಥ್ಯಾತ್ವ ಅಥವಾ ಮಿಥ್ಯಾಮಾರ್ಗ ಅಥವಾ ಪಂಚ ಮಿಥ್ಯಾತ್ವ ಮತ್ತು ದುರ್ಗತಿ ಮುಂತಾದ ಕಷ್ಟಗಳಿಂದ ಹೇಗೆ ರಕ್ಷಿಸಿಕೊಳ್ಳುವುದು ಹೀಗೆ ಚಿಂತನೆ ಮಾಡುವುದು ಅಪಾಯ ವಿಚಯ ಧರ್ಮಧ್ಯಾನವಾಗಿದೆ.

**ಅಪೂರ್ವಕರಣ** – ಜೈನಾಗಮ ಸಂಸ್ಕಾರದಲ್ಲಿ 184ನೇ ಪುಟ ನೋಡಿ.

**ಅಪ್ರಮತ್ತಸಂಯತ** – ಪ್ರಮಾದ ರಹಿತ ಸಾವಧಾನ ಮುನಿ.

**ಅಭಿರಾಮ** – ಸಂಪೂರ್ಣ.

**ಅಭಿವ್ಯಂಜನ** – ಪ್ರಕಟ ಮಾಡುವುದು.

**ಅಯೋಗ** – ಮನ, ವಚನ, ಕಾಯದ ಕ್ರಿಯೆಗಳಿಂದ ರಹಿತರಾಗಿರುವವರಿಗೆ ಅಯೋಗಿಗಳೆನ್ನುತ್ತಾರೆ.

**ಅರತಿ** – ಪ್ರತಿ ಇಲ್ಲದ ಪರಿಣಾಮ.

**ಅರ್ಹತ್** – ಪೂಜಿಸಲು ಯೋಗ್ಯರಾದವರು.

**ಅವತಾರ** – ಪುನರ್ಜನ್ಮ.

**ಅವದಾನ** – ಪವಿತ್ರ ಮತ್ತು ಮಾನ್ಯತೆ ಪಡೆದ ವೃತ್ತಿ, ಸಂಪನ್ನ ಕಾರ್ಯ.

**ಅವ್ರತ** – ಅಹಿಂಸಾ, ಸತ್ಯ, ಅಚೌರ್ಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹದ ಅಭಾವ.

**ಅಶನ** – ಭೋಜನ.

**ಅಸಂಯತ ಸಮ್ಯಗ್‌ದೃಷ್ಟಿ** – ವ್ರತರಹಿತರಾಗಿಯೂ ವೀತರಾಗಮಯ ಜೈನಧರ್ಮದ ಮೇಲೆ ಶ್ರದ್ಧೆ ಇರುವವರು.

**ಅಸ್ತಿಕಾಯ** – ಬಹುಪ್ರದೇಶಿಗಳಾಗಿರುವವು ಅಸ್ತಿಕಾಯಗಳಾಗಿವೆ. ಜೀವ, ಪುದ್ಗಲ, ಧರ್ಮ, ಅಧರ್ಮ ಮತ್ತು ಆಕಾಶ ಇವು ಐದು ಅಸ್ತಿಕಾಯಗಳು.

**ಅಷ್ಟಮ ಗುಣಸ್ಥಾನ** – ಸಂಜ್ವಲನ ಕಷಾಯದ ಮಂದೋದಯವಾಗುವ ಮೊದಲು ಅಪ್ರಾಪ್ತದಂತಹ ಪರಮ ಆಹ್ಲಾದ ಸುಖದ ಅನುಭವ ರೂಪ ಅಪೂರ್ವ ಅಪೂರ್ವ (ಹೊಸ–ಹೊಸ) ಪರಿಣಾಮವಾಗುವ ಗುಣಸ್ಥಾನದಲ್ಲಿ ಉಪಶಮಕ ಮತ್ತು ಕ್ಷಪಕ ಅಪೂರ್ವಕರಣ ಹೆಸರಿನ ಗುಣಸ್ಥಾನದಲ್ಲಿ ಇರುವವರೆಂದು ಹೇಳಲಾಗುತ್ತದೆ.

**ಅಷ್ಟಾಪದ** – ಆದಿನಾಥ ಭಗವಂತರು ಮೋಕ್ಷ ಪಡೆದ ಸ್ಥಳ (ವರ್ತಮಾನದಲ್ಲಿ ಆ ಸ್ಥಳವನ್ನು ಕೈಲಾಸ ಪರ್ವತವೆಂದು ಹೇಳುತ್ತಾರೆ).

**ಅಹಮಿಂದ್ರ** – ಸಾಮಾನ್ಯ ದೇವನಾಗಿರದೆ, ಬದಲಾಗಿ ಸರ್ವರೀತಿಯಲ್ಲೂ ಸ್ವಯಂ ಇಂದ್ರನಾಗಿರುವವನು.

**ಅಕ್ಷ** – ಇಂದ್ರಿಯಗಳು.

**ಅಕ್ಷ ವ್ಯಾಪಾರ** – ಇಂದ್ರಿಯಗಳ ಕಾರ್ಯ.

**ಆಕುಲತೆ** – ಚಿಂತೆ, ಅಶಾಂತಿ ಅಥವಾ ಸಾಂಸಾರಿಕ ಆಸೆಗಳು.

**ಆತ್ಮಶಾಂತಿ** – ಆತ್ಮಲೀನತೆ ಅಥವಾ ನಮ್ಮ ಆತ್ಮಿಕ ಆನಂದವನ್ನು ಶಾಂತಿ ಎಂದು ಹೇಳುತ್ತಾರೆ.

**ಆತ್ಮ ಅಭಿಷೇಕ** – ಪರಿಮಾರ್ಜನೆ, ಆತ್ಮಶುದ್ಧಿ/ಪವಿತ್ರತೆ ಅಥವಾ ಶುಭಧ್ಯಾನ

**ಆತ್ಮಗುಣ** – ಜ್ಞಾನ–ದರ್ಶನ–ಚಾರಿತ್ರ ಇತ್ಯಾದಿ.

**ಆತ್ಮ** – ನಿಜ, ಚೇತನ.

**ಆದರ್ಶ** – ಶ್ರೇಷ್ಠ.

**ಆದೇಶ** – ಆಜ್ಞೆ.

**ಆಧಾರ** – ಯಾವುದರ ಆಶ್ರಯದಿಂದ ವಸ್ತು ಇರುವುದೋ ಅದನ್ನು ಆಧಾರವೆನ್ನುತ್ತಾರೆ.

**ಆಮಿಸ** – ಮಾಂಸದಲ್ಲಿ ಅಪಕ್ವ ಅಥವಾ ಅಗ್ನಿಪಕ್ವಾದಿ ಯಾವುದೇ ಅವಸ್ಥೆಯಲ್ಲಿ ಅನಂತ ತ್ರಸ ಜೀವ ಉತ್ಪನ್ನವಾಗುತ್ತಲೇ ಇರುತ್ತದೆ. ಆದ್ದರಿಂದ ಈ ಆಹಾರವು ಅಭಕ್ಷಣೀಯ ವಸ್ತು. ಇದರೊಳಗೆ ಮೊಟ್ಟೆ, ಮೀನು ಸಹ ಸೇರಿವೆ.

**ಆರ್ತಧ್ಯಾನ** – ದುಃಖ ರೂಪದ ಪರಿಣಾಮವಾಗುವುದು.

**ಆಪ್ತ** – ವೀತರಾಗ, ಸರ್ವಜ್ಞ ಮತ್ತು ಹಿತೋಪದೇಶಿ ಅರ್ಹಂತ ಭಗವಂತನನ್ನು ಆಪ್ತನೆಂದು ಹೇಳುತ್ತಾರೆ.

**ಆರ್ಯ** – ಧರ್ಮ, ಕರ್ಮಗಳಿಂದ ಗುಣವಂತ ಪುರುಷ.

**ಆಸ್ತಿಕ್ಯ** – ಆಸ್ಥಾ ಹಾಗೂ ಶ್ರದ್ಧಾವಂತ ರೂಪ ಗುಣ.

**ಆವಶ್ಯಕ** – ಅವಶ್ಯಕವಾಗಿ ಮಾಡಲು ಯೋಗ್ಯ ಕಾರ್ಯವನ್ನು ಆವಶ್ಯಕವೆನ್ನುತ್ತಾರೆ. ಮುನಿಗಳಿಗೆ ಸಂಬಂಧಿಸಿದಂತೆ ಸಾಮಾಯಿಕ, ಸ್ತುತಿ, ವಂದನೆ, ಪ್ರತಿಕ್ರಮಣ, ಪ್ರತ್ಯಾಖ್ಯಾನ ಮತ್ತು ಕಾಯೋತ್ಸರ್ಗ ಹಾಗೂ

ಶ್ರಾವಕರಿಗೆ ಸಂಬಂಧಿಸಿದಂತೆ ದೇವಪೂಜೆ, ಗುರೂಪಾಸ್ತಿ, ಸ್ವಾಧ್ಯಾಯ, ಸಂಯಮ, ತಪ ಮತ್ತು ದಾನ ಇವು ಆವಶ್ಯಕಗಳಾಗಿವೆ.

**ಆವರ್ತ** – ಕೈಜೋಡಿಸಿ ಮೂರು ಬಾರಿ ನೇರ (ಗಡಿಯಾರದ ಮುಳ್ಳಿನಂತೆ) ಬೆರಳುಗಳಿಂದ ಬಂಧಿಸಲ್ಪಟ್ಟ ಹಸ್ತಗಳನ್ನು ತಿರುಗಿಸುವುದಕ್ಕೆ ಆವರ್ತವೆನ್ನುತ್ತಾರೆ.

**ಆಜ್ಞಾವಿಚಯ** – ಜಿನೇಂದ್ರ ಭಗವಂತರಿಂದ ಪ್ರತಿಪಾದಿತ ಆಗಮ ವಚನವೇ ಸತ್ಯ ಮತ್ತು ಕಲ್ಯಾಣಿಕಾರಿಯಾಗಿದೆ ಎಂದು ಚಿಂತನೆ ಮಾಡಿ ಏಳು ತತ್ತ್ವಗಳು, ಆರು ದ್ರವ್ಯ ಮುಂತಾದವುಗಳ ಸ್ವರೂಪವನ್ನು ವಿಚಾರ ಮಾಡುವುದು ಆಜ್ಞಾವಿಚಯ ಹೆಸರಿನ ಧರ್ಮ್ಯಧ್ಯಾನವಾಗಿದೆ.

**ಇಂದ್ರ** – ಆಜ್ಞೆ ಮತ್ತು ಐಶ್ವರ್ಯವುಳ್ಳ ದೇವ.

**ಇಷ್ಟ** – ತಮ್ಮ ಪ್ರಿಯವಸ್ತು ಅದಿಲ್ಲದೇ ಹಿತ ಅನಿಸದಿರುವುದು ಅಂತಹ ವಸ್ತುವನ್ನು ಇಷ್ಟವಸ್ತು (ಪದಾರ್ಥ)ವೆನ್ನುತ್ತಾರೆ.

**ಈಶ** – ಇಷ್ಟದೇವತೆ, ವೀತರಾಗ ಪರಮೇಷ್ಠಿ.

**ಉಪಯೋಗ** – ಸ್ವ ಮತ್ತು ಪರವನ್ನು ತಿಳಿಯುವ ಮತ್ತು ನೋಡುವ ಜೀವದ ಪರಿಣಾಮವನ್ನು ಉಪಯೋಗವೆನ್ನುತ್ತಾರೆ.

**ಉಪವಾಸ** – ಖಾದ್ಯ, ಸ್ವಾದ, ಲೇಹ್ಯ, ಪೇಯ ಇಂತಹ ನಾಲ್ಕೂ ಪ್ರಕಾರಗಳ ಆಹಾರವನ್ನು ತ್ಯಾಗ ಮಾಡುವುದು ಉಪವಾಸವಾಗಿದೆ.

**ಉಪದೇಶ** – ಪ್ರವಚನ.

**ಉಪಸರ್ಗ** – ಉಪದ್ರವ ಅಂದರೆ ದೇವಕೃತ, ಮನುಷ್ಯಕೃತ, ತಿರ್ಯಂಚಕೃತ ಮತ್ತು ಪ್ರಕೃತಿಕೃತ ಈ ರೀತಿಯ ನಾಲ್ಕು ಪ್ರಕಾರಗಳಾಗಿವೆ.

**ಉಪಾದಾನ** – ಅಂತರಂಗ ಕಾರಣ ರೂಪದ ಶಕ್ತಿ.

**ಊರ್ಜಾ** – ಒಂದು ಆಂತರಿಕ ಶಕ್ತಿ.

**ಊಹಾಪೋಹ** – ತರ್ಕಿಸುವುದು ಮತ್ತು ಚಿಂತನೆ, ಮಂಥನ ಮಾಡುವುದು.

**ಏಕಾಸನ** – ಒಂದು ಸಾರಿ ಆಹಾರ ಸ್ವೀಕರಿಸುವುದು.

**ಏಕಾಂತ** – ನಿರ್ಜನ ಸ್ಥಾನ.

**ಏಕಾಗ್ರ** – ಒಂದೇ ವಿಷಯದಲ್ಲಿ ಧ್ಯಾನವನ್ನು ಕೇಂದ್ರಿಕರಿಸುವುದು.

**ಏಕತ್ವ ವಿತರ್ಕ ಅವೀಚಾರ** – ಮೋಹನೀಯ ಕರ್ಮವನ್ನು ಪೂರ್ಣರೂಪದಲ್ಲಿ ನಷ್ಟ ಮಾಡಲು ಸಾಧ್ಯವು, ಮನ–ವಚನ–ಕಾಯರೂಪದಿಂದ ಯಾವುದಾದರೂ ಒಂದು ಯೋಗದಲ್ಲಿ ಸ್ಥಿರವಾಗಿದ್ದು ಅರ್ಥ, ವ್ಯಂಜನ ಹಾಗೂ ಯೋಗದ ಪರಿವರ್ತನೆಯಿಂದ ರಹಿತರಾಗಿ ಶ್ರುತದ ಮಾಧ್ಯಮದಿಂದ ಯಾವುದಾದರೊಂದು ದ್ರವ್ಯ, ಗುಣ ಅಥವಾ ಪರ್ಯಾಯದ ಚಿಂತನೆ ಮಾಡುವುದನ್ನು ಏಕತ್ವ ವಿತರ್ಕ ಅವೀಚಾರ ಹೆಸರಿನ ಎರಡನೆ ಶುಕ್ಲಧ್ಯಾನವೆಂದು ಹೇಳುತ್ತಾರೆ.

**ಓಮ್** – ಪಂಚ ಪರಮೇಷ್ಠಿಗಳು ಸಮಾಹಿತರಾಗಿರುವ ಶಬ್ದ 'ಓಂ'.

**ಕಂದ** – ಆಲೂಗಡ್ಡೆ, ಈರುಳ್ಳಿ ಮುಂತಾದ ಬಹಳಷ್ಟು ಜೀವಗಳಿರುವ ಹಾಗೂ ಭೂಮಿಯ ಕೆಳಗೆ ಉತ್ಪನ್ನವಾಗುವ ಕೆಲವು ತಾಮಸಿಕ ವನಸ್ಪತಿಗಳಿಗೆ ಕಂದಮೂಲಗಳೆಂದು ಹೇಳುತ್ತಾರೆ.

**ಕರ್ಣಿಕೆ** – ಕಮಲದ ಮಧ್ಯದಲ್ಲಿರುವ ಉನ್ನತಭಾಗ

**ಕರ್ಮ** – ಜೀವದ ರಾಗದ್ವೇಷ ಮುಂತಾದವುಗಳ ಪರಿಣಾಮಗಳ ನಿಮಿತ್ತದಿಂದ ಕಾರ್ಮಾಣಾ ವರ್ಗಣಾ ರೂಪದ ಪುದ್ಗಲ ಸ್ಕಂಧವು ಜೀವದೊಂದಿಗೆ ಸಂಬಂಧ ಹೊಂದುತ್ತದೆ. ಅವುಗಳಿಗೆ ಕರ್ಮವೆನ್ನುತ್ತಾರೆ.

**ಕಲ್ಯಾಣ** – ಉದ್ಧಾರ.

**ಕಷಾಯ** – ಕರ್ಮಬಂಧಕಾರಕ ಕಲುಷಿತ ಪರಿಣಾಮ.

**ಕಾಮ ಇಂದ್ರಿಯಗಳು** – ಸ್ಪರ್ಶನ ಇಂದ್ರಿಯ ಮತ್ತು ರಸನಾ ಇಂದ್ರಿಯ ಇವೆರಡನ್ನೂ ಕಾಮ ಇಂದ್ರಿಯಗಳೆಂದು ಕರೆಯುತ್ತಾರೆ.

**ಕಾಮಜಯೀ** – ಕಾಮದ ಮೇಲೆ ವಿಜಯ ಸಾಧಿಸಿದವರು.

**ಕಾಯೋತ್ಸರ್ಗ** – ಶರೀರದ ಮೇಲಿನ ಮಮಕಾರವನ್ನು ತ್ಯಜಿಸಿ ಧ್ಯಾನದಲ್ಲಿ ಲೀನನಾಗುವುದಕ್ಕೆ ಕಾಯೋತ್ಸರ್ಗವೆನ್ನುತ್ತಾರೆ.

**ಕಾಲ** – ಸಮಯ

**ಕುದರ್ಶ** – ಮಿಥ್ಯಾದರ್ಶನ.

**ಕೃತಕೃತ್ಯ** – ಮಾಡಲು ಯೋಗ್ಯವಾದ ಕರ್ತವ್ಯಗಳನ್ನು ಮಾಡುವಂತಹ ಆತ್ಮ.

**ಕೇವಲಜ್ಞಾನಿ** – ಮೂರು ಲೋಕಗಳು ಮತ್ತು ಅಲೋಕವನ್ನು ಸದಾಕಾಲ ಹೇಗಿದೆಯೋ ಹಾಗೆ ತಿಳಿದಿರುವವರು.

**ಕೇವಲಜ್ಞಾನ/ಕೈವಲ್ಯ** – ಸಕಲ ಚರಾಚರ ಜಗತ್ತನ್ನು ಕನ್ನಡಿಯಲ್ಲಿ ಹೊಳೆಯುತ್ತಿರುವ ಪ್ರತಿಬಿಂಬದಂತೆ ಏಕಕಾಲದಲ್ಲಿ ಸ್ಪಷ್ಟವಾಗಿ ತಿಳಿಯುವುದು ಕೇವಲಜ್ಞಾನವಾಗಿದೆ.

**ಕೇವಲೀ** – ಇಂದ್ರಿಯಗಳ ಸಹಾಯದಿಂದ ರಹಿತವಾದ ಜ್ಞಾನ ಮತ್ತು ದರ್ಶನದಿಂದ ಕೂಡಿರುವವರನ್ನು ಕೇವಲಿ ಎನ್ನುತ್ತಾರೆ.

**ಕ್ಷೀಣ ಕಷಾಯ** – ಕಷಾಯ ರಹಿತ 12ನೇ ಗುಣಸ್ಥಾನ.

**ಕ್ಷೇತ್ರ** – ಸ್ಥಾನ.

**ಖಡ್ಗಾಸನ** – ನಿಂತುಕೊಂಡು ವ್ಯವಸ್ಥಿತವಾಗಿ ಧ್ಯಾನ ಮಾಡುವುದು.

**ಖೇದ** – ಕಷ್ಟ.

**ಗಮ** – ದುಃಖ.

**ಗಣಧರ** – ಮುನಿ ಸಮೂಹದ ಒಡೆಯ.

**ಗತಿ ಆಗತಿ** – ನಾಲ್ಕೂ ಗತಿಗಳಲ್ಲಿ ಜನ್ಮ–ಮರಣವಾಗುವುದು.

**ಗರಿಷ್ಠ ಪದಾರ್ಥ** – ನಮ್ಮೊಳಗೆ ಉತ್ತೇಜನ ತರುವ ಪದಾರ್ಥಗಳು ಉದಾ– ಪೌಷ್ಠಿಕ ಆಹಾರ ಬಾದಾಮಿ, ಗೋಡಂಬಿ ಇತ್ಯಾದಿ ಮತ್ತು ಖೋವಾ, ಮಿಠಾಯಿ ಹಲ್ವಾ ಇತ್ಯಾದಿ.

**ಗವಾಸನ** – ಹಸುವಿನ ಹಾಗೇ ಕಾಲುಗಳನ್ನು ಮಡುಚಿ ಕುಳಿತುಕೊಳ್ಳುವುದು.

**ಗಿರಿನಾರ** – ಇಲ್ಲಿಂದ 22ನೇ ತೀರ್ಥಂಕರ ನೇಮನಾಥ ಭಗವಾನರು ಮೋಕ್ಷಕ್ಕೆ ಹೋದರು. ಇದು ಗುಜುರಾತಿನಲ್ಲಿದೆ.

**ಗುಣಸ್ಥಾನ** – ಮೋಹ ಮತ್ತು ಯೋಗದ ಮಾಧ್ಯಮಗಳಿಂದ ಜೀವದ ಪರಿಣಾಮಗಳಲ್ಲಿ ಆಗುವ ಏರಿಳಿತಗಳಿಗೆ ಗುಣಸ್ಥಾನವೆನ್ನುತ್ತಾರೆ.

**ಗುಣ ಅನಂತ** – ಗುಣಗಳ ಸಂಖ್ಯೆ ಅನಂತವಾಗಿರುವ ಆತ್ಮ.

**ಗುಪ್ತಿ** – ಮನ, ವಚನ, ಕಾಯ (ಶರೀರ)ಗಳ ಕ್ರಿಯೆಗಳನ್ನು ತಡೆಗಟ್ಟುವುದು ಗುಪ್ತಿಯಾಗಿದೆ.

**ಗುರು** – ನಿರ್ಮೋಹಿ ಮತ್ತು ನಿರ್ಗ್ರಂಥ ಮಹಾನ್ ಪುರುಷರಿಗೆ ಗುರು ಎನ್ನುತ್ತಾರೆ.

**ಗೋಪಾಚಲ** – ಇದು ಗ್ವಾಲಿಯರ ಕೋಟೆಯ ಪೂರ್ವ ದಿಕ್ಕಿನಲ್ಲಿದೆ ಇಲ್ಲಿಯ 42 ಅಡಿ ಎತ್ತರದ ಪಾರ್ಶ್ವನಾಥ ಭಗವಂತರ ಪ್ರತಿಮೆಯು ಪದ್ಮಾಸನದಲ್ಲಿ ವಿರಾಜಮಾನವಾಗಿದೆ ಹಾಗೂ ಇನ್ನೂ ಅನೇಕ ಮೂರ್ತಿಗಳನ್ನು ಗುಹೆಗಳಲ್ಲಿ ಕೆತ್ತಲಾಗಿದೆ.

**ಗ್ಯಾರಹ ಅಂಗ (ಹನ್ನೊಂದು ಅಂಗಗಳು)** – ಜೈನಾಗಮ ಸಂಸ್ಕಾರ (ಅ.1 ಪುಟ 7 – ಹಿಂದಿ)ದಲ್ಲಿ ನೋಡಿರಿ.

**ಘಡಿ** – ಇಪ್ಪತ್ನಾಲ್ಕು ನಿಮಿಷಗಳ ಒಂದು ಘಡಿ ಆಗುತ್ತದೆ.

**ಘಾತಿಕರ್ಮ** – ಜ್ಞಾನಾವರಣೀಯ ದರ್ಶನಾವರಣೀಯ ಮೋಹನೀಯ ಮತ್ತು ಅಂತರಾಯ ಈ ನಾಲ್ಕು ಕರ್ಮಗಳನ್ನು ಘಾತಿಕರ್ಮಗಳೆನ್ನುತ್ತಾರೆ.

**ಚಕ್ರವರ್ತಿ** – ಷಟ್‌ಖಂಡಗಳ ಪೃಥ್ವಿಯ ಒಡೆಯ.

**ಚಂಪಾಪುರ** – ಈ ಕ್ಷೇತ್ರದಿಂದ 12ನೇ ತೀರ್ಥಂಕರ ವಾಸುಪೂಜ್ಯರು ಮೋಕ್ಷಕ್ಕೆ ಹೋಗಿದ್ದಾರೆ. ಇದು ಬಿಹಾರದಲ್ಲಿದೆ.

**ಚರಣಾನುಯೋಗ** – ಶ್ರಾವಕ ಹಾಗೂ ಮುನಿಗಳ ಆಚರಣೆಯನ್ನು ಹೇಳುವ ಶಾಸ್ತ್ರ.

**ಚಾರಿತ್ರ** – ವ್ರತಗಳ ಪಾಲನೆ ಮಾಡುವುದು.

**ಚಿದ್ರೂಪ** – ಆತ್ಮರೂಪ.

**ಚಿದಾನಂದ** – ಆತ್ಮಾನಂದ.

**ಚಿಂತಾಮಣಿ** – ಮನಸ್ಸು ಬಯಸುವ ವಸ್ತುವನ್ನು ಕೊಡುವ ರತ್ನ.

**ಚೌದಹವೇ ಗುಣಸ್ಥಾನ** – ಹದಿನಾಲ್ಕನೆ ಗುಣಸ್ಥಾನ. 18 ಸಾವಿರ ಶೀಲಗಳ ಒಡೆಯರು, ಆಸ್ರವದಿಂದ ರಹಿತರು, ಮನ, ವಚನ, ಕಾಯಗಳಿಂದ ರಹಿತರು, ಕೇವಲಜ್ಞಾನದಿಂದ ವಿಭೂಷಿತರಾದವರು. ಹದಿನಾಲ್ಕನೆ ಗುಣಸ್ಥಾನದಲ್ಲಿರುವ ಅಯೋಗಿ ಜಿನರೆಂದು ಕರೆಯಲ್ಪಡುತ್ತಾರೆ.

**ಚೌದಹ ಪೂರ್ವ (ಹದಿನಾಲ್ಕನೇ ಪೂರ್ವ)** – ಜೈನಾಗಮ ಸಂಸ್ಕಾರ (ಅ.1 ಪುಟ 7 (ಹಿಂದಿ))ದಲ್ಲಿ ನೋಡಿರಿ.

**ಚೌರ್ಯಾನಂದ** – ಕಳ್ಳತನದಲ್ಲಿ ಆನಂದ ಭಾವನೆ ಹೊಂದಿರುವವರು

**ಜಗ** – ವಿಶ್ವ ಅಥವಾ ಲೋಕ.

**ಜನ್ಮ** – ಶರೀರದ ಉತ್ಪನ್ನವಾಗುವಿಕೆ

**ಜಗತ್ ವಂದ್ಯ** – ಮೂರು ಲೋಕದಲ್ಲಿ ಇರುವ ಎಲ್ಲ ಜೀವರುಗಳಿಂದ ಪೂಜಿತರಾದವರು.

**ಜಗತ್ ಸೆ ರಾಗ** – ಸ್ವ–ಆತ್ಮನಿಂದ ಅನ್ಯ ಅಥವಾ ಭಿನ್ನ ವಸ್ತುಗಳೊಂದಿಗೆ ಮಮತ್ವ.

**ಜಂಬೂದ್ವೀಪ** – ಮಧ್ಯಲೋಕದ ಪ್ರಥಮ ದ್ವೀಪ.

**ಜಲಧಾರಣೆ** – ಘನ–ಘೋರ ಮಳೆ ನೀರಿನಿಂದ ಬಂಡೆಕಲ್ಲಿನಂತಿರುವ ಕರ್ಮಗಳ ಬೂದಿ ತನ್ನಷ್ಟಕ್ಕೆ ತಾನೆ ತೊಳೆಯುತ್ತಿರುವುದು.

**ಜಾಪ** – ಮಂತ್ರಗಳ ಉಚ್ಛಾರಣೆ (ಅಂತರ್ಜಲ್ಪ–ಮಂತ್ರ ಚಿಂತನೆ)

**ಜಿನ** – 'ಇಂದ್ರಿಯಾಣಿ ಜಯತೀತಿ ಜಿನಃ' ಇಂದ್ರಿಯಗಳನ್ನು ಗೆದ್ದಿರುವವರನ್ನು ಜಿನರೆಂದು ಹೇಳುತ್ತಾರೆ.

**ಜಿನೇಂದ್ರ** – ಇಂದ್ರ ಅರ್ಥಾತ್ ಇಂದ್ರಿಯಗಳನ್ನು ಗೆಲ್ಲುವವನು ಜಿನೇಂದ್ರ. ಅತನೇ ಜಿತೇಂದ್ರ.

**ಜೀವ** – ತಿಳಿಯುವ ಮತ್ತು ನೋಡುವ ಶಕ್ತಿ ಇರುವವರನ್ನು ಜೀವ ಎನ್ನುತ್ತಾರೆ ಅಥವಾ ಪ್ರಾಣಗಳಿಂದ ಬದುಕಿರುವವರನ್ನು 'ಜೀವ' ಎನ್ನುತ್ತಾರೆ.

**ಜೀವನ್ಮುಕ್ತ** – ಪುನರ್ಜನ್ಮ ಇರದಿರುವವರು

**ಜ್ಞಾನ** – ಕೇವಲ ತಿಳಿಯುವುದೇ ಜ್ಞಾನವಾಗಿದೆ. ಯಾವುದರ ಮೂಲಕ ತಿಳಿಯಲಾಗುತ್ತದೆಯೋ ಅದನ್ನು ಜ್ಞಾನವೆನ್ನುತ್ತಾರೆ.

**ತತ್ತ್ವ** – ವಸ್ತುವಿಗೆ ಇರುವ ಭಾವವು ತತ್ತ್ವವಾಗಿದೆ. ಯಾವ ರೂಪದಿಂದ ವಸ್ತು ಇದೆಯೋ ಅದು ಆ ರೂಪದಲ್ಲಿ ಇರುವುದೇ ತತ್ತ್ವ ಶಬ್ದದ ಅರ್ಥವಾಗಿದೆ.

**ತತ್ತ್ವಧಾರಣೆ** – ವಸ್ತುವಿಗೆ ಇರುವ ಭಾವವೇ ತತ್ತ್ವವಾಗಿದೆ. ಹೀಗೆ ಅನಂತಜ್ಞಾನ ದರ್ಶನ ಮುಂತಾದ ಪರಮ ತತ್ತ್ವಗಳಿಂದ ಕೂಡಿದ ಆತ್ಮನು ದೇಹ ಮತ್ತು ಸಂಸಾರದಿಂದ ಬೇರೆ ಎಂದು ಅನಿಸುತ್ತಿರುವುದರ ಚಿಂತನೆ ತತ್ತ್ವಧಾರಣೆಯಾಗಿದೆ.

**ತಾಮಸಿಕ** – ಮಾಂಸ, ಮಾದಕವಸ್ತು, ಕಂದಮೂಲ ಇತ್ಯಾದಿ ಮತ್ತು ಹೆಚ್ಚು ಖಾರವಿರುವ ಪದಾರ್ಥಗಳನ್ನು ತಾಮಸಿಕ ಆಹಾರವೆನ್ನುತ್ತಾರೆ.

**ತೇರಹವೇ ಗುಣಸ್ಥಾನ** – 13ನೇ ಗುಣಸ್ಥಾನ, ಕೇವಲಜ್ಞಾನ ರೂಪದ ಸೂರ್ಯನ ಕಿರಣಗಳಿಂದ ಅಜ್ಞಾನ–ಅಂಧಕಾರ ನಷ್ಟವಾಗಿರುವವರು, ಕೇವಲಜ್ಞಾನಿ ಆಗಿರುವುದರಿಂದ ಪರಮಾತ್ಮ ಎಂಬ ಹೆಸರು ಬಂದಿರುವವರು ಕೇವಲಿ ಸಯೋಗಿ, ಜಿನ ಮುಂತಾದ ಈ ಎಲ್ಲ ವಿಶೇಷಣಗಳಿಂದ ಕೂಡಿರುವ ಆತ್ಮನು ಸಯೋಗಿ ಕೇವಲಿ ಹೆಸರಿನ 13ನೇ ಗುಣಸ್ಥಾನದಲ್ಲಿರುವವರೆಂದು ಹೇಳಲಾಗುತ್ತದೆ.

**ತ್ರಸ** – ಎರಡು ಇಂದ್ರಿಯಗಳಿಂದ ಐದು ಇಂದ್ರಿಯಗಳವರೆಗಿನ ಜೀವಿಗಳನ್ನು 'ತ್ರಸ'ವೆಂದು ಹೇಳುತ್ತಾರೆ. ಉದಾ:– ಇರುವೆ, ದುಂಬಿ, ಭ್ರಮರ ಮತ್ತು ಮನುಷ್ಯ ಇತ್ಯಾದಿ

**ತ್ರಿಶಲಾಗಿರಿ** – ಗ್ವಾಲಿಯರ್‌ನಲ್ಲಿರುವ ಗೋಪಗಿರಿ ಪರ್ವತದ ಪಶ್ಚಿಮ ದಿಕ್ಕಿನಲ್ಲಿ ಮಹಾವೀರ ಭಗವಂತರ ಪ್ರತಿಮೆಯೊಂದಿಗೆ ಅವರ ಪಂಚಕಲ್ಯಾಣದ ದೃಶ್ಯಗಳನ್ನು ಕೆತ್ತಲಾಗಿರುವ ಗಿರಿ ತ್ರಿಶಲಾಗಿರಿ.

**ದಯೆ** – ಜೀವಗಳ ರಕ್ಷಣೆ ಮಾಡುವುದು ದಯೆಯಾಗಿದೆ.

**ದರ್ಶನ** – ಸಮ್ಯಗ್ದರ್ಶನ.

**ದ್ವಾದಶಾಂಗ** – ದಿವ್ಯಧ್ವನಿಯ ಹನ್ನೆರಡು ಅಂಗಗಳು.

**ದಿಗಂಬರ** – ನಿಯಮಗಳನ್ನೆ ವಸ್ತ್ರಗಳನ್ನಾಗಿ ಮಾಡಿಕೊಂಡಿರುವ ನಿರ್ವಸ್ತ್ರಧಾರಿ ಮುನಿ.

**ದೂರಬೀನ** – ಮಸೂರ (ಲೆನ್ಸ್) ದೂರದ ವಸ್ತುಗಳನ್ನು ಸ್ಪಷ್ಟವಾಗಿ ನೋಡಲು ಇರುವ ಯಂತ್ರ.

**ದೇವ** – ಪರಮ ಸುಖದಲ್ಲಿರುವವರು, ಜನ್ಮ-ಮರಣರೂಪದ ಸಂಸಾರದಿಂದ ಮುಕ್ತರಾಗಿರುವವರು, ಧರ್ಮದ ವಿಧಾತರು, ಇವರನ್ನು ದೇವ ಎಂದು ಕರೆಯುತ್ತಾರೆ ಅಥವಾ ದೇವಗತಿಯ ದೇವತೆಗಳಿಂದಲೂ ಪೂಜನೀಯರಾದ ಅರಿಹಂತ ಸಿದ್ಧರೂಪದ ದೇವಾದಿದೇವರು.

**ದೇವಪೂಜಾ** – ವೀತರಾಗ ಸರ್ವಜ್ಞ ದೇವನ ಪೂಜೆ.

**ದೇಶನಾ** – ಭಗವಂತರ ವಾಣಿ.

**ದ್ರವ್ಯ** – ವಸ್ತು ಅಥವಾ ಸಾಮಗ್ರಿ.

**ಧರ್ಮ** – 'ಧರತೀತಿ ಧರ್ಮಃ' ಉತ್ತಮ ಸುಖದಲ್ಲಿಡುವುದು ಧರ್ಮವಾಗಿದೆ.

**ದಶಧರ್ಮ** – ಉತ್ತಮ ಕ್ಷಮಾ, ಉತ್ತಮ ಮಾರ್ದವ, ಉತ್ತಮ ಆರ್ಜವ, ಉತ್ತಮ ಶೌಚ, ಉತ್ತಮ ಸತ್ಯ, ಉತ್ತಮ ಸಂಯಮ, ಉತ್ತಮ ತಪ, ಉತ್ತಮ ತ್ಯಾಗ, ಉತ್ತಮ ಆಕಿಂಚನ್ಯ, ಉತ್ತಮ ಬ್ರಹ್ಮಚರ್ಯ ಈ ಹತ್ತು ಧರ್ಮಗಳು ದಶಧರ್ಮಗಳಾಗಿವೆ.

**ಧಾರಣೆ** – ಪೃಥ್ವೀ ಮುಂತಾಧ ಐದರ ಆಲಂಬನದಿಂದ ಅಥವಾ ಪಂಚನಮಸ್ಕಾರ ಮಂತ್ರ ಹಾಗೂ ಜಿನ ಪ್ರತಿಮೆಗಳ ಆಲಂಬನದಿಂದ ಮನಸ್ಸನ್ನು ಏಕಾಗ್ರಗೊಳಿಸುವುದು 'ಧಾರಣೆ' ಹೆಸರಿನ ಧ್ಯಾನವಾಗಿದೆ.

**ಧೀಮಾನ** – ಬುದ್ಧಿವಂತ ಅಥವಾ ವಿದ್ವಾನ್.

**ಧ್ಯಾನ** – ಮನಸ್ಸು ಅಥವಾ ಉಪಯೋಗದ ಏಕಾಗ್ರತೆಯ ಹೆಸರು 'ಧ್ಯಾನ'ವಾಗಿದೆ.

**ಧ್ಯಾತಾ** – ಧ್ಯಾನ ಮಾಡುವವರು.

**ಧ್ಯೇಯ** – ಧ್ಯಾನ ಮಾಡಲು ಯೋಗ್ಯ.

**ನಮನ** – ನಮಸ್ಕಾರ.

**ನವದೇವ** – ಅರಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಸರ್ವಸಾಧು, ಜಿನಧರ್ಮ, ಜಿನಶ್ರುತ, ಜಿನಚೈತ್ಯ ಹಾಗೂ ಜಿನಚೈತ್ಯಾಲಯ ಇವುಗಳನ್ನು ನವದೇವತೆಗಳೆಂದು ಕರೆಯುತ್ತಾರೆ.

**ನವಮಲ** – ಮೂಗಿನ ಮಲ, ಕಿವಿಯ ಮಲ, ಕಣ್ಣಿನ ಮಲ, ಹಲ್ಲಿನ ಮಲ, ಕರುಳಿನ ಮಲ, ಮೂತ್ರ, ರೋಮ, ಬೆವರು ಮತ್ತು ಉಗುರು.

**ನಶಾ** – ಮಾದಕ.

**ನಾಥ** – ಒಡೆಯ.

**ನಾಶಾದೃಷ್ಟಿ** – ಆಸೆಯ ಮೇಲೆ ದೃಷ್ಟಿ ಇರದೇ ಮೂಗಿನ ಅಗ್ರಭಾಗದಲ್ಲಿ ನೇರವಾಗಿ ಅರ್ಥಾತ್ ಮುಚ್ಚಿರದ, ಹೆಚ್ಚು ತೆಗೆದಿರದ ದೃಷ್ಟಿಯು ರಾಗ–ದ್ವೇಷದಿಂದ ದೂರವಿರುವುದನ್ನು ನಾಶಾದೃಷ್ಟಿ ಎಂದು ಕರೆಯುತ್ತಾರೆ.

**ನಿಜ** – ಆತ್ಮ.

**ನಿಜಸುಖ** – ತನ್ನ ಆತ್ಮಸುಖ.

**ನಿಜಾನುಭವ** – ಆತ್ಮಾನುಭೂತಿ.

**ನಿಜ ಒಂದು ಅದೇ ನಿನ್ನದು** – ಇರುವುದು ನಿಮ್ಮದೊಂದೆ ಆತ್ಮ, ಅದೇ ನಿಮ್ಮದು.

**ನಿರ್ಮಲ** – ಕ್ಷೋಭೆಯಿಂದ ರಹಿತ ನಿಶ್ಚಿಂತತೆ.

**ನಿಶ್ಚಲ** – ಚಲನ ರಹಿತ/ಸ್ಥಿರತೆ.

**ನಿದಾನ** – ಮುಂದೆ ಇಂದ್ರ ಮುಂತಾದವರ ಭೋಗ ಸಂಪತ್ತು ಸಿಗಲಿ ಎನ್ನುವ ಪರಿಣಾಮವನ್ನು ನಿದಾನವೆನ್ನುತ್ತಾರೆ.

**ನಿದ್ರಾ** – ನಿದ್ದೆ ಬರುವುದು.

**ನಿಮಿತ್ತ** – ಕಾರ್ಯವಾಗಲು ಸಹಯೋಗಿಯಾಗಿರುವುದು ಅದಿಲ್ಲದೇ ಕಾರ್ಯವಾಗದಿರುವುದು ಅದನ್ನು ನಿಮಿತ್ತವೆನ್ನುತ್ತಾರೆ.

**ನಿರ್ಗ್ರಂಥ** – ಧನ–ಧಾನ್ಯ ಮುಂತಾದ ಪರಿಗ್ರಹಗಳನ್ನು ಗ್ರಂಥವೆಂದು ಹೇಳುತ್ತಾರೆ. ಆದ್ದರಿಂದ ಸಮಸ್ತ ಪರಿಗ್ರಹಗಳಿಂದ ರಹಿತರಾಗಿರುವ ಸಾಧುಗಳನ್ನು ನಿರ್ಗ್ರಂಥರೆಂದು ಕರೆಯುತ್ತಾರೆ.

**ನಿರಂಜನ** – ಕರ್ಮರೂಪಿ ಅಂಜನ ರಹಿತ.

**ನಿವೃತ್ತಿ** – ಬಿಡುಗಡೆ.

**ನಿಷ್ಕಲಂಕ** – ಕರ್ಮ ಕಲಂಕ ರಹಿತ.

**ನಿಶ್ಚಯ** – ಅಭೇದ ಏಕತ್ವ ಅಥವಾ ಪರಸಂಪರ್ಕದಿಂದ ರಹಿತ ಶುದ್ಧಾತ್ಮದಲ್ಲಿ ಲೀನವಾಗುವ ಮುನಿ.

**ನಿಶಿ** – ರಾತ್ರಿ.

**ನಿಷಧ್ಯಾ** – ಗೋವಿನ ಆಸನದಲ್ಲಿ ಕುಳಿತು ನಮಸ್ಕರಿಸುವುದು.

**ನೇಕ** – ಒಳ್ಳೆಯ.

**ನೇಮಿಗಿರಿ** – ಗ್ವಾಲಿಯರ್‌ನ ಗೋಪಾಚಲದ ಈಶಾನ್ಯದಿಕ್ಕಿನಲ್ಲಿ ನೇಮಿನಾಥ ಭಗವಂತರ ತೀರ್ಥ ರಚನೆಯಾಗಿದೆ.

**ಪಂಚಪರಾವರ್ತನ** – ದ್ರವ್ಯ, ಕ್ಷೇತ್ರ, ಕಾಲ, ಭವ ಮತ್ತು ಭಾವರೂಪ ಪಂಚಪರಾವರ್ತನ.

**ಪಂಚಾಚಾರ** – ದರ್ಶನಾಚಾರ, ಜ್ಞಾನಾಚಾರ, ಚಾರಿತ್ರಾಚಾರ, ತಪಾಚಾರ ಮತ್ತು ವೀರ್ಯಾಚಾರ ಇವುಗಳನ್ನು ಪಂಚಾಚಾರಗಳೆಂದು ಹೇಳುತ್ತಾರೆ.

**ಪಂಚಾಸ್ತಿಕಾಯ** – ಜೀವ, ಪುದ್ಗಲ, ಧರ್ಮ, ಅಧರ್ಮ ಮತ್ತು ಆಕಾಶ ಇವು ಪಂಚದ್ರವ್ಯಗಳು.

**ಪದಸ್ಥ** – ಒಂದು ಅಕ್ಷರದಿಂದ ಪ್ರಾರಂಭಿಸಿ ಅನೇಕ ಪ್ರಕಾರದ ಪಂಚಪರಮೇಷ್ಠಿವಾಚಕ ಪವಿತ್ರ ಮಂತ್ರ ಮುಂತಾದ ಪದಗಳ ಅವಲಂಬನದಿಂದ ಮಾಡುವ ಧ್ಯಾನವು ಪದಸ್ಥಧ್ಯಾನವಾಗಿದೆ.

**ಪದ್ಮಾಸನ** – ಕೆಳಗೆ ಕುಳಿತು ಎರಡು ಪಾದಗಳನ್ನು ಒಂದರ ಮೇಲೆ ಒಂದು ಹಾಕಿ ಕೂರುವುದು ಪದ್ಮಾಸನ.

**ಪರಮೇಷ್ಠಿ** – ಪರಮ ಪದದಲ್ಲಿರುವವರನ್ನು ಪರಮೇಷ್ಠಿಗಳೆಂದು ಹೇಳುತ್ತಾರೆ.

**ಪರಮ ತತ್ತ್ವ** – ಶುದ್ಧ ಜೀವ ತತ್ತ್ವ.

**ಪರಮ ಶಾಂತಿ** – ಉತ್ಕೃಷ್ಟ ಆನಂದ.

**ಪರಮಾರ್ಥ** – ಮೋಕ್ಷವೇ ಪ್ರಯೋಜನವಾಗಿರುವುದು ಪರಮಾರ್ಥವಾಗಿದೆ.

**ಪರಮಾತ್ಮ** – ಉತ್ಕೃಷ್ಟ ಆತ್ಮಾರೂಪ ಭಗವಂತನನ್ನು ಪರಮಾತ್ಮನೆಂದು ಕರೆಯುತ್ತಾರೆ.

**ಪರಿಗ್ರಹಾನಂದ** – ಪರಿಗ್ರಹಗಳಲ್ಲಿ ಆನಂದ ಹೊಂದುವುದು.

**ಪರೀಷಹ** – 25 ತರಹದ ಬಾಧೆಗಳು.

**ಪಾಕ** – ಫಲ ದೊರೆಯುವುದು ಅಥವಾ ಫಲಶ್ರುತಿ.

**ಪಾವಾಪುರ** – ಇಲ್ಲಿಂದ ಇಪ್ಪತ್ನಾಲ್ಕನೆ ತೀರ್ಥಂಕರ ಮಹಾವೀರ ಭಗವಂತರು ಮೋಕ್ಷಕ್ಕೆ ಹೋಗಿದ್ದಾರೆ. ಇದು ಬಿಹಾರಿನಲ್ಲಿದೆ.

**ಪಂಚಪಾಪಗಳು** – ಹಿಂಸೆ, ಸುಳ್ಳು, ಕಳ್ಳತನ, ಕುಶೀಲ ಮತ್ತು ಪರಿಗ್ರಹ ಇವೈದು ಪಂಚಪಾಪಗಳಾಗಿವೆ.

**ಪಿಂಡಸ್ಥ** – ನಿಜಾತ್ಮನ ಧಾರಣೆಗಳ ಮಾಧ್ಯಮದಿಂದ ಚಿಂತನೆ ಮಾಡುವುದು ಪಿಂಡಸ್ಥ ಧ್ಯಾನವಾಗಿದೆ.

**ಪೀಡಾಚಿಂತನೆ** – ಶರೀರದ ಪೀಡೆ ಅಥವಾ ರೋಗ ಮುಂತಾದವುಗಳ ಪೀಡೆಯಾದಾಗ ಅದು ಯಾವಾಗ ಬಿಡುಗಡೆಯಾದೀತು ಎನ್ನುವ ಚಿಂತನೆ ಪೀಡಾ ಚಿಂತನ ಆರ್ತಧ್ಯಾನವಾಗಿದೆ.

**ಪುರಾಕೃತಿ** – ಹಿಂದೆ ಮಾಡಿದ.

**ಪೃಥಕ್ತ್ವ ವಿತರ್ಕ ವಿಚಾರ** – ಈ ಧ್ಯಾನದಲ್ಲಿ ಮಹಾಮುನಿಯು ಸಮಸ್ತ ರಾಗ ಇತ್ಯಾದಿ ವಿಕಲ್ಪಗಳಿಂದ ರಹಿತರಾಗಿ ಅನೇಕ ದ್ರವ್ಯಗಳ ಬೇರೆ ಬೇರೆ ಅವಲಂಬನದಿಂದ ಅರ್ಥ, ವ್ಯಂಜನ ಮತ್ತು ಯೋಗಗಳಲ್ಲಿ ಪರಿವರ್ತನೆ ಮಾಡುತ್ತಾ ಶ್ರುತಜ್ಞಾನದ ಮಾಧ್ಯಮದಿಂದ ಧ್ಯಾನ ಮಾಡುತ್ತಾರೆ. ಇದು ಮೊದಲ ಶುಕ್ಲಧ್ಯಾನವಾಗಿದೆ.

**ಪೃಥ್ವಿಧಾರಣೆ** – ಈ ಭೂಮಿಯ ಮೇಲೆ ನಾನು ಕ್ಷೀರಸಾಗರದ ಮಧ್ಯದಲ್ಲಿ

ಇರುವ ಪರ್ವತದ ಶಿಖರದ ಮೇಲೆ ಸಾಧು ಆಗಿ ಕುಳಿತಿದ್ದೇನೆ ಎಂದು ಚಿಂತನೆ ಮಾಡುವುದು.

**ಪ್ರಕೃತಿ** – ಸ್ವಾಭಾವಿಕ ವಾತಾವರಣ ರೂಪದ ಪರ್ಯಾವರಣ.

**ಪ್ರತಿಕ್ರಮಣ** – ಪಾಪಗಳ ತೊಳೆಯುವಿಕೆ.

**ಪ್ರತ್ಯಾಖ್ಯಾನ** – ತ್ಯಾಗ.

**ಪ್ರತಿಪಾತಿ** – ಬೀಳುವಂತಹ.

**ಪ್ರಭು** – ಸ್ವಾಮಿ, ಭಗವಂತ.

**ಪ್ರಮತ್ತಸಂಯತ** – ಮುನಿಯ ಪ್ರಮಾದ ಅವಸ್ಥೆ.

**ಪ್ರಮಾದ** – ಆಲಸ್ಯ ಅಥವಾ ಆಧ್ಯಾತ್ಮಿಕ ದೃಷ್ಟಿಕೋನದಿಂದ ಸ್ಪರ್ಶ, ರಸನ, ಘ್ರಾಣ, ಚಕ್ಷು ಹಾಗೂ ಶ್ರೋತ ರೂಪದ 5 ಇಂದ್ರಿಯಗಳು; ಕ್ರೋಧ, ಮಾನ, ಮಾಯಾ, ಲೋಭ ರೂಪದ 4 ಕಷಾಯಗಳು; ಸ್ತ್ರೀ ಕಥೆ, ಭೋಜನ ಕಥೆ, ರಾಜ ಕಥೆ ಹಾಗೂ ಕಳ್ಳರ ಕಥೆ ರೂಪದ 4 ವಿಕಥೆಗಳು ಹಾಗೂ ನಿದ್ರೆ ಮತ್ತು ಸ್ನೇಹ 2 ರೂಪಗಳು – ಇಂತಹ 15 ಪ್ರಮಾದಗಳಲ್ಲಿ ಆತ್ಮಪರಿಣಾಮ ಪ್ರಯುಕ್ತನಾಗುವುದು ಪ್ರಮಾದ ಎನ್ನಲಾಗುತ್ತದೆ.

**ಪ್ರಮೋದ** – ಹರ್ಷಿತನಾಗುವುದು.

**ಪ್ರಾಸುಕ** – ನೀರು ಮತ್ತು ವನಸ್ಪತಿ ಮುಂತಾದವುಗಳನ್ನು ವಿಶೇಷ ಪ್ರಕ್ರಿಯೆಯಿಂದ (ಬಿಸಿ ಇತ್ಯಾದಿ ಮಾಡಿ) ಜೀವಗಳಿಂದ ರಹಿತವಾದ ಪದಾರ್ಥವನ್ನು ಪ್ರಾಸುಕ ಪದಾರ್ಥವೆನ್ನುತ್ತಾರೆ.

**ಫಲಶ್ರುತಿ** – ಸತ್ಕರ್ಮ ವಿಶೇಷದ ಫಲ ತಿಳಿಸುವ ವಾಕ್ಯ.

**ಬಂಧ** – ಆತ್ಮನೊಂದಿಗೆ ಕರ್ಮದ ಏಕ ಕ್ಷೇತ್ರಾವಗಾಹ ಸಂಬಂಧವಾಗುವುದನ್ನು ಬಂಧವೆಂದು ಹೇಳುತ್ತಾರೆ.

**ಬಾಧಕ** – ತಮಗೆ ಬಾಧೆಯನ್ನುಂಟು ಮಾಡುವ ವಸ್ತುವನ್ನು ಬಾಧಕವೆಂದು ಹೇಳುತ್ತಾರೆ.

**ಬಾರಹವೇ ಗುಣಸ್ಥಾನ** – (ಹನ್ನೆರಡನೆ ಗುಣಸ್ಥಾನ) ಮೋಹನೀಯ

ಕರ್ಮವು ಇಲ್ಲದಾದಾಗ ಯಾರ ಮನಸ್ಸು ಸ್ಫಟಿಕ ಮಣಿಯಂತೆ ನಿರ್ಮಲವಾಗಿ ಸ್ವಚ್ಛವಾಗಿರುವ ನಿರ್ಗ್ರಂಥ ಸಾಧುವಿಗೆ ವೀತರಾಗಿಗಳು, ಕ್ಷೀಣಕಷಾಯ ಗುಣಸ್ಥಾನವುಳ್ಳ ಸಂಯಮಿ ಎಂದು ಹೇಳುತ್ತಾರೆ.

**ಬ್ರಹ್ಮಾ** – ಆತ್ಮನನ್ನು ತಿಳಿದವನು.

**ಬುದ್ಧ** – ಜ್ಞಾನಿ.

**ಬೋಧಗಮ್ಯ** – ತಿಳಿಯಲು ಯೋಗ್ಯ.

**ಭವ** – ಆಯು ಕರ್ಮದ ಉದಯದಿಂದ ಜೀವವು ಮನುಷ್ಯ, ದೇವ ಇತ್ಯಾದಿ ಗತಿಗಳಲ್ಲಿ ಪರ್ಯಾಯವಾಗುವುದನ್ನು ಭವ ಎಂದು ಹೇಳುತ್ತಾರೆ.

**ಭವ್ಯ** – ಮೋಕ್ಷಕ್ಕೆ ಹೋಗುವ ಯೋಗ್ಯತೆ ಇರುವವರನ್ನು ಭವ್ಯ ಎನ್ನುತ್ತಾರೆ.

**ಭವವಾಂಛಾ** – ಲೌಕಿಕ ಅಥವಾ ಸಾಂಸಾರಿಕ ಬಯಕೆಗಳು

**ಭಾವ** – ಪರಿಣಾಮ

**ಭಾವನ** – ಚಿಂತನೆ ಮಾಡಲು ಯೋಗ್ಯವಾದ ಶುಭ ಭಾವನೆಗಳು

**ಭಾವನೆಗಳು** – ಶಬ್ದಕೋಶದ ಕೊನೆಯಲ್ಲಿ ನೋಡಿರಿ 70 ಪ್ರಕಾರದ ಭಾವನೆಗಳ ವರ್ಣನೆಯಿದೆ.

**ಭೋಗ** – ಒಂದೇ ಬಾರಿಗೆ ಉಪಯೋಗಿಸಲು ಬರುವ ವಸ್ತುಗಳನ್ನು ಭೋಗವೆನ್ನುತ್ತಾರೆ. ಉದಾ – ಭೋಜನ, ಗಂಧ, ಮಾಲೆ.

**ಭೋಗೋಪ ಭೋಗ ಪರಿಮಾಣ** – ಭೋಗ ಮತ್ತು ಪುನಃ ಭೋಗಿಸುವ ವಸ್ತ್ರಾಲಂಕಾರ ಮುಂತಾದವುಗಳ ಪ್ರಮಾಣ ಮಿತಿ ಹಾಕಿಕೊಳ್ಳುವುದು.

**ಭೋಗಿ** – ಭೋಗಗಳನ್ನು ಭೋಗಿಸುವವನು.

**ಭೋಜ** – ಭೋಜನ, (ಖಾದ್ಯ, ಸ್ವಾದ, ಲೇಹ್ಯ ಮತ್ತು ಪೇಯ)

**ಮನ** – ಐದು ಇಂದ್ರಿಯಗಳಿಂದ ತಿಳಿದ ಪದಾರ್ಥಗಳನ್ನು ಗುಣ–ದೋಷಗಳ ವಿಚಾರ ಹಾಗೂ ಸ್ಮರಣೆ ಮಾಡುವುದು ಮನವಾಗಿದೆ. ದ್ರವ್ಯಮನವು ಅಷ್ಟದಳ ಕಮಲದಂತೆ ಶರೀರದ ಮುಖ್ಯ ಸ್ಥಳದಲ್ಲಿ (ಹೃದಯ ಬಾಗದಲ್ಲಿ) ಆಗುವ ಒಂದು ಪುದ್ಗಲ ರೂಪದ ಅಸ್ಥಾಯಿ

ರಚನೆಯಾಗಿದೆ. ಅದನ್ನು ಹೃದಯ, ಅಂತಃಕರಣ ಇತ್ಯಾದಿ ಎಂಬುದಾಗಿ ಹೇಳುತ್ತಾರೆ.

**ಮಝ್ಝರ** – ಮಧ್ಯದಲ್ಲಿ, ನಡುವೆ.

**ಮಹದ್** – ಸರ್ವ ಶ್ರೇಷ್ಠ.

**ಮರ್ಯಾದಿತ** – ಮರ್ಯಾದೆ(ಕಾಲಮಿತಿ)ಯಿಂದ ಕೂಡಿದ ಪದಾರ್ಥ. ಬೇಸಿಗೆಯಲ್ಲಿ ಹಿಟ್ಟಿನ ಮರ್ಯಾದೆ 5 ದಿನ, ಮಳೆಗಾಲದಲ್ಲಿ 3 ದಿನ, ಚಳಿಗಾಲದಲ್ಲಿ 7 ದಿನಗಳದ್ದಾಗಿರುತ್ತದೆ. ಹೀಗೆಯೇ ಇತರ ವಸ್ತುಗಳ ಮರ್ಯಾದೆಯನ್ನು ಕೊನೆಯಲ್ಲಿ ನೀಡಲಾಗಿದೆ ಪಟ್ಟಿಯನ್ನು ನೋಡಿರಿ.

**ಮಾರುತ** – ಹವಾ.

**ಮಾವಾ** – ಖೋವಾ.

**ಮಿಥ್ಯಾತ್ವ** – ಕುತತ್ವ ಶ್ರದ್ಧೆ.

**ಮಿಥ್ಯಾದೃಷ್ಟಿ** – ಸರಾಗಿ ಅಥವಾ ಕುತತ್ವಗಳ ಮೇಲೆ ಶ್ರದ್ಧೆ ಇಟ್ಟಿರುವ ಆತ್ಮ.

**ಮೀಮಾಂಸಾ** – ಗಂಭೀರ ಮನನ ಹಾಗೂ ವಿಚಾರ.

**ಮುನಿ** – 'ಮೌನಂ ಧಾರತೀತಿ ಮುನಿಃ' ಪಾಪದೊಂದಿಗೆ ಮೌನರಾಗಿರು–ವವರನ್ನು ಮುನಿ ಎನ್ನುತ್ತಾರೆ.

**ಮುನಿವರ** – ಮುನಿಗಳಲ್ಲಿ ಶ್ರೇಷ್ಠರಾಗಿರುವವರು 'ಮುನಿವರ' ರಾಗಿದ್ದಾರೆ.

**ಮುಕ್ತಿ** – ಕರ್ಮಗಳಿಂದ ರಹಿತನಾಗುವುದು 'ಮುಕ್ತಿ'ಯಾಗಿದೆ.

**ಮೃಷಾನಂದ** – ಸುಳ್ಳಿನಲ್ಲಿ ಆನಂದ ಪಡೆಯುವುದು.

**ಮೃತ್ಯು** – ಶರೀರದಿಂದ ಆತ್ಮ ಹೊರಟು ಹೋಗುವುದು.

**ಮೈತ್ರಿ** – ಸ್ನೇಹ, ಮಿತ್ರತ್ವ, ತನ್ನವರೆಂಬ ಭಾವನೆ.

**ಮೋಕ್ಷ** – ಸಮಸ್ತ ಕರ್ಮಗಳಿಂದ ರಹಿತ ಆತ್ಮನ ಪರಮ ವಿಶುದ್ಧಿ ಅವಸ್ಥೆಯ ಹೆಸರು ಮೋಕ್ಷ ಎಂದಾಗಿದೆ.

**ಮೋಕ್ಷಮಾರ್ಗ** – ಮಗ ಎಂದರೆ ಮಾರ್ಗ, ಸಮ್ಯಗ್ದರ್ಶನ, ಸಮ್ಯಗ್‌ಜ್ಞಾನ

ಮತ್ತು ಸಮ್ಯಕ್ಚಾರಿತ್ರ ಈ ಮೂರರ ಏಕತೆಯು ಮೋಕ್ಷಮಗ ಅಥವಾ ಮೋಕ್ಷಮಾರ್ಗವಾಗಿದೆ.

**ಮೌನ** – ಪಾಪ ವಚನ ಅಥವಾ ವಚನ ಕ್ರಿಯೆಯನ್ನು ತಡೆಯುವುದು.

**ಯಥಾಖ್ಯಾತ** – ಸಮಸ್ತ ಮೋಹನೀಯ ಕರ್ಮಗಳ ಉಪಶಾಂತ ಅಥವಾ ಕ್ಷೀಣವಾದಾಗ ಆಗುವ ಸ್ವಾಭಾವಿಕ ವೀತರಾಗ ಚಾರಿತ್ರವನ್ನು ಯಥಾಖ್ಯಾತ ಚಾರಿತ್ರವೆಂದು ಹೇಳುತ್ತಾರೆ.

**ಯತಿ** – ಸದಾಕಾಲ ಯತ್ನ ಅಥವಾ ಪುರುಷಾರ್ಥ ಮಾಡುವ ಸಾಧುವನ್ನು ಯತಿ ಎಂದು ಕರೆಯುತ್ತಾರೆ.

**ಯೋಗ** – ಮನ,ವಚನ ಮತ್ತು ಕಾಯಗಳಿಂದ ಆಗುವ ಆತ್ಮಪ್ರದೇಶಗಳ ಪರಿಸ್ಪಂದನವನ್ನು ಯೋಗವೆನ್ನುತ್ತಾರೆ.

**ಯೋಗಿ** – ಯೋಗಗಳನ್ನು ಧಾರಣೆ ಮಾಡುವವರು (ಮುನಿ ಮಹಾರಾಜರು ಸಾಧು ಮುಂತಾದವರು)

**ರಂಕ** – ಬಡವ

**ರತ್ನತ್ರಯ** – ಸಮ್ಯಗ್ದರ್ಶನ, ಸಮ್ಯಕ್‌ಜ್ಞಾನ ಮತ್ತು ಸಮ್ಯಕ್ಚಾರಿತ್ರ ಈ ಮೂರು ಗುಣಗಳನ್ನು ರತ್ನತ್ರಯವೆಂದು ಕರೆಯುತ್ತಾರೆ.

**ರಸನಾ** – ನಮಗೆ ಸ್ವಾದವನ್ನು ತಿಳಿಸುವ ರಸನಾ ಇಂದ್ರಿಯವಾಗಿದೆ.

**ರಾಜಸಿಕ** – ಪೂರಿ, ಪಕ್ವಾನ್ನ ಇತ್ಯಾದಿ ಗರಿಷ್ಠ ಪದಾರ್ಥಗಳನ್ನು ರಾಜಸಿಕ ಭೋಜನವೆನ್ನುತ್ತಾರೆ.

**ರಾಜು** – ರಜ್ಜು, ಒಂದು ಅಲೌಕಿಕ ಅಳತೆ.

**ರೂಪಸ್ಥ** – ಆತ್ಮನು ಸದಾಕಾಲ ಚೇತನರೂಪಿಯಾಗಿದ್ದು ಜ್ಞಾನ, ದರ್ಶನ ಸ್ವಭಾವದಿಂದ ಕೂಡಿದ್ದಾನೆಂದು ಚಿಂತನೆ ಮಾಡುವುದು ರೂಪಸ್ಥ ಧ್ಯಾನವಾಗಿದೆ.

**ರೂಪಾತೀತ** – ಆತ್ಮನು ಕರ್ಮಕಲಂಕದಿಂದ ರಹಿತನಾಗಿದ್ದಾನೆ. ಮೂರು ಕಾಲದಲ್ಲಿ ಶುದ್ಧನಾಗಿದ್ದಾನೆ. ನಿರಂಜನನಾಗಿದ್ದಾನೆ. ಹೀಗೆ ಚಿಂತನೆ ಮಾಡುವುದು ರೂಪಾತೀತ ಧ್ಯಾನವಾಗಿದೆ.

**ರೌದ್ರಧ್ಯಾನ** – ರುದ್ರದ ಅರ್ಥ ಕ್ರೂರ, ಕ್ರೂರ ಆಶಯಗಳಿಂದ ಕೂಡಿದ ಪರಿಣಾಮ ಹೊಂದುವುದು ರೌದ್ರಧ್ಯಾನವಾಗಿದೆ.

**ಲೋಕ** – ಅಲ್ಲಿ ಆರು ದ್ರವ್ಯಗಳನ್ನು ನೋಡಬಹುದು.

**ಲಖಚೌರಾಸಿಯೋನಿ** – (84 ಲಕ್ಷ ಯೋನಿ) ಜೀವನು ಜನ್ಮ ತಾಳುವ ಸ್ಥಾನಕ್ಕೆ ಯೋನಿ ಎನ್ನುತ್ತಾರೆ. ಅವು 84 ಲಕ್ಷಗಳಿವೆ.

**ವಜ್ರವೃಷಭನಾರಾಚ ಸಂಹನನ** – ನಿಜ(ಒಳ್ಳೆಯ) ಕರ್ಮದ ಉದಯದಿಂದ ಶರೀರದಲ್ಲಿ ವಜ್ರದಂತೆ ಅಭೇದ್ಯ ಮೂಳೆಗಳ ಮೇಲೆ ವಜ್ರದ ವೇಷ್ಠನವಿರುತ್ತದೆ ಹಾಗೂ ಮೂಳೆಗಳು ಪರಸ್ಪರ ವಜ್ರಮಯ ನಾರಾಚ ಅರ್ಥಾತ್ ಕೀಲುಗಳಿಂದ ಜೋಡಿಸಿರುತ್ತವೆ. ಇಂತಹ ಮೂಳೆಗಳನ್ನು ಸದೃಢ ಬಂಧನವನ್ನು ವಜ್ರವೃಷಭ ನಾರಾಚ ಸಂಹನನ ಎನ್ನುತ್ತಾರೆ.

**ವಜ್ರಾಸನ** – ಎರಡೂ ಕಾಲುಗಳನ್ನು ಮಡಿಚಿ, ಆ ಕಾಲುಗಳ ಮೇಲೆ ನೇರವಾಗಿ ಕುಳಿತುಕೊಳ್ಳುವುದು.

**ವಂದನ** – ವೀತರಾಗರಿಗೆ ನಮನ.

**ವರ್ಧಮಾನ ಮಂದಿರ ಕಿಲಾ** – ಗ್ವಾಲಿಯರ್‌ನ ಗೋಪಗಿರಿಯಲ್ಲಿ ಕೋಟೆಯ ಪರಿಸರದಲ್ಲಿ (ಸಿಂಧಿಯಾ ಶಾಲೆಯ ಮೈದಾನದಲ್ಲಿರುವ ಮಂದಿರ) ಮೊದಲು ಒಂದು ಚಿನ್ನದ ಪ್ರತಿಮೆ ಇದ್ದಿತು. ಈಗಲೂ ಆ ಮಂದಿರದ ದ್ವಾರದಲ್ಲಿ ಮೊದಲ ಮಹಡಿಯಲ್ಲಿ ಪಾರ್ಶ್ವನಾಥ ಹಾಗೂ ಮೂರನೇ ಮಹಡಿಯಲ್ಲಿ ಭಗವಾನ್ ಮಹಾವೀರರ ದಿಗಂಬರ ಜೈನ ಪ್ರತಿಮೆಗಳಿವೆ.

**ವಯ ಜೇಷ್ಠ** – ಚಿರಂಜೀವಿ ಅಥವಾ ದೀರ್ಘಾಯುಷಿ.

**ವಸ್ತುಸ್ವಭಾವ** – ವಸ್ತುವಿನ ಗುಣಧರ್ಮವನ್ನು ವಸ್ತು ಸ್ವಭಾವವೆನ್ನುತ್ತಾರೆ. ಉದಾ – ನೀರಿನ ಗುಣಧರ್ಮ ಶೀತಲತೆ. ಅಗ್ನಿಯ ಸ್ವಭಾವ ಉಷ್ಣತೆ ಇತ್ಯಾದಿ

**ವಾಯುಧಾರಣೆ** – ಸುಟ್ಟು ಹೋದ ಕರ್ಮಗಳ ಬೂದಿಯನ್ನು ತೀವ್ರಗಾಳಿ ಹಾರಿಸಿಕೊಂಡು ಹೋಗುತ್ತಿರುವಂತೆ ಚಿಂತನೆ ಮಾಡುವುದು.

**ವಿಪಾಕ ವಿಚಯ** – ಸಂಸಾರದಲ್ಲಿ ಜೀವಗಳಿಗೆ ದೊರೆಯುವ ಪುಣ್ಯ ಮತ್ತು ಪಾಪಕರ್ಮಗಳ ಫಲ ದೊರಕುವಂತೆ ಚಿಂತನೆ ಮಾಡುವುದು ವಿಪಾಕ ವಿಚಯ ಧರ್ಮಧ್ಯಾನವಾಗಿದೆ.

**ವಿರಂಗ** – ವಿಕಲ್ಪಗಳಿಂದ ರಹಿತವಾದ ನಿರ್ವಿಕಲ್ಪತೆ

**ವಿದ್ಯಾಗುರು** – ಸಂತ ಶಿರೋಮಣಿ ಆಚಾರ್ಯ ಶ್ರೀ 108 ವಿದ್ಯಾಸಾಗರ ಮಹಾರಾಜರಿಂದ ಆಚಾರ್ಯ ಶ್ರೀ 108 ಆರ್ಜವಸಾಗರರು ದೀಕ್ಷಿತರಾಗಿದ್ದಾರೆ.

**ವಿದ್ಯಾಧರ** – ಆಕಾಶದಲ್ಲಿ ಓಡಾಡುವ ವಿಜಯಾರ್ಧ ಶ್ರೇಣಿಯಲ್ಲಿ ಇರುವ ಮನುಷ್ಯ.

**ವಿಷಯ ಪವನ** – ಇಂದ್ರಿಯಗಳ ಮೂಲಕ ತಿಳಿಯಲು ಯೋಗ್ಯವಾದ ಪದಾರ್ಥಗಳನ್ನು ವಿಷಯವೆನ್ನುತ್ತಾರೆ. ಪವನ ಎಂದರೆ ಗಾಳಿ.

**ವೀತರಾಗ** – ಆತ್ಮಸಾಧನೆಯಿಂದ ರಾಗ–ದ್ವೇಷಗಳನ್ನು ನಾಶ ಮಾಡಿದವರನ್ನು ವೀತರಾಗ ಎನ್ನುತ್ತಾರೆ.

**ವೀತರಾಗಿ** – ರಾಗ–ದ್ವೇಷಗಳಿಂದ ರಹಿತರಾದ ಆತ್ಮನು ವೀತರಾಗಿ ಆಗಿದ್ದಾನೆ.

**ವೀರನಿರ್ವಾಣ** – ಭ. ಮಹಾವೀರರ ಮೋಕ್ಷದಿನ (ದೀಪಾವಳಿಯಿಂದ ಹೊಸ ನಿರ್ವಾಣ ವರ್ಷ ಪ್ರಾರಂಭವಾಗುತ್ತದೆ).

**ವೀರಾಸನ** – ಪದ್ಮಾಸನವನ್ನು ಚಿಕ್ಕದಾಗಿ ಮಾಡಿಕೊಂಡು, ಕಾಲಿನ ಬೆರಳುಗಳನ್ನು ತೊಡೆಯ ಮೇಲೆ ಒತ್ತಿ ಕುಳಿತುಕೊಳ್ಳುವುದು.

**ವೃಷಭಾಂಚಲ** – ಗ್ವಾಲಿಯರ್ ಕೋಟೆಯಲ್ಲಿ ಉರವಾಹಿ ಬಾಗಿಲಿನಿಂದ ಏರುವಾಗ ಮಧ್ಯದಲ್ಲಿ 84 ಅಡಿ ಆದಿನಾಥರ ಪ್ರತಿಮೆ ಖಡ್ಗಾಸನದಲ್ಲಿದ್ದು ಆ ಪರಿಸರವನ್ನು ವೃಷಭಾಚಲವೆನ್ನುತ್ತಾರೆ.

**ವ್ಯಂಜನ** – ವಚನ, ಶಬ್ದಶಕ್ತಿ ಅವುಗಳಿಂದ ಅರ್ಥ ಉಪಲಕ್ಷಿತವಾಗಿ ಆ ವಸ್ತುವು ಧ್ಯಾನ ಯೋಗ್ಯವಾಗುವಂತಹದು.

**ವ್ಯುಪರತಕ್ರಿಯಾ ನಿವೃತ್ತಿ** – ಕೇವಲಿ ಭಗವಂತರಿಂದ ಶ್ವಾಸೋಚ್ಛ್ವಾಸರೂಪ ಕ್ರಿಯೆಯ ಹಾಗೂ ಸಮಸ್ತ ಮನ–ವಚನ–ಕಾಯಗಳ ಕ್ರಿಯೆಗಳ ನಿರೋಧ

ಮಾಡಿದಾಗ ಅದನ್ನು ವ್ಯಪರತಕ್ರಿಯಾ ನಿವೃತ್ತಿ ಹೆಸರಿನ ನಾಲ್ಕನೇ ಶುಕ್ಲಧ್ಯಾನವೆನ್ನುತ್ತಾರೆ.

**ಶಿವಮಂಜಿಲ** – ಮೋಕ್ಷರೂಪದ ಅರಮನೆ.

**ಶಿವಧಾಮ** – ಸಿದ್ಧರ ಸ್ಥಾನ (ಲೋಕದ ಮೇಲಿರುವ ಸಿದ್ಧಶಿಲೆ).

**ಶುಕ್ಲ ಧ್ಯಾನ** – ರಾಗಾದಿ ವಿಕಲ್ಪ ನಷ್ಟವಾದಾಗ ಆತ್ಮನಲ್ಲಿ ಉಂಟಾಗುವ ನಿರ್ವಿಕಲ್ಪ ಧ್ಯಾನವನ್ನು ಶುಕ್ಲ ಧ್ಯಾನವೆನ್ನುತ್ತಾರೆ.

**ಶುದ್ಧೋಪಯೋಗ** – ಉಪಯೋಗವನ್ನು ಅಂತರಂಗದಲ್ಲಿರಿಸುವುದು ಶುದ್ಧೋಪಯೋಗವಾಗಿದೆ. ಆತ್ಮನಲ್ಲಿ ಒಂದಾಗುವುದು.

**ಶುಭಚಂದ್ರಚಾರ್ಯ** – ಭರ್ತೃಹರಿಯ ದೊಡ್ಡ ಅಣ್ಣ ದಿಗಂಬರ ನಿರ್ಗ್ರಂಥಾಚಾರ್ಯ.

**ಶುಭ ಧ್ಯಾನಿ** – ಪ್ರಶಸ್ತ ಅಥವಾ ಶ್ರೇಷ್ಠ ರೂಪ ಧರ್ಮ ಧ್ಯಾನ ಹಾಗೂ ಶುಕ್ಲ ಧ್ಯಾನ ಮಾಡುವ ಆತ್ಮ.

**ಶುಭರೂಪ** – ಮಂಗಲ ಸ್ವರೂಪ.

**ಶ್ವೇತಾಸನ** – ಧವಲಪೀಠ.

**ಶೋಕ** – ಉಪಕಾರ ಮಾಡುವವರೊಂದಿಗೆ ಸಂಬಂಧ ಬಿಟ್ಟು ಹೋದಾಗ ಮನಸ್ಸಿನಲ್ಲಿ ಆಗುವ ವಿಕಲ್ಪತೆಗೆ ಶೋಕವೆನ್ನುತ್ತಾರೆ.

**ಶೋಧಿತ** – ಶೋಧನೆ ಮಾಡಿ ಅಥವಾ ನೋಡಿ ಮಾಡಿರುವುದು.

**ಶ್ರುತ** – ಶಾಸ್ತ್ರ.

**ಶ್ರೇಷ್ಠ** – ಸಾಹುಕಾರ.

**ಸಚ್ಚಾ ಸೌಖ್ಯ** – (ನಿಜವಾದ ಸುಖ) ದುಃಖವಿಲ್ಲದಿರುವುದು ನಿಜವಾದ ಸುಖವಾಗಿದೆ.

**ಸದ್ಗುಣ ಗಣ** – ಉತ್ತಮಗುಣಗಳ ಸಮೂಹ.

**ಸಪ್ತತತ್ವ** – ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರೆ ಮತ್ತು ಮೋಕ್ಷ.

**ಸಮ್ಯಕ್** – ಸಮೀಚೀನ ಅಥವಾ ಸತ್ಯವಾದದ್ದು.

**ಸಂಗ** – ಪರಿಗ್ರಹ.

**ಸಂಯತಸಂಯತ** – ಅಣುವ್ರತಿ ಅಥವಾ ದೇಶಸಂಯಮಿ.

**ಸಂಯಮ** – ಮನ, ವಚನ, ಕಾಯಗಳ ಅಶುಭ ಪ್ರವೃತ್ತಿಗಳ ತ್ಯಾಗ ಮಾಡುವುದು ಹಾಗೂ ಇಂದ್ರಿಯಗಳನ್ನು ವಶದಲ್ಲಿ ಇಡುವುದು ಸಂಯಮವಾಗಿದೆ.

**ಸಂಯಮ ಸುಖ** – ತ್ಯಾಗದಲ್ಲಿ ಆನಂದ.

**ಸಂಯೋಗ** – ಮಿಲನ/ಸಂಪರ್ಕ.

**ಸಂವೇಗ** – ದುಃಖಮಯ ಸಂಸಾರದ ಪಾಪಗಳಿಂದ ಯಾವಾಗಲೂ ಭಯ ಹೊಂದಿರುವುದು 'ಸಂವೇಗ'ವಾಗಿದೆ.

**ಸಂಸಾರ** – 'ಸಂಸರತೀತಿ ಸಂಸಾರಃ' ಈ ಜೀವದ ದೇವ, ಮನುಷ್ಯ, ತಿರ್ಯಂಚ ಮತ್ತು ನರಕ ಈ ನಾಲ್ಕೂ ಗತಿಗಳಲ್ಲಿ ಆಗುವ ಭ್ರಮಣೆಯನ್ನು 'ಸಂಸಾರ'ವೆನ್ನುತ್ತಾರೆ.

**ಸಂಸರ್ಗ** – ಸಂಬಂಧ ಅಥವಾ ಅಂಟುವಿಕೆ.

**ಸಂಸ್ಥಾನ ವಿಚಯ** – ಮೂರು ಲೋಕದ ರಚನೆ ಮತ್ತು ಅದರ ಪ್ರಮಾಣ ಭೇದ ಮುಂತಾದ ಮತ್ತು ಶುದ್ಧ ದ್ರವ್ಯಗಳ ಚಿಂತನೆ ಮಾಡುವುದು ಸಂಸ್ಥಾನ ವಿಚಯ ಧರ್ಮಧ್ಯಾನವಾಗಿದೆ.

**ಸಂಹನನ** – ಮೂಳೆಗಳ ವಿಶೇಷ ಶಕ್ತಿಗೆ ಸಂಹನನ ಎನ್ನುತ್ತಾರೆ.

**ಸತ್ಯೋಗ** – ಉತ್ತಮ ಯೋಗ.

**ಸಪ್ತ ವ್ಯಸನ** – ಜೂಜು, ಕಳ್ಳತನ, ಬೇಟೆ, ಮಾಂಸ, ಮಧ್ಯ, ಪರಸ್ತ್ರೀ–ಸೇವನೆ ಮತ್ತು ವೇಶ್ಯಾಗಮನ.

**ಸಮ** – ಸಮ್ಯಕ್ ಅಥವಾ ಸತ್ಯವಾದ ಅಥವಾ ಸುಖ–ದುಃಖಗಳಲ್ಲಿ ಶತ್ರು–ಮಿತ್ರ ಇತ್ಯಾದಿಗಳಲ್ಲಿ ಸಮಾನಭಾವ ಹೊಂದಿರುವುದನ್ನು 'ಸಮ'ವೆನ್ನುತ್ತಾರೆ.

**ಸಮತಾ** – ಶತ್ರು–ಮಿತ್ರ, ಸುಖ–ದುಃಖ, ಲಾಭ–ಅಲಾಭ ಮತ್ತು ಜಯ–ಪರಾಜಯ ಇತ್ಯಾದಿಗಳಲ್ಲಿ ಹರ್ಷ–ವಿಷಾದ ಹೊಂದದಿರುವುದು 'ಸಮತಾ' ಆಗಿದೆ.

**ಸಮಕಿತ** – ಸಮ್ಯಗ್ದರ್ಶನ.

**ಸಮದರ್ಶನ** – ಸಮ್ಯಗ್ದರ್ಶನ.

**ಸಮಾಧಿ** – ವೀತರಾಗ ಭಾವದಿಂದ ಆತ್ಮನನ್ನು ಧ್ಯಾನ ಮಾಡುವುದು ಸಮಾಧಿಯಾಗಿದೆ. ಅಥವಾ ಸಮಸ್ತ ವಿಕಲ್ಪಗಳು ನಷ್ಟವಾಗುವುದು ಪರಮ ಸಮಾಧಿಯಾಗಿದೆ.

**ಸಮಿತಿ** – ಸಮೀಚೀನ ಪ್ರವೃತ್ತಿ ರೂಪ ಮುನಿಯ ಪಂಚ ಸಮಿತಿಗಳು. (ಜೈನಾಗಮ ಸಂಸ್ಕಾರ ಅ.11, ಪುಟ 98 (ಹಿಂದಿ) ನೋಡಿರಿ)

**ಸಮ್ಮೇದಗಿರಿ** – ಶಾಶ್ವತ ಸಿದ್ಧಕ್ಷೇತ್ರ ಇದೇ ಮಹಾನ್ ಕ್ಷೇತ್ರದಿಂದ ವರ್ತಮಾನದ 24ರಲ್ಲಿ 20 ತೀರ್ಥಂಕರರು ಮೋಕ್ಷಕ್ಕೆ ಹೋಗಿದ್ದಾರೆ. ಈ ಕ್ಷೇತ್ರವು ಈಗ ಝಾರ್ಖಂಡ ರಾಜ್ಯದಲ್ಲಿದೆ.

**ಸಮ್ಯಗ್ಮಿಥ್ಯಾತ್ವ** – ಮೊಸರಿನಲ್ಲಿ ಬೆಲ್ಲ, ಸಮ್ಯಕ್ತ್ವದಲ್ಲಿ ಮಿಥ್ಯಾತ್ವ ಬೆರೆತಿರುವಂತೆ.

**ಸಯೋಗ ಕೇವಲಿ** – ಯೋಗ ಸಹಿತ ಕೇವಲಿ.

**ಸಯೋಗಿ ಜಿನ** – ಮೂರೂ ಯೋಗಗಳಿಂದ ಕೂಡಿದ ಕೇವಲಿಗಳನ್ನು ಸಯೋಗಿ ಜಿನರೆಂದು ಹೇಳುತ್ತಾರೆ.

**ಸರ್ವಜ್ಞ** – ಎಲ್ಲವನ್ನು ತಿಳಿದಿರುವ ಭಗವಂತನನ್ನು ಸರ್ವಜ್ಞನೆನ್ನುತ್ತಾರೆ.

**ಸಾಕಾರ** – ಸಾಕ್ಷಾತ್.

**ಸಾತ್ವಿಕ** – ಸಾರು, ರೊಟ್ಟಿ, ಅನ್ನ, ಹಣ್ಣು, ತರಕಾರಿ, ಪಲ್ಯ ಇತ್ಯಾದಿಗಳನ್ನು ಸಾತ್ವಿಕ ಅಹಾರವೆನ್ನುತ್ತಾರೆ.

**ಸಾಧ್ಯ** – ಸಾಧಿಸಲು (ಪ್ರಾಪ್ತಿ ಮಾಡಿಕೊಳ್ಳಲು) ಯೋಗ್ಯವಾದ ಗುರಿ.

**ಸಾಧು** – 'ಆತ್ಮಾನಾಂ ಸಾಧತೀತಿ ಸಾಧುಃ' ಆತ್ಮ ಸಾಧನೆ ಮಾಡುವವರನ್ನು ಸಾಧು ಎನ್ನುತ್ತಾರೆ.

**ಸಾಮ್ಯ** – ಸಮಾನ ಭಾವ ಅಥವಾ ಸಮತಾಭಾವ.

**ಸಾಮಾಯಿಕ** – ಸಮತಾಭಾವ ಹೊಂದಿರುವುದು ಸಾಮಾಯಿಕವಾಗಿದೆ. ವಿಧಿ ಪೂರ್ವಕವಾಗಿ ಮೂರು ಹೊತ್ತು ಧ್ಯಾನ ಮಾಡುವುದು

**ಸಾರ್ವಮಯ** – ಸರ್ವಜ್ಞ.

**ಸಾಸಾದನ** – ಸಮ್ಯಗ್ದರ್ಶನದಿಂದ ಬಿಡುಗಡೆ ಮಿಥ್ಯಾತ್ವದ ಕಡೆ ಗಮನ.

**ಸಿದ್ಧ** – ಎಲ್ಲ ಎಂಟು ಕರ್ಮಗಳ ಬಂಧನವನ್ನು ನಷ್ಟ ಮಾಡಿರುವವರು ಇಂತಹ ನಿತ್ಯ ನಿರಂಜನರನ್ನು, ಪರಮಾತ್ಮರನ್ನು ಸಿದ್ಧರೆನ್ನುತ್ತಾರೆ.

**ಸಿದ್ಧಾಸನ** – ಕುಳಿತುಕೊಂಡು ಒಂದು ಕಾಲಿನ ಮೇಲೆ ಇನ್ನೊಂದು ಕಾಲನ್ನಿಟ್ಟು ಬೆನ್ನು ಹುರಿಯನ್ನು ನೇರವಾಗಿ ಇಟ್ಟುಕೊಳ್ಳುವ ಆಸನ.

**ಸಿದ್ಧಾಂಚಲ** – ಗ್ವಾಲಿಯರ್‌ನ ಪರ್ವತದಲ್ಲಿ 23 ಅಡಿ ಎತ್ತರದ ನೇಮಿನಾಥ ಭಗವಂತರ ಪ್ರತಿಮೆ ಪದ್ಮಾಸನದಲ್ಲಿ ವಿರಾಜಮಾನವಾಗಿದ್ದು ಹಾಗೂ ಇನ್ನೂ ಅನೇಕ ಮೂರ್ತಿಗಳು, ಗುಹೆಗಳು ಇದ್ದ ಈ ಪ್ರದೇಶವನ್ನು ಸಿದ್ಧಾಂಚಲವೆಂದು ಕರೆಯುತ್ತಾರೆ.

**ಸುಖ** – ಅಪಾರ ಆನಂದ.

**ಸುಬಹ, ಮಧ್ಯ, ಸಂಜೆ** – ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಾಯಂಕಾಲ.

**ಸುಪ್ರತಿಷ್ಠಿತ ಕೇವಲಿ** – ಇವರು ಗ್ವಾಲಿಯರ್‌ನ ಗೋಪಗಿರಿಯಿಂದ ಎಂಟು ಕರ್ಮಗಳನ್ನು ಕ್ಷಯಗೊಳಿಸಿ ಮುಕ್ತಿಯನ್ನು ಪಡೆದವರಾಗಿದ್ದಾರೆ.

**ಸುಸುಮ್ನಾ ಯೋಗ** – ಸೂರ್ಯ, ಚಂದ್ರ ಎರಡೂ ಸ್ವರಗಳು ಏಕಕಾಲದಲ್ಲಿ ಸಾಗುವ ಸಮಯದ ಧ್ಯಾನಸ್ಥ ಅವಸ್ಥೆ.

**ಸುಸೌಮ್ಯ** – ಬಹಳ ಸುಂದರ.

**ಸೂಕ್ಷ್ಮಕ್ರಿಯಾಪ್ರತಿಪಾತಿ** – ದ್ವಿತೀಯ ಶುಕ್ಲಧ್ಯಾನದಿಂದ ನಾಲ್ಕು ಘಾತಿ ಕರ್ಮಗಳನ್ನು ಕ್ಷಯಮಾಡಿ ಕೇವಲಜ್ಞಾನ ಪಡೆದಿರುವವರು, ಇಂತಹ ಕೇವಲಿ ಭಗವಂತರ ಆಯುಷ್ಯ ಅಂತರ್ಮುಹೂರ್ತ.

**ಸೋಪಾನ** – ಮೆಟ್ಟಿಲುಗಳು.

**ಸ್ತವನ** – ಸ್ತುತಿ.

**ಸ್ಥಾವರ** – ಒಂದು ಇಂದ್ರಿಯ ಜೀವಗಳಿಗೆ ಸ್ಥಾವರವೆನ್ನುತ್ತಾರೆ. ಉದಾ: ಪೃಥ್ವಿ, ಜಲ, ಅಗ್ನಿ, ವಾಯು ಹಾಗೂ ವನಸ್ಪತಿ. ಈ ಜೀವಗಳ ಬಳಿ ಸ್ಪರ್ಶನ ಇಂದ್ರಿಯ ಮಾತ್ರವಿರುತ್ತದೆ.

**ಸ್ಪರ್ಶನ** – ನಮ್ಮನ್ನು ಮುಟ್ಟಿದಾಗ ಉಂಟಾಗುವ ಜ್ಞಾನವು ಸ್ಪರ್ಶನ ಇಂದ್ರಿಯದಿಂದ ಆಗುತ್ತದೆ.

**ಸ್ವರ ಪಂಚ ಲಘು** – ಅ, ಇ, ಉ, ಋ, ಲು ಇವು ಐದು ಲಘು ಸ್ವರಗಳಾಗಿವೆ.

**ಸ್ವಸ್ಥ ಧ್ಯಾನ** – ಆರೋಗ್ಯಮಯ ನಿಶ್ಚಲ ಶುಭ ಧ್ಯಾನ.

**ಸ್ವಾಧೀನ** – ನಮ್ಮ ಅಧೀನ.

**ಷಡ್‌ದ್ರವ್ಯ** – ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ ಮತ್ತು ಕಾಲ.

**ಹರಿ** – ಕರ್ಮಗಳನ್ನು ಸೋಲಿಸಿದವನನ್ನು ಹರಿ ಎನ್ನುತ್ತಾರೆ.

**ಹಿತೋಪದೇಶಿ** – ಹಿತ ಅರ್ಥಾತ್ ಸುಖ ಅಥವಾ ಕಲ್ಯಾಣ ಮಾರ್ಗದ ಉಪದೇಶ ನೀಡುವವರು.

**ಹಿಂಸಾನಂದ** – ಹಿಂಸೆಯಲ್ಲಿ ಆನಂದ ಪಡೆಯುವುದು.

**ಹೇತು** – ಕಾರಣ ಅಥವಾ ಸಾಧನ.

* * *

# ಸಾಮ್ಯ ಭಾವನೆ (ಸಾಮಾಯಿಕ ಪಾಠ)

1. ಸಬ ಜೀವೋ ಕೋ ಹೋ ಕ್ಷಮಾ, ಕ್ಷಮಾ ಕರೇ ಸಬ ಜೀವ ।
ಗುಣಿಯೋಂಕೇ ಪ್ರೀತಿ ಪ್ರೇಮ ಹೋ, ಕರುಣಾ ವಹೇ ಸಜೀವ ॥

2. ದುರ್ಜನ ಮೇ ಮಾಧ್ಯಸ್ಥ ಹೋ, ಭವ ಸೇ ಭಯ ಹಿ ಅತೀವ ।
ಜಿನವರ ಐಸೀ ಭಾವನಾ, ಭಾಯೇ ಹಮ ಸಬ ಜೀವ ॥

3. ಅನಂತ–ಬಲ ನಿಜ ಮೇ ಕಹಾ, ಪ್ರಗಟ ಧ್ಯಾನ ಸೇ ಹೋಯ್ ।
ಸುಖ–ದುಃಖ ಮೇ ಸಮತಾ ಧರೇ, ಉತ್ತಮ ಸೌಖ್ಯ ಸುಜೋಯ್ ॥

4. ಜಿನವರ ಪದ ಮಮ ಹೃದಯಮೆ, ಬಸೇ ನಿತ್ಯ ಶುಭಧ್ಯಾನ ।
ಜೀವ ಬಚಾ ಚರ್ಯಾ ರಹೇ, ಬಚೇ ಸಭೀ ಕೇ ಪ್ರಾಣ ॥

5. ಶಿವ–ಮಗ ಕೇ ಅನುಕೂಲ ಸಬ, ಚಲೇ ಸಭೀ ಹಮ ಲೋಗ ।
ಸ್ವೇಚ್ಛಾಚಾರೀ–ಪನ ತಜೇ, ನಾ ಹೋ ದುರ್ಗತಿ ರೋಗ ॥

6. ಜಿನವಾಣೀ ಕೀ ಹೋ ವಿನಯ್, ಕರೇ ಭಕ್ತಿ ಸಮ್ಮಾನ ।
ಶುದ್ಧ–ಪಾಠ ಸೇ ಶಾಂತ ಯಹ, ಮನ ಬನತಾ ಧೀಮಾನ ॥

7. ರತ್ನತ್ರಯ ಕಾ ಲಾಭ ಹೋ, ಆತ್ಮ–ಲೀನ ಪರಿಣಾಮ ।
ಚಿಂತಾಮಣಿ–ಸಮ ಸೌಖ್ಯ ದೇ, ಆಗಮ ತುಮ್ಹೇ ಪ್ರಣಾಮ ॥

8. ಪಾಪ ರಹಿತ ಪರಮಾತ್ಮಾ, ವ್ಯಸನ ಕಾಮ ಸೇ ದೂರ ।
ರಾಗ–ದ್ವೇಷ ಸಬ ತಜ ದಿಯೇ, ಕರೇ ಭಕ್ತಿ ಭರಪೂರ ॥

9. ವೀತರಾಗ–ಜಿನ ಶರಣ ಮೇ, ಸರ್ವ ಕರ್ಮಕಟ ಜಾಯ್ ।
ಮೋಕ್ಷ–ಸುಪದ ಕಾ ಲಾಭ ಹೋ, ಸಮತಾ–ದಲ ಖಿಲ ಜಾಯ್ ॥

10. ಬಹಿರ–ದ್ರವ್ಯ ಆಸನ ತಥಾ, ಪೂಜಾ ವಾ ಸಮ್ಮಾನ ।
ಆತ್ಮಲೀನತಾ ಮೇ ಕಭೀ, ಉಪಯೋಗಿ ನಾ ಜಾನ ॥

11. ಶರೀರ, ಭೋಗ, ಪರಿಜನ ಸಭೀ, ಮೇರೆ ನಾ, ಮಮ ರೂಪ ।
ಮೈನ ಉನಕಾ ಕದಾಪಿ ಹೂಂ ಸ್ವಸ್ಥ ರಹಾ ನಿಜರೂಪ ॥

12. ಜ್ಞಾನ ಶುದ್ಧ ದರ್ಶನ ತಥಾ ಚರಿತ ರೂಪ ಪರಿಣಾಮ ।
ಆತ್ಮ–ಸಮಾಧಿ ಮೇ ಸದಾ, ಧ್ಯಾವೇ ಸಾಧು ಮಹಾನ್ ॥

13. ಏಕಾಕೀ–ನಿಜ ಆತ್ಮಾ, ಶಾಶ್ವತ ನಿರ್ಮಲ ಪೂರ್ಣ ।
ಪರ–ಪದಾರ್ಥ ಜಡ ರೂಪ ಹೈ, ನಶ್ವರ–ಭವ ಸಂಪೂರ್ಣ ॥

14. ಸಾಮಾಯಿಕ ಮೇ ಸಾಮ್ಯ ಹೋ, ಸಂಯಮ–ಭಾವನ ರೂಪ ।
ಆರ್ತ–ರೌದ್ರ ನ ಧ್ಯಾನ ಹೋ, ಧ್ಯಾವೇ ಶುದ್ಧ ಸುರೂಪ ॥

15. ಸಂಯೋಜಗ ಸಬ ದ್ರವ್ಯ ಯೇ, ವಿಯೋಗ–ಸಹಿ ಅನಿತ್ಯ ।
ಚಿಂತಾ, ಪೀಡಾ ದೇ ಸದಾ, ಧ್ಯಾವೇ ನಿಜ–ಗುಣ ನಿತ್ಯ ॥

16. ಸಾಂಸಾರಿಕ–ಉಲಝುನ ಸದಾ, ಭವ ವಿಕಲ್ಪಸೇ ಪೂರ್ಣ ।
ಪರ ಚಿಂತಾ ಕೋ ಛೋಡ ದೇ, ನಿಜ ಸುಖ ಹೈ ಸಂಪೂರ್ಣ ॥

17. ಸ್ವಯಂ ಕಿಯೇ ಸಬ ಕರ್ಮ ವೇ, ಸುಖ–ದುಃಖ ದೇ ಯಹ ಜ್ಞಾನ ।
ಪರ ದೇ ಸುಖ–ದುಃಖ ಜೋ ಕಹೇ, ರಹೇ ಮೂಢ ಅಂಜಾನ ॥

18. ಚಿಂತನ ಹೋ ಅಧ್ಯಾತ್ಮ ಕಾ, ಬೈರ ಅರತಿ ನಾ ಹೋಯ್ ।
ಕಿಂಚಿತ ಭೀ ನ ಫಲ ಕಭಿ – ಅನ್ಯ ದೇ ಬುದ್ಧಿ ಖೋಯ್ ॥

19. ಪರಮಾತಮ ಕೀ ಭಕ್ತಿ ಸೇ, ಪಾಪ–ಬಂಧ ಕಟ ಜಾಯ್ ।
ಪುಣ್ಯ–ಬಂಧ ಸೇ ಸುಖ ಮಿಲೇ, ಸುಗತಿ ಭವ್ಯ ವೇ ಪಾಯ್ ॥

20. ತಪ ಕರತೇ ಜಬ ಸಾಧು ವೇ, ಕರ್ಮ ಸಭೀ ಗಲ ಜಾಯ್ ।
ಉತ್ತಮ-ಫಲ ವಹ ಮೋಕ್ಷ-ಸುಖ ಮಿಲೇ ಸುಗುಣ ಜಗ ಭಾಯ್ ॥

21. ಸಮ–ದರ್ಶನ ವ ಜ್ಞಾನ ವ್ರತ, ಮೋಕ್ಷ ನಿಮಿತ್ತ ಮಹಾನ್ ।
ಉಪಾದಾನ–ನಿಜ ಆತ್ಮಾ, ಮಗ ಪುರುಷಾರ್ಥ ಪ್ರಧಾನ ॥

22. ಶಿವಮಗ ಕೀ ಯೇ ಭಾವನಾ, ಪಢೇ ಪದ್ಯ ಇಕ್ಕೀಸ ।
'ಸಾಮ್ಯ ಭಾವನಾ' ಸೇ ಲಹೇ ಅರ್ಹದ್–ಪದ ಇಕ ಈಶ ॥

ಪ್ರಶಸ್ತಿ

23. ಉರ್ಜಯಂತ ಮೇ ಶುಭ ಮನಾ, ಶಾಂತಿನಾಥ–ನಿರ್ವಾಣ ।
ಪಚ್ಚೆಸ್ ಸೌ ಅಥತೀಸ್ ಹೈ, ವರ್ಷ ವೀರ ನಿರ್ವಾಣ ॥

24. ಶುಭತಿಥಿ, ಗುರು ಆಶೀಷ ಸೇ, 'ಸಾಮ್ಯ ಭಾವನಾ' ಪೂರ್ಣ ।
'ಆರ್ಜವ' ಬನ ಶಿವ–ಪದ ಗರೂ, ಸುಖ ಪಾಊ ಸಂಪೂರ್ಣ ॥

## ಧ್ಯಾನ ದೃಶ್ಯ

ಧರ್ಮ–ಶುಕ್ಲ ಯೇ, ಹೈ ಶುಭ–ಧ್ಯಾನ ।
ಇನಕೋ ಧ್ಯಾನೇ ಮೇ ಕಲ್ಯಾಣ ॥ 1 ॥

ಆಜ್ಞಾ, ಅಪಾಯ, ವಿಪಾಕ, ಸಂಸ್ಥಾನ ।
ಜಾನೇ ಇನಕೋ ಧರ್ಮ ಸು–ಧ್ಯಾನ ॥ 2 ॥

ಅಶುಭ ವ ಶುಭ–ಮನ ಹೈ ಸಂಸಾರ ।
ಶುದ್ಧ–ಮನಸ್ ಸೇ ಭವ–ಉದ್ಧಾರ ॥ 3 ॥

ಭೋಗ ತ್ಯಾಗತಾ, ಯೋಗಿ ಕಹಾಯ ।
ಯೋಗಿ ವಹ ಧ್ಯಾನಿ ಕಹಲಾಯ ॥ 4 ॥

ಪರ ಕೋ ಪರ ವ, ರಜ–ಸಮ ಕಹನಾ ।
ಮಿಲೇ ಸ್ವತಃ ಪರ, ನಾ ವಹ ಗಹನಾ ॥ 5 ॥

ಭೋಗ್ಯ–ವಿಷಯ ಲಡ್ಡು ಸಮ ಹೋತಾ ।
ಗುಟಕ ಸಕೋ–ನ–ಬಾಹರ ಹೋತಾ ॥ 6 ॥

ನಾಶಾಗ್ರ ಹಿ ದೃಷ್ಟಿ, ಯೋಗಿ ರಖತಾ ।
ಧ್ಯಾನ–ಲೀನ ಹೋ, ನಿಜಸುಖ ಚಖತಾ ॥ 7 ॥

ವಂದ ಪಂಖ ಖಗ, ನೀಡ ಮೇ ಮೇ ಜಾಯಿ ।
ಯೋಗ–ವಶೀ ಯೋಗಿ, ಧ್ಯಾನಿ ಕಹಾಯ ॥ 8 ॥

## ಅನುಪ್ರೇಕ್ಷಾ ಚಿಂತನ

ಜೋ ಕುಚ, ದಿಖತಾ, ಶಾಶ್ವತ ನ ಹೈ ।
ಪ್ರತಿಕ್ಷಣ ಹೋತಾ ನಾಶ, ಯಹಾ ಹೈ ॥ 9 ॥

ಮರತೇ ಸಮಯ ನ ಕೋಈ ಬಚಾತಾ ।
ಅಶರಣ ಯಹ ಸಂಸಾರ ಕಹಾತಾ ॥ 10 ॥

ಚತುರ್ಗತಿ ಮೇ ಜೀವ ಭ್ರಮೆ ಯಹ ।
ಸ್ವಯಂ ಕರ್ಮ ಕಾ ಫಲ ಭೋಗೇ ವಹ ॥ 11 ॥

ಆಪ ಅಕೇಲಾ, ಕರ್ಮ ಹೈ ಕರತಾ ।
ಜೈಸೀ ಕರನೀ, ಸ್ವಯಂ ಹೀ ಭರತಾ ॥ 12 ॥

ದೇಹ ಜುದೀ ಹೈ ಆತ್ಮ ಜುದಾ ಹೈ ।
ನೀರ ದೂಧ–ಸಮ, ಮೋಹ ಮುದಾ ಹೈ ॥ 13 ॥

ಪುದ್ಗಲ–ಮಯ ಯಹ ತನ ನ ಭಾಯೇ ।
ಪದಾರ್ಥ ಘಿನೋನೆ ಸದಾ ಬಹಾಯೇ ॥ 14 ॥

ಮಿಥ್ಯಾತ್ವ ಆದಿಕ, ಆಸ್ರವ ಕಾರಣ ।
ಯೋಗ ಕಷಾಯ ತಜ, ಹೊಯ್ ನಿವಾರಣ ॥ 15 ॥

ಗುಸ್ತಿ ಸಮಿತಿ ಆದಿಕ ಜಬ ಪಾಲೇ ।
ಸಂವರ–ಮಯ ಜೀವನ ಕೋ ಡಾಲೇ ॥ 16 ॥

ಸ್ವಕಾಲ ಪಹಲೇ ಕರ್ಮ ನಿಕಾಲೇ ।
ಅವಿಪಾಕ ನಿರ್ಜರಾ ಕಾ ಅವಸರ ಲೇ ॥ 17 ॥

ತೀನ ಲೋಕ ಯಹ, ಅನಾದಿ ಸೇ ಹೈ ।
ನ ಬನ ಮಿಟತಾ ಕರ್ತಾದಿ ಸೇ ಹೈ ॥ 18 ॥

ಮೋಕ್ಷಮಾರ್ಗ ಮೇ, ಶ್ರದ್ಧಾ ಜಬ ಜಾಗೇ ।
ಬೋಧಿ ಮಿಲೇ ತಬ, ಸಮ ಭ್ರಮ ಭಾಗೇ ॥ 19 ॥

ಧರ್ಮ ಅಹಿಂಸಾ, ರತ್ನತ್ರಯ ಮಯ ।
ಪೂಜ್ಯ ಬನಾತಾ, ಹೋತಿ ಜಯ–ಜಯ ॥ 20 ॥

ಓಂ ಹೈ ಪಂಚ ಪ್ರಭು ಕಾ ರೂಪ ।
ಧ್ಯಾವೇಂ; ಬನತೇ ಪ್ರಭು–ಅನುರೂಪ ॥ 21 ॥

ಪವನ ಉದರ ಭರ, ಪೂರಕ ಹೋತಾ ।
ರುಕೇ ಉದರ ಮೇ, ಕುಂಭಕ ಹೋತಾ ॥ 22 ॥

ಧೀಮೀ ವಾಯು ಸೇ, ಉದರ ರಿಕ್ತ ಹೋ ।
ರೇಚಕ ಜಾನೋ, ಯೋಗಿ ಸ್ವಸ್ಥ ಹೋ ॥ 23 ॥

ಓಂ ಕಾ ನಿತ್ಯ, ಧ್ಯಾನ ಶುಭ ಕರನಾ ।
ಪಂಚ–ಪ್ರಭೋ ಕಾ, ಪದ ಭೀ ಗಹನಾ ॥ 24 ॥

ಹ್ರೀಂ ಅಕ್ಷರ ಚೌಬೀಸೀ ರೂಪ ।
ಧ್ಯಾತಾ ಪಾತಾ ಆಪ್ತ ಸ್ವರೂಪ ॥ 25 ॥

ಹ್ರೀಂ ಧ್ಯಾನ ಕೋ ಜೋ ಹೈ ಕರತಾ ।
ಚೌಬೀಸಿ ಪ್ರಭು ಗುಣ ಹೈ ವರತಾ ॥ 26 ॥


ಶ್ರೀಕಾರ ಶಿವ–ಲಕ್ಷ್ಮೀ ಕಹಾತಾ ।
ಧ್ಯಾನೀ ಯತಿ ಶಿವಪದ ಕೋ ಪಾತಾ ॥ 27 ॥

ಪೃಥ್ವಿ, ಅಗ್ನಿ, ವಾಯು, ಧಾರಣಾ ।
ಜಲ, ತತ್ವ ಕೀ ಕರೇ ವಿಚಾರಣಾ ॥ 28 ॥

ಧ್ಯಾನ ಮೇ ಮನ ಶುಭ–ರಂಜಿತ ಹೋನಾ ।
ಪಾಪ–ವಿಷಯೋ ಮೇ, ಕದಾ ನ ಖೋನಾ ॥ 29 ॥

ಸಮ್ಯಕ್ ಧ್ಯಾನ ಮೇ ಅಗರ ಉತರನಾ ।
"ಸಮ್ಯಕ್ ಧ್ಯಾನ ಶತಕ" ನಿತ ಪಢನಾ ॥ 30 ॥

**ಸಾಭಾರ :** ಸದಾಚಾರ ಸೂಕ್ತಿ ಕಾವ್ಯ.




## ಧ್ಯಾನದ ಮೂಲಕ ಸಮ್ಯಕ್ ಧ್ಯಾನ ಶತಕದ ಪ್ರವಚನವನ್ನು ಕೇಳಲು


**youtube:- aarjav vani**

**ಸಮ್ಯಕ್ ಧ್ಯಾನ ಶತಕ ಡೌನ್‌ಲೋಡ್ ಮಾಡಲು**

**ವೆಬ್‌ಸೈಟ್- www.aarjavvani.com**

**ಅನ್ಯ ಸ್ತುತಿ, ಸ್ತೋತ್ರ (ಅರ್ಥ ಸಹಿತ), ಕಷಾಯ, ಅಹಿಂಸಾ-ಶಿಕ್ಷಾ ಮುಂತಾದ ಅನೇಕ ಪ್ರವಚನಗಳು ಅಪ್‌ಲೋಡ್ ಆಗಿರುತ್ತದೆ.**

ಸಮ್ಯಕ್ ಧ್ಯಾನ ಶತಕ




**ಣಮೋಕಾರ ಜಪ, ಸುಪ್ರಭಾತ ಸ್ತೋತ್ರ, ಮಹಾವೀರಾಷ್ಟಕ, ಗೊಮ್ಮಟೇಶ ಸ್ತುತಿ, ದರ್ಶನ ಪಾಠ, ಮಂಗಲಾಷ್ಟಕ, ಅಧ್ಯಾಷ್ಟಕ ಸ್ತೋತ್ರ, ದೇವ-ಸ್ತುತಿ ಇವುಗಳ ಅರ್ಥ ಸಹಿತ ವಾಚನ**

## ಕಷಾಯ

| | | |
|---|---|---|
| ಇಷ್ಟೋಪದೇಶ | ಸಮಾಧಿಯಂತ್ರ | ಭಾವನಾ ದ್ವಾತ್ರಿಂಶತಿಕಾ |
| ದ್ರವ್ಯ ಸಂಗ್ರಹ | ಸ್ವಯಂಭೂ ಸ್ತೋತ್ರ | ರತ್ನಕರಂಡಕ ಶ್ರಾವಕಾಚಾರ |
| ತತ್ತ್ವಾರ್ಥಸೂತ್ರ | ತೀರ್ಥೋದಯ ಕಾವ್ಯ | ಪ್ರಶ್ನೋತ್ತರ ರತ್ನಾಮಾಲಿಕಾ |

## ಪ್ರವಚನ

| | |
|---|---|
| ಶಿಕ್ಷಾ, ಸಂಸ್ಕೃತಿ | ಜೈನ ರಾಮಾಯಣ, ಅಷ್ಟಕರ್ಮ |
| ಅಹಿಂಸಾ, ಲಕ್ಷ್ಯ | ಸೋಲಹಕಾರಣ ಭಾವನಾ |
| ಧ್ಯಾನ, ಸಲ್ಲೇಖನಾ | ಅಷ್ಟಾನ್ಹಿಕಾ, ಷಟ್ ಆವಶ್ಯಕ |
| ಸಮ್ಯಕ್‌ದರ್ಶನ, ದಶ ಧರ್ಮ | ದಾನ, ಪೂಜಾ, ಶೀಲ, ಉಪವಾಸ |

## ಗುರು ರಚಿತ ಸಾಹಿತ್ಯ

| | | |
|---|---|---|
| ಜಿನವರ ಸ್ತುತಿ | ಸಮ್ಯಕ್ ಧ್ಯಾನ ಶತಕ | ಸದಾಚಾರ ಸೂಕ್ತಿ ಕಾವ್ಯ |
| ತೀರ್ಥೋದಯ ಕಾವ್ಯ | ಧರ್ಮ ಭಾವನಾ ಶತಕ | ಆಧ್ಯಾತ್ಮಿಕ ಕವಿತೆಗಳು |


**ಪ್ರತಿದಿನ ಲೈವ್ ಪ್ರವಚನ ಕೇಳಲು aarjavvani ಚಾನಲ್‌ನ್ನು ಸಬ್‌ಸ್ಕ್ರೈಬ್ ಮಾಡಿ**

ಪ್ರತಿದಿನದ ಪ್ರವಚನ, ಗುರುಭಕ್ತಿ, ಶಂಕ ಸಮಾದಾನದ ನೇರ ಪ್ರಸಾರವನ್ನು ಮಾಡಲಾಗುತ್ತದೆ.

**aarjavvani 9174843674, 9425601161**

# ಆಚಾರ್ಯ ಶ್ರೀ 108 ಆರ್ಜವಸಾಗರ ಮಹಾರಾಜರ ಚಾತುರ್ಮಾಸದ ಸ್ಥಳಗಳು

| | | |
|---|---|---|
| 1985 | : | ಸಿದ್ಧಕ್ಷೇತ್ರ ಆಹಾರ್‌ಜೀ (ಮಧ್ಯಪ್ರದೇಶ) |
| 1986 | : | ಅತಿಶಯ ಕ್ಷೇತ್ರ ಪಪೌರಾಜೀ (ಮಧ್ಯಪ್ರದೇಶ) |
| 1987 | : | ಅತಿಶಯ ಕ್ಷೇತ್ರ ಥೂಬೋನಜೀ (ಮಧ್ಯಪ್ರದೇಶ) |
| 1988 | : | ಮಡಿಯಾಜೀ ಜಬ್ಬರ್‌ಪುರ (ಮಧ್ಯಪ್ರದೇಶ) |
| 1989 | : | ಸಿದ್ಧಕ್ಷೇತ್ರ ಕುಂಡಲಪುರ (ಮಧ್ಯಪ್ರದೇಶ) |
| 1990 | : | ಸಿದ್ಧಕ್ಷೇತ್ರ ಮುಕ್ತಾಗಿರಿ (ಮಾಹಾರಾಷ್ಟ್ರ) |
| 1991 | : | ಕೋಪರಗಾಂವ್ (ಮಹಾರಾಷ್ಟ್ರ) |
| 1992 | : | ಸಾಂಗ್ಲಿ, ನೇಮಿನಾಥನಗರ (ಮಹಾರಾಷ್ಟ್ರ) |
| 1993 | : | ಶ್ರವಣಬೆಳಗೊಳ (ಕರ್ನಾಟಕ) |
| 1994 | : | ದಾವಣಗೆರೆ (ಕರ್ನಾಟಕ) |
| 1995 | : | ಪೊನ್ನೂರುಮಲೈ (ತಮಿಳುನಾಡು) |
| 1996 | : | ಪೊನ್ನೂರುಮಲೈ (ತಮಿಳುನಾಡು) |
| 1997 | : | ಕನ್ನಲಮ್ (ತಮಿಳುನಾಡು) |
| 1998 | : | ವಿಶಾಖಾಚಾರ್ಯ ತಪೋನಿಲಯ (ತಮಿಳುನಾಡು) |
| 1999 | : | ನಲ್ಲವನ ಪಾಲ್ಯೆಯಮ್ (ತಮಿಳುನಾಡು) |
| 2000 | : | ವಿಶಾಖಾಚಾರ್ಯ ತಪೋನಿಲಯ (ತಮಿಳುನಾಡು) |
| 2001 | : | ಆರಣಿ (ತಮಿಳುನಾಡು) |
| 2002 | : | ಶಿವಮೊಗ್ಗ (ಕರ್ನಾಟಕ) |
| 2003 | : | ಕೋಪರಗಾಂವ್ (ಮಹಾರಾಷ್ಟ್ರ) |
| 2004 | : | ಟಿ.ಟಿ ನಗರ, ಭೋಪಾಲ (ಮಧ್ಯಪ್ರದೇಶ) |
| 2005 | : | ಅಶೋಕ್‌ನಗರ (ಮಧ್ಯಪ್ರದೇಶ) |
| 2006 | : | ರಾಂಚಿ (ಝಾರ್‌ಖಂಡ್) |
| 2007 | : | ದಮೋಹ (ಮಧ್ಯಪ್ರದೇಶ) |
| 2008 | : | ಗ್ವಾಲಿಯರ್ (ಮಧ್ಯಪ್ರದೇಶ) |
| 2009 | : | ಅಜಮೇರ (ರಾಜಸ್ಥಾನ) |
| 2010 | : | ಜಯಪುರ (ರಾಜಸ್ಥಾನ) |
| 2011 | : | ರಾಮಗಂಜ ಮಂಡಿ (ರಾಜಸ್ಥಾನ) |
| 2012 | : | ಸೂರತ್ (ಗುಜರಾತ) |
| 2013 | : | ಇಂದೋರ್ (ಮಧ್ಯಪ್ರದೇಶ) |
| 2014 | : | ಖಾತೇಗಾಂವ್ (ಮಧ್ಯಪ್ರದೇಶ) |
| 2015 | : | ತಾರಂಗಾಜೀ ಸಿದ್ಧಕ್ಷೇತ್ರ (ಗುಜರಾತ) |
| 2016 | : | ಮಂಡಿದೀಪ, ಭೋಪಾಲ (ಮಧ್ಯಪ್ರದೇಶ) |
| 2017 | : | ಪುರವ, (ಜಬಲ್ಪುರ) |
| 2018 | : | ಬಂಡ್ಡ (ಮಧ್ಯಪ್ರದೇಶ) |
| 2019 | : | ಅಶೋಕ್‌ನಗರ, ಭೂಪಾಲ್ |
| 2020 | : | ಲಲಿತ್‌ಪುರ (ಉತ್ತರಪ್ರದೇಶ) |
| 2021 | : | ಲಖನದೊನ್ (ಮಧ್ಯಪ್ರದೇಶ) |


ನಾನು ಏಕ(ಒಬ್ಬನೇ)ನಾಗಿದ್ದೇನೆ.
ನಾನು ಚೈತನ್ಯಮಯನಾಗಿದ್ದೇನೆ.
ನಾನು ಅನಂತ ಜ್ಞಾನಸ್ವರೂಪಿಯಾಗಿದ್ದೇನೆ.
ನಾನು ಅನಂತ ದರ್ಶನಸ್ವರೂಪಿಯಾಗಿದ್ದೇನೆ.
ನಾನು ಅರೂಪಿಯಾಗಿದ್ದೇನೆ.
ನಾನು ನಿಶ್ಚಯದಿಂದ ಶುದ್ಧನಾಗಿದ್ದೇನೆ.
ನಾನು ಅನಂತ ಸುಖಸ್ವರೂಪಿಯಾಗಿದ್ದೇನೆ.
ನಾನು ಅನಂತವೀರ್ಯಸ್ವರೂಪಿಯಾಗಿದ್ದೇನೆ.
ನನ್ನ ಸಂಬಂಧದಿಂದ ರಹಿತನಾಗಿದ್ದೇನೆ.
ನಾನು ಆನಂದದ ಭಂಡಾರವಾಗಿದ್ದೇನೆ.

**ತತ್ವಧಾರಣ**